## ಗುರುವಾರ, ೧೭ನೇ ಜುಲೈ, ೧೯೪೭

ಭಾರತದ ಸಂವಿಧಾನ ರಚನಾಸಭೆಯು ನವದೆಹಲಿಯ ಸಂವಿಧಾನ ಸಭಾಂಗಣದಲ್ಲಿ ಅಪರಾಹ್ನ ೩ ಘಂಟೆಗೆ, ಗೌರವಾನ್ವಿತ ಡಾ. ರಾಜೇಂದ್ರ ಪ್ರಸಾದ್ ಅವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

## ಮಾದರಿ ಪ್ರಾಂತೀಯ ಸಂವಿಧಾನ ತತ್ತ್ವಗಳ ಮೇಲೆ ವರದಿ– ಮುಂದುವರಿದುದು

**ಮಾನ್ಯ ಅಧ್ಯಕ್ಷರು** : ಮಾದರಿ ಪ್ರಾಂತೀಯ ಸಂವಿಧಾನ ತತ್ತ್ವಗಳ ಮೇಲಿನ ವರದಿಯ ೮ನೇ ಖಂಡವನ್ನು ಒಂದು ಸಣ್ಣ ಸಮಿತಿಗೆ ಪರಾಮರ್ಶೆಗಾಗಿ ಒಪ್ಪಿಸಿದೆವು. ಸಮಿತಿಯು ಒಂದು ತೀರ್ಮಾನಕ್ಕೆ ಬಂದು ವರದಿ ಸಲ್ಲಿಸಿದೆ ಎಂದು ತಿಳಿದುಬಂದಿದೆ. ಈ ದಿನ ಆ ವರದಿಯನ್ನು ಎಲ್ಲರಿಗೂ ಕಳುಹಿಸಲಾಗುವುದು ಮತ್ತು ಆ ಖಂಡದ ಬಗ್ಗೆ ಚರ್ಚೆಯನ್ನು ನಾಳೆ ಮಾಡಲಾಗುವುದು. ಈಗ ನಾವು ೯ನೇ ಖಂಡದ ಬಗ್ಗೆ ಚರ್ಚಿಸೋಣ.

### ಖಂಡ–೯

**ಗೌರವಾನ್ವಿತ, ಸರ್ದಾರ್ ವಲ್ಲಭಭಾಯಿ ಜೆ. ಪಟೇಲ್** (ಬಾಂಬೆ : ಸಾಮಾನ್ಯ) :

ನಾನು, ೯ನೇ ಖಂಡವನ್ನು ಮಂಡಿಸುತ್ತಿದ್ದೇನೆ. ಅದು ಹೀಗೆ ಇದೆ :

"ಈ ಸಂವಿಧಾನದ ಮೂಲಕ ಅಥವಾ ಅದರ ಮೇರೆಗೆ, ರಾಜ್ಯಪಾಲನು ತನ್ನ ಎಲ್ಲ ಪ್ರಕಾರ್ಯಗಳನ್ನು ಅಥವಾ ಅವುಗಳಲ್ಲಿ ಯಾವುದೇ ಪ್ರಕಾರ್ಯವನ್ನು ತನ್ನ ವಿವೇಚನಾನುಸಾರ ಚಲಾಯಿಸಲು ಅವನನ್ನು ಅಗತ್ಯ ಪಡಿಸುವಷ್ಟರ ಮಟ್ಟಿಗೆ ಹೊರತು, ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ಅವನಿಗೆ ನೆರವು ಮತ್ತು ಸಲಹೆಯನ್ನು ನೀಡಲು ಒಂದು ಮಂತ್ರಿಮಂಡಲ ಇರತಕ್ಕದ್ದು."

ಈ ಖಂಡವು, ರಾಜ್ಯಪಾಲರು, ತಮ್ಮ ಪ್ರಕಾರ್ಯಗಳನ್ನು ಚಲಾಯಿಸುವಲ್ಲಿ, ಅವರಿಗೆ ನೆರವು ಮತ್ತು ಸಲಹೆ ನೀಡಲು ಒಂದು ಮಂತ್ರಿಮಂಡಲ ಇರತಕ್ಕದ್ದೆಂದು ಅವಕಾಶ ಕಲ್ಪಿಸುತ್ತದೆ. ಆದರೆ, ಅದಕ್ಕೆ ಒಂದು ಅಪವಾದ ಇದೆ, ಎಂದರೆ, ಅದಕ್ಕೆ ಕೆಲವು ನಿರ್ಬಂಧಗಳಿವೆ, ಪ್ರಸ್ತಾವಿತ ಸಂವಿಧಾನಕ್ಕೆ ಅನುಸಾರವಾಗಿ, ತಮ್ಮ ವಿವೇಚನೆಯ ಪ್ರಕಾರ ಅವರು ತಮ್ಮ ಪ್ರಕಾರ್ಯಗಳನ್ನು ಅಥವಾ ಅವುಗಳಲ್ಲಿ ಯಾವುದೇ ಪ್ರಕಾರ್ಯವನ್ನು ನೆರವೇರಿಸಬೇಕಾಗುತ್ತದೆ. ಅಂಥ ವಿಷಯಕ್ಕೆ ಸಂಬಂಧಿಸಿದಂತೆ, ತರುವಾಯದ ಖಂಡಗಳಲ್ಲಿ ಉಲ್ಲೇಖಿಸಲಾಗುವುದು, ಆದ್ದರಿಂದ ಟಿಪ್ಪಣಿಯು ಉದಾಹರಣೆಯಾಗಿದೆ ಅಷ್ಟೇ. ಆದ್ದರಿಂದ ೯ನೇ ಖಂಡವನ್ನು ಟಿಪ್ಪಣಿ ಇಲ್ಲದೇ ಅಥವಾ ಟಿಪ್ಪಣಿಯ ಅಡಿಯಲ್ಲಿ ಖಂಡವನ್ನು ಮಂಡಿಸುತ್ತಿದ್ದೇನೆ, ಏಕೆಂದರೆ, ಅವುಗಳಿಗೆ ಇತರ ಖಂಡಗಳಲ್ಲಿ ಅವಕಾಶ ಕಲ್ಪಿಸಲಾಗಿದೆ. ಮಾನ್ಯರೇ, ನಾನು ೯ನೇ ಖಂಡವನ್ನು ಮಂಡಿಸುತ್ತಿದ್ದೇನೆ.

**ಮಾನ್ಯ ಅಧ್ಯಕ್ಷರು** : ಈ ಖಂಡಕ್ಕೆ ಸಂಬಂಧಿಸಿದಂತೆ ತಿದ್ದುಪಡಿಗಳನ್ನು ಸೂಚಿಸಿ ಅನೇಕ ನೋಟೀಸುಗಳು

ನನಗೆ ಬಂದಿವೆ. ಎಷ್ಟು ತಿದ್ದುಪಡಿಗಳನ್ನು ಮಂಡಿಸಲು ಪ್ರಸ್ತಾವಿಸಲಾಗಿದೆ ಎಂಬುದನ್ನು ನಾನು ತಿಳಿಯಬಯಸುತ್ತೇನೆ.

**ಶ್ರೀ ವಿ.ಐ. ಮುನಿಸ್ವಾಮಿ ಪಿಳ್ಳೈ** (ಮದ್ರಾಸ್ : ಸಾಮಾನ್ಯ) : ಅಲ್ಪಸಂಖ್ಯಾತರ ಸಮಿತಿಯ ವರದಿಯು ಇನ್ನು ಬಂದಿಲ್ಲವಾದ್ದರಿಂದ ಈಗ ನನ್ನ ತಿದ್ದುಪಡಿಯನ್ನು ಮಂಡಿಸುತ್ತಿದ್ದೇನೆ.

(ಶ್ರೀಯುತರುಗಳಾದ ಆರ್. ಕೆ. ಸಿಧ್ವಾ, ಎಚ್.ಜೆ. ಖಾಂಡೇಕರ್ ಮತ್ತು ಎಚ್.ವಿ. ಕಾಮತ್, ತಮ್ಮ ತಿದ್ದುಪಡಿಗಳನ್ನು ಮಂಡಿಸಲಿಲ್ಲ ಮತ್ತು ತಿದ್ದುಪಡಿಗಳ ಬಗ್ಗೆ ಸೂಚನೆ ಕೊಟ್ಟಿದ್ದ ಇತರ ಸದಸ್ಯರು ಉಪಸ್ಥಿತರಿರಲಿಲ್ಲ.)

**ಮಾನ್ಯ ಅಧ್ಯಕ್ಷರು :** ಶ್ರೀ ಪಾಕರ್ ಸಾಹಿಬ್ ಬಹಾದೂರ್ ಅವರು ನೋಟೀಸು ನೀಡಿದ್ದ ತಿದ್ದುಪಡಿಗೆ ಸಂಬಂಧಿಸಿದಂತೆ ಹೇಳುವುದಾದರೆ, ಇದು ತಿದ್ದುಪಡಿಗೆ ತಿದ್ದುಪಡಿಯಾಗಿದ್ದು, ಇದನ್ನು ಮಂಡಿಸಿರಲೇ ಇಲ್ಲ. ಆದ್ದರಿಂದ ಇದನ್ನು ಈಗ ಮಂಡಿಸುವಂತಿಲ್ಲ. ಯಾವುದೇ ತಿದ್ದುಪಡಿಯನ್ನು ಮಂಡಿಸದಿದ್ದುದರಿಂದ, ಮೂಲತಃ ಮಂಡಿಸಲಾಗಿದ್ದ ಖಂಡದ ಚರ್ಚೆಗೆ ಅವಕಾಶ ಇದೆ. (ಸ್ವಲ್ಪ ಸಮಯದ ಅನಂತರ) ಯಾರೊಬ್ಬರೂ ಈ ಬಗ್ಗೆ ಮಾತನಾಡಲು ಇಚ್ಛಿಸದಿದ್ದುದರಿಂದ ಮತಕ್ಕೆ ಹಾಕಲಾಗುವುದು.

**ಮಾನ್ಯ ಅಧ್ಯಕ್ಷರು :** ಪ್ರಶ್ನೆ ಏನೆಂದರೆ, "ಖಂಡ ೯ನ್ನು ಅಂಗೀಕರಿಸಬೇಕಾಗಿದೆ"

ಪ್ರಸ್ತಾವವನ್ನು ಅಂಗೀಕರಿಸಲಾಯಿತು.

## ಖಂಡ–೧೦

**ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಜೆ. ಪಟೇಲ್ :** *ಮಾನ್ಯರೆ ನಾನು, ೧೦ನೇ ಖಂಡವನ್ನು ಅಂಗೀಕರಿಸುವುದಕ್ಕಾಗಿ ಮಂಡಿಸುತ್ತಿದ್ದೇನೆ. ಈ ರೀತಿ ಇದೆ:

"ಒಂದು ವಿಷಯವು, ರಾಜ್ಯಪಾಲರ ವಿವೇಚನಾನುಸಾರ ನಿರ್ವಹಿಸಬೇಕಾದುದೇ ಅಥವಾ ಅಲ್ಲವೇ ಎಂಬ ಪ್ರಶ್ನೆಯು ಉದ್ಭವಿಸಿದರೆ, ರಾಜ್ಯಪಾಲರು ತಮ್ಮ ವಿವೇಚನಾನುಸಾರ ಕೈಗೊಂಡ ತೀರ್ಮಾನವು ಅಂತಿಮವಾದುದಾಗಿರತಕ್ಕದ್ದು."

ಭಾಷೆ ಕುರಿತಂತೆ ಕೆಲವು ಸಂಶಯಗಳು ಉದ್ಭವಿಸಿವೆ, ಆದರೆ ತಾತ್ವಿಕವಾಗಿ ಒಪ್ಪಿಕೊಂಡಿದ್ದಾರೆ. ಅಂತಿಮ ಕರಡನ್ನು ಸಿದ್ಧಪಡಿಸಿದಾಗ, ಭಾಷೆಯನ್ನು ಕುರಿತು ಪರಿಶೀಲಿಸಬಹುದಾಗಿದೆ ಎಂಬುದು ನನ್ನ ಅಭಿಪ್ರಾಯ. ತತ್ತ್ವಕ್ಕೆ ಸಂಬಂಧಿಸಿದಂತೆ ಈ ಹೇಳಿಕೆಯಲ್ಲಿ ಯಾವುದೇ ದೋಷ ಇದೆ ಎಂಬುದಕ್ಕೆ ಆಧಾರಕ್ಕೆ ಯಾವುದೇ ಕಾರಣಗಳಿಲ್ಲ. ಮಾನ್ಯರೆ ಇದನ್ನು ಮಂಡಿಸಿರುವೆ.

ಪ್ರಸ್ತಾವವನ್ನು ಅಂಗೀಕರಿಸಲಾಯಿತು.

## ಖಂಡ–೧೧

**ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಜೆ. ಪಟೇಲ್ :** ಮಾನ್ಯರೆ ನಾನು, ೧೧ನೇ ಖಂಡವನ್ನು ಅಂಗೀಕರಿಸುವುದಕ್ಕಾಗಿ ಮಂಡಿಸುತ್ತಿದ್ದೇನೆ. ಅದು ಈ ಮುಂದಿನಂತಿದೆ:

"ಮಂತ್ರಿಗಳು ಯಾವುದಾದರೂ ಸಲಹೆಯನ್ನು ನೀಡಿದ್ದರೇ ಮತ್ತು ಹಾಗೆ ನೀಡಿದ್ದರೆ, ಯಾವ ಸಲಹೆಯನ್ನು ನೀಡಿದ್ದರು ಎಂಬ ಪ್ರಶ್ನೆಯನ್ನು ಕುರಿತು ಯಾವುದೇ ನ್ಯಾಯಾಲಯವು ವಿಚಾರಣೆ ಮಾಡತಕ್ಕದ್ದಲ್ಲ."

ಮಂತ್ರಿಗಳು ರಾಜ್ಯಪಾಲರಿಗೆ ನೀಡಿದ ಸಲಹೆಯನ್ನು ನ್ಯಾಯಾಲಯವು ಪರಿಗಣಿಸಬೇಕಾದುದಲ್ಲ ಎಂಬುದು ಸ್ಪಷ್ಟವಾಗಿದೆ. ಈ ಖಂಡ ಎಷ್ಟು ಸರಳವಾಗಿದೆ ಎಂದರೆ, ಇದಕ್ಕೆ ಯಾವುದೇ ವಿವರಣೆಯ ಅಗತ್ಯವಿಲ್ಲ. ಮಾನ್ಯರೇ ಇದನ್ನು ಮಂಡಿಸಿದ್ದೇನೆ.

ಪ್ರಸ್ತಾವವನ್ನು ಅಂಗೀಕರಿಸಲಾಯಿತು.

## ಖಂಡ–೧೨

**ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಜೆ. ಪಟೇಲ್** : ಮಾನ್ಯರೆ ನಾನು, ೧೨ನೇ ಖಂಡವನ್ನು ಅಂಗೀಕರಿಸುವುದಕ್ಕಾಗಿ ಮಂಡಿಸುತ್ತಿದ್ದೇನೆ. ಅದು ಈ ಮುಂದಿನಂತಿದೆ:

"ರಾಜ್ಯಪಾಲರು ಮಂತ್ರಿಗಳನ್ನು ಆಯ್ಕೆ ಮಾಡತಕ್ಕದ್ದು ಮತ್ತು ಅವರನ್ನು ಕರೆಯತಕ್ಕದ್ದು ಮತ್ತು ರಾಜ್ಯಪಾಲರು ಇಷ್ಟ ಪರ್ಯಂತ ಪದಧಾರಣ ಮಾಡತಕ್ಕದ್ದು."

ಪ್ರಸ್ತಾವಕ್ಕೆ ಯಾವುದೇ ವಿವರಣೆ ಅಗತ್ಯವಿಲ್ಲ ಮತ್ತು ಇದಕ್ಕೆ ಯಾವುದೇ ವಿರೋಧವಿಲ್ಲವೆಂದು ಭಾವಿಸಿದ್ದೇನೆ. ಆದ್ದರಿಂದ, ಮಾನ್ಯರೇ ಇದನ್ನು ಮಂಡಿಸಿದ್ದೇನೆ.

**ಶ್ರೀ ಅಜೀಜ್ ಅಹ್ಮದ್ ಖಾನ್** (ಸಂಯುಕ್ತ ಪ್ರಾಂತ್ಯಗಳು : ಮುಸ್ಲಿಮ್) *[ಮಾನ್ಯ ಅಧ್ಯಕ್ಷರೆ, ನಿಮ್ಮ ಮುಂದಿರುವ ನಿರ್ಣಯದಲ್ಲಿ, ರಾಜ್ಯಪಾಲರು ತಮ್ಮ ಮಂತ್ರಿಗಳನ್ನು ನೇಮಕಮಾಡತಕ್ಕದ್ದು ಮತ್ತು ರಾಜ್ಯಪಾಲರ ಇಷ್ಟ ಪರ್ಯಂತ ಪದದಲ್ಲಿ ಮುಂದುವರಿಯತಕ್ಕದ್ದು ಎಂದು ಹೇಳಲಾಗಿದೆ. "ರಾಜ್ಯಪಾಲರ, ಮಂತ್ರಿಗಳು, ವರ್ಗಾವಣೆ ಮಾಡಲಾಗದ ಏಕಮತದ ಮೂಲಕ ವಿಧಾನಸಭೆಯಿಂದ ಆಯ್ಕೆಯಾಗತಕ್ಕದ್ದು" ಎಂದು ಈ ನಿರ್ಣಯಕ್ಕೆ ಒಂದು ತಿದ್ದುಪಡಿಯನ್ನು ನಾನು ಮಂಡಿಸುತ್ತಿದ್ದೇನೆ. ಗೌರವಾನ್ವಿತ ಸರ್ದಾರ್ ವಲ್ಲಭಬಾಯಿ ಪಟೇಲ್ ಅವರು ಮಂಡಿಸಿದ ಈ ನಿರ್ಣಯವು, ಮಂತ್ರಿಗಳನ್ನು ನೇಮಕ ಮಾಡುವಲ್ಲಿ ಇಂಗ್ಲಿಷ್ ಸಂಸದೀಯ ವ್ಯವಸ್ಥೆಯನ್ನು ಅನುಸರಿಸಿ ಮಾಡಿದ್ದಲ್ಲ. ಇಂಗ್ಲಿಷ್ ಸಂವಿಧಾನದ ಪ್ರಕಾರ, ಸಾರ್ವತ್ರಿಕ ಚುನಾವಣೆಗಳು ನಡೆದ ತರುವಾಯ, ಹೌಸ್ ಆಫ್ ಕಾಮನ್ಸ್‌ನಲ್ಲಿನ ಪಕ್ಷಗಳ ಸಂಖ್ಯೆಯನ್ನು ಖಚಿತಪಡಿಸಿಕೊಂಡು, ಯಾವುದು ಅತ್ಯಂತ ದೊಡ್ಡ ಪಕ್ಷ ಎಂಬುದನ್ನು ಅಥವಾ ಯಾವುದಾದರೂ ಒಂದು ಪಕ್ಷವು ಇನ್ನೊಂದು ಪಕ್ಷದ ಜೊತೆ ಸೇರಿ ಅಧಿಕಾರ ನಡೆಸಲು ಸಾಧ್ಯವಿದೆಯೋ ಎಂಬುದನ್ನು ಕಂಡುಕೊಳ್ಳಲು ಪ್ರಯತ್ನಿಸಲಾಗುತ್ತದೆ; ಅಂಥ ಪಕ್ಷಕ್ಕೆ ಪ್ರಧಾನ ಮಂತ್ರಿಯನ್ನು ನೇಮಕಮಾಡಲು ಅಧಿಕಾರ ಇರುತ್ತದೆ. ಅವರು ತಮ್ಮ ಸಹೋದ್ಯೋಗಿಗಳ ಹೆಸರನ್ನು ಶಿಫಾರಸ್ಸು ಮಾಡುತ್ತಾರೆ. ಅವರ ಶಿಫಾರಸ್ಸಿನ ಪ್ರಕಾರ ಮಂತ್ರಿಮಂಡಲದ ರಚನೆಯಾಗುತ್ತದೆ. ಅದೇ ರೀತಿಯಾಗಿ ಈ ವಿಧಾನವನ್ನೇ ನಮ್ಮ ಸಂವಿಧಾನಕ್ಕಾಗಿ ಪ್ರಸ್ತಾವಿಸಲಾಗಿದೆ. ಆದರೆ, ನನ್ನ ಅಭಿಪ್ರಾಯದ ಪ್ರಕಾರ ಈ ತಿದ್ದುಪಡಿಯಲ್ಲಿ ಒಂದು ಹೊಸ ವಿಧಾನವನ್ನು ತರಲಾಗಿದೆ. ಈ ವಿಧಾನವು ಅನುಷ್ಠಾನಗೊಂಡಿರುವ ಅನೇಕ ಸ್ಥಳಗಳು ಈ ಜಗತ್ತಿನಲ್ಲಿವೆ. ಉದಾಹರಣೆಗಾಗಿ, ಮಾನ್ಯರೇ, ಅಮೇರಿಕದಲ್ಲಿಯೂ ಈ ವಿಧಾನವು ಅನುಷ್ಠಾನಗೊಂಡಿದೆ ಎಂದು ತಿಳಿದುಬರುತ್ತದೆ. ಮಂತ್ರಿಗಳ ನೇಮಕವನ್ನು ನಾಮನಿರ್ದೇಶನದ ಮೂಲಕ ಮಾಡುವಂತಿಲ್ಲ. ಪ್ರತಿಯೊಂದು ಮತವನ್ನು ಪರಿಗಣನೆಗೆ ತೆಗೆದುಕೊಂಡು ಮಂತ್ರಿಗಳನ್ನು ಚುನಾಯಿಸಲಾಗಿರುತ್ತದೆ. ಅದೇ ರೀತಿಯಾಗಿ ಸ್ವಿಟ್ಜರ್‌ಲೆಂಡ್ ಮತ್ತು ಆಸ್ಟ್ರಿಯಾಗಳಲ್ಲಿ ಮಂತ್ರಿಗಳನ್ನು ಆಯ್ಕೆ ಮಾಡಲಾಗುತ್ತಿದೆ. ಮಾನ್ಯರೇ, ನೀವು ಈ ನಿಟ್ಟಿನಲ್ಲಿ ವಿಚಾರ ಮಾಡುವುದಾದರೆ, ಧಾರ್ಮಿಕ ಗುಂಪುಗಳು ಹಾಗೂ ವರ್ಗ–ಹಿತಾಸಕ್ತಿ ಇರುವ ಎಲ್ಲ ದೇಶಗಳು ಈ ವ್ಯವಸ್ಥೆಯನ್ನು ಅಂಗೀಕರಿಸಿರುವುದು ಕಂಡುಬರುತ್ತದೆ. ಯಾರ ಪರವಾಗಿ ಮಂತ್ರಿಯು ಆಡಳಿತ ನಡೆಸಬೇಕೋ ಅವರು ಮಂತ್ರಿಮಂಡಲದಲ್ಲಿ ವಿಶ್ವಾಸವನ್ನು ಪಡೆದುಕೊಳ್ಳಬೇಕಾದರೆ, ಅವರ ನೇಮಕದಲ್ಲಿ ಅವರು ಮೇಲುಗೈ ಸಾಧಿಸಿರಬೇಕಾಗುತ್ತದೆ. ಇಂಗ್ಲಿಷ್ ಪ್ರಜಾಪ್ರಭುತ್ವ ವ್ಯವಸ್ಥೆಯು ಭಾರತಕ್ಕೆ ಸೂಕ್ತವಾಗುವುದಿಲ್ಲ ಎಂದು ಪ್ರಬುದ್ಧ ವಿವೇಚನೆಯಿಂದ ಪರಿಗಣಿಸಿದಾಗ ತಿಳಿಯುತ್ತದೆ ಎಂಬುದು ನನಗೆ ಮನವರಿಕೆಯಾಗಿದೆ. ದೇಶದಲ್ಲಿ ಗಲಭೆ ಹಾಗೂ ರಕ್ತಪಾತಗಳಿಗೆ ಕಾರಣವಾದ ಇಂಥ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ನಾವು ನೋಡಿದ್ದೇವೆ. ಸರ್ಕಾರಿ ವ್ಯವಸ್ಥೆಯು, ನಮ್ಮ ಅಸಾಧಾರಣ ಪ್ರತಿಭೆಯ ಪ್ರತಿರೂಪವಾಗಿರಬೇಕಿತ್ತು. ಆದರೆ, ಬಹುಶಃ ಪರಸ್ಪರ ದ್ವೇಷ ಮತ್ತು ವೈಮನಸ್ಸುಗಳು ಹುಟ್ಟಿಕೊಂಡವು ಇಲ್ಲವೆ ಅವು ಹೆಚ್ಚಾದವು. ಆದ್ದರಿಂದ, ಮಂತ್ರಿಗಳು, ಸಾರ್ವತ್ರಿಕ ಮತದಾನದ ಮೂಲಕ ಆಯ್ಕೆಯಾದವರಾಗಿರ ತಕ್ಕದ್ದೆಂಬುದು ಸೂಕ್ತವಾಗುತ್ತದೆ. ಮಂತ್ರಿಗಳು ಮತದಾರರ ಸಹಾನುಭೂತಿ ಉಳ್ಳವರಾಗಿರುತ್ತಾರೆಂಬ ಅನುಕೂಲಕ್ಕೆ

ಈ ವ್ಯವಸ್ಥೆ ಅವಕಾಶ ಕೊಡುತ್ತದೆ. ಈ ವ್ಯವಸ್ಥೆಯು ಪ್ರಜಾಪ್ರಭುತ್ವದ ತತ್ತ್ವಗಳಿಗೆ ಸುಸಂಗತವಾಗುವುದು. ಆದರೆ, ಇದನ್ನು ಒಪ್ಪಿಕೊಳ್ಳದಿದ್ದರೆ ಮತ್ತು ಇಂಗ್ಲಿಷ್ ವ್ಯವಸ್ಥೆಯನ್ನು ಅಂಗೀಕರಿಸಿದ್ದಾದರೆ, ನಮಗೆ ಇದು ಸೂಕ್ತ ವ್ಯವಸ್ಥೆಯಾಗಲಾರದು ಎಂಬ ಭಯವಿದೆ.

ಮಾನ್ಯರೆ, ಪ್ರಸ್ತುತ ಪಕ್ಷಗಳಲ್ಲಿ ಕೆಲವೇ ಕೆಲವು ಪಕ್ಷಗಳು ಯಾವುದೇ ರಾಜಕೀಯ ತತ್ತ್ವಗಳ ಮೇಲೆ ಆಧರಿತವಾಗಿವೆ. ಅವುಗಳಲ್ಲಿ, ಬಹಳಷ್ಟು ಪಕ್ಷಗಳು ಧಾರ್ಮಿಕ ನಂಬಿಕೆ ಮೇಲೆ ಅವಲಂಬಿತವಾಗಿವೆ. ಈ ಧಾರ್ಮಿಕ ಗುಂಪುಗಳು ಶತಮಾನಗಳಿಂದಲೂ ಅಸ್ತಿತ್ವದಲ್ಲಿದ್ದು ಅನಾದಿ ಕಾಲದಿಂದಲೂ ಹಾಗೆಯೇ ಮುಂದುವರಿದಿವೆ. ಅಸ್ಪೃಶ್ಯರು ಅನೇಕ ಶತಮಾನಗಳಿಂದಲೂ ಇಲ್ಲಿಯೇ ಜೀವಿಸುತ್ತಿದ್ದಾರೆಂಬುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಸಂವಿಧಾನದ ರಚನೆಯಾದ ಕೂಡಲೇ, ಧಾರ್ಮಿಕ ಸಮೂಹಗಳು ಮಾಯವಾಗಿ, ರಾಜಕೀಯ ಹಾಗೂ ಆರ್ಥಿಕ ತತ್ತ್ವಗಳ ಆಧಾರದ ಮೇಲೆ ಪಕ್ಷಗಳು ರೂಪುಗೊಳ್ಳುತ್ತವೆ ಎಂದು ತಿಳಿಯುವುದು ಅಸಂಗತ. ಪಕ್ಷಗಳು ರಾಜಕೀಯ ತತ್ತ್ವಗಳ ಆಧಾರದ ಮೇಲೆ ಮಾತ್ರವೇ ಸಂಯೋಜಿತವಾಗಿರುವ ಇಂಗ್ಲಿಷ್ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಇಲ್ಲಿಯೂ ನೆಲೆಗೊಳಿಸಬೇಕೆಂಬ ಅಥವಾ ಅಂಥ ಪರಿಸ್ಥಿತಿಗಳನ್ನು ಇಲ್ಲಿಯೂ ಸೃಜಿಸಬೇಕೆಂಬ ವಿಚಾರವು ಅಪಾಯಕಾರಿ ಪ್ರಯೋಗವಾಗಿದೆ. ಆಸ್ಟ್ರಿಯಾ ಮತ್ತು ಸ್ವಿಟ್ಜರ್‌ಲೆಂಡ್‌ಗಳಂಥ ದೇಶಗಳಲ್ಲಿ ತಮ್ಮ ಭಿನ್ನಾಭಿಪ್ರಾಯಗಳನ್ನು ಬದಿಗೊತ್ತಿ, ಯಶಸ್ವಿಯಾಗಿ ಮಂತ್ರಿಮಂಡಲಕ್ಕೆ ಚುನಾವಣೆ ನಡೆಸುವಂಥ ಈ ವ್ಯವಸ್ಥೆಯನ್ನು ಅಂಗೀಕರಿಸಲಾಗಿದೆ.

ಮಂತ್ರಿಯಾಗಿ ಒಬ್ಬ ನಿರ್ದಿಷ್ಟ ಅಭ್ಯರ್ಥಿಯನ್ನು ಚುನಾಯಿಸುವುದಕ್ಕಾಗಿ ಒಬ್ಬ ವ್ಯಕ್ತಿಯು ಮತ ಚಲಾಯಿಸಿದರೆ, ಮುಂಬರುವ ದಿನಗಳಲ್ಲಿ ಅವನಿಂದ ಸ್ವಲ್ಪವಾದರೂ ನಿರೀಕ್ಷೆಯನ್ನು ಇಟ್ಟುಕೊಂಡಿರುವುದು ಮತ್ತು ಆತನು (ಮಂತ್ರಿಯು) ಪ್ರತಿಯಾಗಿ ಸ್ವಲ್ಪವಾದರೂ ತಮಗೆ ಒಳ್ಳೆಯದನ್ನು ಮಾಡುತ್ತಾನೆಂದು ನಂಬಿರುವುದು ಸಹಜವಾಗಿದೆ. ಆದ್ದರಿಂದ ಅಂಥ ವ್ಯವಸ್ಥೆಯನ್ನು ಭಾರತದಲ್ಲಿಯೂ ಅಳವಡಿಸುವುದು ಹೆಚ್ಚು ಒಳ್ಳೆಯದು. ಇಂಗ್ಲಿಷ್ ಶಿಕ್ಷಣದಿಂದಾಗಿ ನಮ್ಮದೇ ಆದ ವ್ಯವಸ್ಥೆಯನ್ನು ಬೆಳೆಸಿಕೊಳ್ಳಲು ಸಾಧ್ಯವಾಗಲಿಲ್ಲ. ಅವರು ಯಾವ ವ್ಯವಸ್ಥೆಯ ಮೂಲಕ ಈ ಗುರಿಯನ್ನು ಸಾಧಿಸಿದ್ದಾರೋ ಆ ವ್ಯವಸ್ಥೆಯನ್ನು ಭಾರತಕ್ಕೂ ಅನ್ವಯಿಸಿ ಅಂಥ ಗುರಿಯನ್ನು ಸಾಧಿಸಬೇಕೆಂದು ಇಂಗ್ಲಿಷ್ ಜನರು ಭಾವಿಸಿದ್ದರು. ಅದೇ ರೀತಿ ಅವರು ಕಾರ್ಯಪ್ರವೃತ್ತರಾಗಿ ತಮ್ಮ ಪ್ರಯತ್ನದಲ್ಲಿ ಯಶಸ್ವಿಯಾದರು. ಇಂಗ್ಲಿಷ್ ಜನರು ಅಂಗೀಕರಿಸಿದ ಈ ವಿಧಾನವನ್ನು ಬಿಟ್ಟು, ಇನ್ನೂ ಉತ್ತಮ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಬೇಕಾಗಿದೆ. ಸಾರ್ವತ್ರಿಕ ಮತದಾನದ ಮೂಲಕ ಮಂತ್ರಿಗಳನ್ನು ಚುನಾಯಿಸುವುದು ಇನ್ನೂ ಉತ್ತಮ ವ್ಯವಸ್ಥೆಯಾಗುವುದೆಂಬ ಭರವಸೆ ನನಗೆ ಇದೆ. ಆದ್ದರಿಂದ, ನಾನು ಪ್ರಸ್ತಾವಿಸಿರುವ ತಿದ್ದುಪಡಿಯನ್ನು ಸದನವು ಅಂಗೀಕರಿಸುವುದೆಂಬ ಆಶಯ ನನಗಿದೆ.

ಈ ಸಂದರ್ಭದಲ್ಲಿ ಇನ್ನೊಂದು ಮಾತು ಹೇಳಬೇಕಾಗುತ್ತದೆ. ನಿರ್ಣಯವನ್ನು ಮಂಡಿಸಬೇಕಾದ ಸಮಯದಲ್ಲಿ, ಈ ಬಗ್ಗೆ ವಿಚಾರವಿನಿಮಯ ಮಾಡಿಕೊಳ್ಳಲು ಸಾಕಷ್ಟು ಕಾಲಾವಕಾಶವನ್ನು ನಮಗೆ ಕೊಟ್ಟಿದ್ದರೆ ತಿದ್ದುಪಡಿಯ ಕರಡನ್ನು ಇನ್ನೂ ಸೂಕ್ತವಾಗಿ ಸಿದ್ಧಪಡಿಸಬಹುದಿತ್ತು. ಆದ್ದರಿಂದ ನಮ್ಮ ತಿದ್ದುಪಡಿಯಲ್ಲಿರುವ ಪದಗಳ ಕಡೆಗೆ ಗಮನಹರಿಸುವ ಅಗತ್ಯವಿಲ್ಲ. ವಾಸ್ತವಿಕವಾಗಿ ಹೇಳುವುದಾದರೆ ನನ್ನ ಈ ತಿದ್ದುಪಡಿಯ ವಿವರಗಳನ್ನು ನೀವು ಗಮನಿಸಬೇಕಾಗಿಲ್ಲ. ನನ್ನ ತಿದ್ದುಪಡಿಗೆ ಆಧಾರವಾಗಿರುವ ತತ್ತ್ವಗಳನ್ನು ಒಪ್ಪುವುದಾದರೆ, ವಿವರಗಳ ಬಗ್ಗೆ ಇರುವ ಗೊಂದಲವು ತಾನಾಗಿಯೇ ಮಾಯವಾಗುತ್ತದೆ. ದಯವಿಟ್ಟು ತಿದ್ದುಪಡಿಯ ಹಿಂದಿರುವ ತತ್ತ್ವಗಳನ್ನು ತಾವು ಗಮನಿಸಬೇಕು. ಮೂಲ ನಿರ್ಣಯದಲ್ಲಿ ಮಂತ್ರಿಗಳ ನಾಮನಿರ್ದೇಶನದ ಬಗ್ಗೆಯಾಗಲೀ ಅಥವಾ ಅವರ ಚುನಾವಣೆಯ ಬಗ್ಗೆಯಾಗಲೀ ಏನನ್ನೂ ಹೇಳಿಲ್ಲ. ಮಾನ್ಯರೆ, ನನ್ನ ತಿದ್ದುಪಡಿಗೆ ಆಧಾರವಾಗಿರುವ ತತ್ತ್ವಗಳನ್ನು ತಾವು ಅನುಮೋದಿಸುವುದಾದರೆ, ಅಂತಿಮ ಕರಡನ್ನು ಸಿದ್ಧಪಡಿಸುವ ಕಾಲದಲ್ಲಿ, ಎಲ್ಲ ವಿಷಯವನ್ನು ಸರಿಯಾದ ಕ್ರಮದಲ್ಲಿ ಅಳವಡಿಸಲಾಗುತ್ತದೆ.]*

**ಶ್ರೀ ಕೆ.ಟಿ. ಎಮ್ ಅಹಮದ್ ಇಬ್ರಾಹಿಮ್ ಸಾಹಿಬ್ ಬಹಾದೂರ್** (ಮದ್ರಾಸ್ : ಮುಸ್ಲಿಮ್) : ಮಾನ್ಯ ಅಧ್ಯಕ್ಷರೆ, ನಾನು ಈ ತಿದ್ದುಪಡಿಯನ್ನು ಮಂಡಿಸಬಯಸುತ್ತಿದ್ದೇನೆ.

"೧೨ನೇ ಖಂಡಕ್ಕೆ (ಶ್ರೀ ಅಜೀಜ್ ಅಹ್ಮದ್ ಖಾನ್ ಅವರು ಈಗಷ್ಟೇ ಪ್ರಸ್ತಾವಿಸಿದ ತಿದ್ದುಪಡಿ) ಪ್ರಸ್ತಾವಿಸಿದ ತಿದ್ದಪಡಿಯ ಕೊನೆಯಲ್ಲಿ, 'ಮತ್ತು ಪ್ರಾಂತೀಯ ವಿಧಾನಮಂಡಲಕ್ಕೆ ಜವಾಬ್ದಾರರಾಗಿರತಕ್ಕದ್ದು' ಎಂಬ ಪದಗಳನ್ನು ಸೇರಿಸತಕ್ಕದ್ದು."

ಪ್ರಜಾಪ್ರಭುತ್ವದ ಮೂಲಭೂತ ತತ್ತ್ವಗಳ ಮೇಲೆ ಆಧರಿತವಾಗಿರುವ ಅತ್ಯಂತ ಸರಳ ತಿದ್ದುಪಡಿ ಇದಾಗಿದೆ. ಮಾನ್ಯರೆ, ಮಂತ್ರಿಗಳು ವಿಧಾನಮಂಡಲಕ್ಕೆ ಹೊಣೆಗಾರರಾಗಿರತಕ್ಕದ್ದು. ಈ ಮೂಲಭೂತ ತತ್ತ್ವವು ಸಮಗ್ರ ಜನಸಂಖ್ಯೆಯ ಹಕ್ಕುಗಳ ಮೇಲೆ ಪರಿಣಾಮ ಬೀರುತ್ತದೆ.

ಈಗ, ವರದಿಯಲ್ಲಿ ವಿವರಿಸಿರುವ ತತ್ತ್ವಗಳು, ರಾಜ್ಯದ ಎಲ್ಲ ಅಧಿಕಾರಗಳನ್ನು ರಾಜ್ಯಪಾಲರಲ್ಲಿ ನಿಹಿತಗೊಳಿಸುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ರಾಜ್ಯದ ಎಲ್ಲ ಅಧಿಕಾರಗಳು ಏಕೈಕ ವ್ಯಕ್ತಿಯಲ್ಲಿ ಕೇಂದ್ರೀಕೃತವಾಗಿವೆ. ಅವನು ಎಷ್ಟೇ ಪ್ರಖ್ಯಾತ ವ್ಯಕ್ತಿಯಾಗಿರಲಿ ಅಥವಾ ಅವನು ಪ್ರಜಾಪ್ರಭುತ್ವದ ಯಾವುದೇ ವಿಧಾನದಿಂದ ಚುನಾಯಿತನಾಗಿರಲಿ, ಏಕೈಕ ವ್ಯಕ್ತಿಯಲ್ಲಿ ಹಾಗೆ ಅಧಿಕಾರಗಳು ಕೇಂದ್ರೀಕೃತವಾಗುವುದು ರಾಷ್ಟ್ರಕ್ಕೆ ಅಪಾಯಕಾರಿ. ರಾಜ್ಯಪಾಲರನ್ನು, ಜನರು ಆಯ್ಕೆ ಮಾಡುವುದರಿಂದ ಅವರು ವಿವೇಚನಾಧಿಕಾರಗಳನ್ನು ದುರುಪಯೋಗಿಸಿಕೊಳ್ಳುವ ಸಂಭವವಿರುವುದಿಲ್ಲವೆಂದು ಪ್ರಸ್ತಾವಿತ ಸಂವಿಧಾನದಲ್ಲಿ ಇದೆ ಎಂದು ಖಂಡ ೯ಕ್ಕೆ ಮಾಡಿದ ಟಿಪ್ಪಣಿಯಲ್ಲಿ ಹೇಳಿರುವುದು ನಿಜ. ಆದರೆ, ಯಾವುದೇ ವಿಧಾನದ ಮೂಲಕ ಆ ವ್ಯಕ್ತಿಯು ಚುನಾಯಿತನಾಗಿರಲಿ, ಅಂಥ ಅಧಿಕಾರಗಳನ್ನು ಒಬ್ಬ ವ್ಯಕ್ತಿಯಲ್ಲಿಯೇ ನಿಹಿತಗೊಳಿಸುವುದು ಅಪಾಯಕಾರಿ ಎಂಬುದನ್ನು ಒಪ್ಪಿಕೊಳ್ಳಲೇಬೇಕಾಗುತ್ತದೆ.

ಅಷ್ಟೇ ಅಲ್ಲದೆ, ೧೩ನೇ ಖಂಡದಲ್ಲಿಯೂ ಈ ರೀತಿ ಹೇಳಲಾಗಿದೆ. ಎಂದರೆ, ಸಾಮಾನ್ಯವಾಗಿ ರಾಜ್ಯಪಾಲರಿಗೆ ಜವಾಬ್ದಾರಿಯುತ ಸರ್ಕಾರದ ಒಡಂಬಡಿಕೆಗಳಿಂದ ಮಾರ್ಗದರ್ಶನ ದೊರೆಯುವುದು. ಆದರೆ, ಅವರು ಅಂಥ ಒಡಂಬಡಿಕೆಗಳನ್ನು ಪಾಲಿಸುವ ಬಗ್ಗೆ ಅಗತ್ಯ ಒತ್ತಾಯ ಇರುವುದಿಲ್ಲ. ರಾಜ್ಯಪಾಲರು ಒಡಂಬಡಿಕೆಗಳನ್ನು ಅನುಸರಿಸಿದ್ದಾರೆಯೇ ಅಥವಾ ಇಲ್ಲವೇ ಎಂಬ ಬಗ್ಗೆ ಭಿನ್ನಾಭಿಪ್ರಾಯವಿದ್ದರೆ ರಾಜ್ಯಪಾಲರ ಕ್ರಮವನ್ನು ಪ್ರಶ್ನಿಸುವಂತಿಲ್ಲ. ಮಂತ್ರಿಗಳ ಮತ್ತು ರಾಜ್ಯಪಾಲರ ನಡುವಿನ ಸಂಬಂಧವು ಮತ್ತು ವ್ಯವಹಾರಗಳು, ಇವೆಲ್ಲವುಗಳನ್ನು ರಾಜ್ಯಪಾಲರ ಸಮಗ್ರ ವಿವೇಚನೆಗೆ ಬಿಟ್ಟುಬಿಡತಕ್ಕದ್ದಲ್ಲ. ಅಂಥ ಕಾರ್ಯವಿಧಾನವು ಪ್ರಜಾಪ್ರಭುತ್ವದ ತತ್ತ್ವಗಳಿಗೆ ಸಂಪೂರ್ಣವಾಗಿ ವಿದೇಶೀಯವಾಗಿರುತ್ತದೆ ಎಂಬುದನ್ನು ಸ್ಪಷ್ಟ ಪಡಿಸುತ್ತೇನೆ. ಇದು ಸ್ಥಿರವಾಗಿ ಉಳಿಯಬೇಕಾದರೆ, ಮಂತ್ರಿಗಳು ಸಲಹೆಗಾರರಾಗಿರಬೇಕಷ್ಟೇ ಮತ್ತು ವಿಧಾನಮಂಡಲವು ಕೇವಲ ಸಲಹಾ ನಿಕಾಯ (ಸಂಸ್ಥೆ) ಆಗುವುದು. ಆದ್ದರಿಂದ ಮಂತ್ರಿಗಳು ಪ್ರಾಂತೀಯ ವಿಧಾನಮಂಡಲಕ್ಕೆ ಜವಾಬ್ದಾರರಾಗಿರತಕ್ಕದ್ದು ಎಂಬುದು ಮತ್ತು ಅವರು ಪ್ರಾಂತೀಯ ವಿಧಾನಮಂಡಲದಿಂದ ಆಯ್ಕೆಯಾಗಿರ ತಕ್ಕದ್ದೆಂಬುದು ನಮ್ಮ ಅಪೇಕ್ಷೆ. ಹಾಗಾಗದಿದ್ದರೆ, ರಾಜ್ಯಪಾಲರು ತಮ್ಮ ಅಧಿಕಾರಗಳನ್ನು ದುರುಪಯೋಗ ಪಡಿಸಿಕೊಳ್ಳುವ ಮತ್ತು ಅನೇಕ ರೀತಿಯಲ್ಲಿ ಜನರ ಹಕ್ಕುಗಳನ್ನು ಅತಿಕ್ರಮಿಸುವ ಪ್ರತಿಯೊಂದು ಸಾಧ್ಯತೆ ಇರುತ್ತದೆ. ಸೂಕ್ತ ಪ್ರಜಾಸತ್ತಾತ್ಮಕ ಸರ್ಕಾರವು ನಮ್ಮ ಇಚ್ಛೆಯಂತೆ ನಡೆಯಬೇಕು, ಮಂತ್ರಿಗಳು ವಿಧಾನಮಂಡಲಕ್ಕೆ ಮತ್ತು ವಿಧಾನಮಂಡಲದಿಂದ ಮತಕ್ಷೇತ್ರದವರೆಗೆ ಹೊಣೆಗಾರರಾಗಿರಬೇಕು, ಆದರೆ ಒಬ್ಬ ವ್ಯಕ್ತಿಗೆ ಹೊಣೆಗಾರರಾಗಿರಬಾರದೆಂಬುದನ್ನು ಖಚಿತಪಡಿಸಿಕೊಳ್ಳಬೇಕಾಗಿದೆ. ಇದರ ಹಿಂದಿರುವ ತತ್ತ್ವವೇನೆಂದರೆ, ಮಂತ್ರಿಗಳು ಅಂತಿಮವಾಗಿ ವಿಧಾನಮಂಡಲದ ಮೂಲಕವಾಗಿ ಮತದಾರರಿಗೆ ಹೊಣೆಗಾರರಾಗಿರತಕ್ಕದ್ದು. ಆದರೆ, ಯಾವುದೇ ವಿಧಾನದ ಮೂಲಕ ಅಥವಾ ಬಹುಮತದ ಮೂಲಕ ಚುನಾಯಿತರಾಗಿರಲಿ ಅವರು, ಒಬ್ಬನೇ ವ್ಯಕ್ತಿಗೆ ಹೊಣೆಗಾರನಾಗಿರಬೇಕಾಗಿಲ್ಲ. ಈ ತಿದ್ದುಪಡಿಯು ಮೂಲಭೂತ ತತ್ತ್ವಗಳ ಮೇಲೆ

ಆಧಾರಿತವಾಗಿರುವುದರಿಂದ ಈ ತಿದ್ದುಪಡಿಯನ್ನು ಸದನವು ಅಂಗೀಕರಿಸುವುದೆಂದು ನಾನು ಭಾವಿಸಿದ್ದೇನೆ.

**ಶ್ರೀ ಎಂ. ಅನಂತಶಯನಮ್ ಅಯ್ಯಂಗಾರ್** (ಮದ್ರಾಸ್ : ಸಾಮಾನ್ಯ) : ನಾನು ಯಾವುದೇ ತಿದ್ದುಪಡಿಯನ್ನು ಮಂಡಿಸದೇ ಮಾತನಾಡಬಯಸುತ್ತೇನೆ.

**ಮಾನ್ಯ ಅಧ್ಯಕ್ಷರು :** ಗೌರವಾನ್ವಿತ ಸದಸ್ಯರು ಆಮೇಲೆ ಮಾತನಾಡಬಹುದು.

ಶ್ರೀ ಅಜೀಜ್ ಅಹ್ಮದ್ ಖಾನ್ ಅವರ ಈ ತಿದ್ದುಪಡಿಗೆ ಬೇಗಮ್ ಐಜಾಜ್ ರಸೂಲ್ ಅವರ ಇನ್ನೊಂದು ತಿದ್ದುಪಡಿ ಇದೆ. ದಯವಿಟ್ಟು ಅದನ್ನು ಮಂಡಿಸುವಿರಾ?

**ಬೇಗಮ್ ಐಜಾಜ್ ರಸೂಲ್** (ಯುನೈಟೆಡ್ ಪ್ರಾವಿನ್ಸಸ್ : ಮುಸ್ಲಿಮ್): ಮಾನ್ಯರೆ, ೧೨ನೇ ಖಂಡಕ್ಕೆ ಶ್ರೀ ಅಜೀಜ್ ಅಹ್ಮದ್ ಖಾನ್ ಅವರು ಮಂಡಿಸಿದ ತಿದ್ದುಪಡಿಯ ಕೊನೆಯಲ್ಲಿ ಈ ಮುಂದಿನ ಪದಗಳನ್ನು ಸೇರಿಸಬಯಸುತ್ತೇನೆ.

"ಮತ್ತು ವಿಧಾನಸಭೆಯ ನಿಗದಿತ ಅವಧಿಯಲ್ಲಿ ಪದಧಾರಣ ಮಾಡತಕ್ಕದ್ದು."

ಮಾನ್ಯರೇ, ಮಂತ್ರಿಮಂಡಲವು ಸದೃಢ ಹಾಗೂ ಸುಸ್ಥಿರವಾಗಿರತಕ್ಕದ್ದು ಮತ್ತು ಮಂತ್ರಿಮಂಡಲವು ಯಾವುದಕ್ಕೆ ಜವಾಬ್ದಾರವಾಗಿರುತ್ತದೆಯೋ ಆ ಪಕ್ಷದ ಅಥವಾ ವಿಧಾನಮಂಡಲದ ಇಚ್ಛಾನುಸಾರ ವರ್ತಿಸಬೇಕಾದಂಥ ಪರಿಸ್ಥಿತಿಗೆ ಒಳಗಾಗಬಾರದೆಂಬುದೇ ಈ ತಿದ್ದುಪಡಿಯನ್ನು ನಾನು ಮಂಡಿಸುವ ಉದ್ದೇಶ. ಮಾನ್ಯರೇ, ಇಂಗ್ಲೆಂಡ್ ಮತ್ತು ಫ್ರಾನ್ಸ್ ದೇಶಗಳಲ್ಲಿ ಮಂತ್ರಿಮಂಡಲವು ವಿಧಾನಮಂಡಲಕ್ಕೆ ಜವಾಬ್ದಾರವಾಗಿರುತ್ತದೆ. ಫ್ರಾನ್ಸ್‌ನಲ್ಲಿ ಏನು ನಡೆಯುತ್ತಿದೆ ಎಂದು ನಾವು ಪ್ರತಿದಿನ ನೋಡುತ್ತಿದ್ದೇವೆ. ಮಂತ್ರಾಲಯವು ದುರ್ಬಲವಾದಾಗಲೇ ಮಂತ್ರಿಮಂಡಲವೂ ಅನೇಕ ಸಲ ಬಿದ್ದು ಹೋಗಿದೆ. ವಿಧಾನಮಂಡಲದಲ್ಲಿ ಎರಡಕ್ಕಿಂತ ಹೆಚ್ಚು ಪಕ್ಷಗಳು ಇದ್ದಲ್ಲಿ, ಯಾವಾಗಲೂ ಹಾಗೆಯೇ ಆಗುತ್ತದೆ. ಏಕೆಂದರೆ, ಭಾರತದಲ್ಲಿ ಪ್ರಜಾಪ್ರಭುತ್ವವು ಇನ್ನೂ ಶೈಶವಾವಸ್ಥೆಯಲ್ಲೇ ಇದೆ. ಇಂಥ ಪರಿಸ್ಥಿತಿಯಲ್ಲಿ ಹೊಣೆಗಾರಿಕೆಯ ಪ್ರಜ್ಞೆ ಆಳವಾಗಿ ಬೇರು ಬಿಟ್ಟಿಲ್ಲ ಅಥವಾ ಸಾಕಷ್ಟು ಬೆಳೆದಿಲ್ಲ. ದೂರದೃಷ್ಟಿಯುಳ್ಳ ತತ್ತ್ವಗಳನ್ನು ಅನುಷ್ಠಾನಗೊಳಿಸುವಂಥ ಹಾಗೂ ಆ ಪಕ್ಷದಲ್ಲಿ ಇರುವ ಪರೋಕ್ಷ ಪರಿಣಾಮಗಳಿಂದ ದಿನನಿತ್ಯದಲ್ಲಿ ಪ್ರಭಾವಕ್ಕೊಳಗಾದಂಥ ಶಕ್ತಿಶಾಲಿಯಾದ ಹಾಗೂ ಸ್ಥಿರವಾದ ಮಂತ್ರಿಮಂಡಲವು ನಮಗೆ ಬೇಕಾಗಿದೆ. ಫ್ರಾನ್ಸ್‌ನಲ್ಲಿ ಸಂಭವಿಸುವಂಥ ಘಟನೆಗಳೇ ಭಾರತದಲ್ಲಿಯೂ ಪುನರಾವರ್ತನೆಗೊಳ್ಳುವುದು ನಮಗೆ ಬೇಕಾಗಿಲ್ಲ. ಮಾನ್ಯರೇ, ಭಾರತ ಸರ್ಕಾರ ಅಧಿನಿಯಮ, ೧೯೩೫ ಜಾರಿಗೊಂಡ ತರುವಾಯದ ಹತ್ತು ವರ್ಷಗಳಲ್ಲಿ ನನಗೆ ಆಗಿರುವ ಅನುಭವವೆಂದರೆ, ಪ್ರಾಂತೀಯ ವಿಧಾನಮಂಡಲಕ್ಕೆ ಹೊಣೆಗಾರರಾಗಿರಬೇಕಾದ ಮಂತ್ರಿಗಳು, ತಮ್ಮ ಪಕ್ಷದವರ ಅಥವಾ ಪ್ರಾಂತೀಯ ವಿಧಾನಮಂಡಲದ ಅವಿಶ್ವಾಸ ಮತದಿಂದಾಗಿ ಮಂತ್ರಿಮಂಡಲ ಬಿದ್ದುಹೋಗುವ ಪರಿಸ್ಥಿತಿ ಇರುವಾಗ, ಅವರು ದೂರದೃಷ್ಟಿಯುಳ್ಳ ಕಾರ್ಯನೀತಿಗಳನ್ನು ರೂಪಿಸಲು ಸಾಧ್ಯವಾಗುವುದಿಲ್ಲ. ನಾನು ಈ ಮೊದಲೇ ಹೇಳಿದಂತೆ, ಅವರು ಪ್ರತಿನಿತ್ಯ ಪಕ್ಷದ ಭಾವನೆಗಳ ಒತ್ತಡಕ್ಕೆ ಮೇಲಿಂದ ಮೇಲೆ ಒಳಗಾಗುವುದರಿಂದ ದುರ್ಬಲರೇ ಆಗಿರುತ್ತಾರೆ. ಆದ್ದರಿಂದ, ವಿಧಾನಮಂಡಲದಿಂದ ಆಯ್ಕೆಯಾಗುವ ಮಂತ್ರಿಮಂಡಲವು, ಬಹುಕಾಲ ಉಳಿದು ತನ್ನ ಕಾರ್ಯನೀತಿಗಳನ್ನು ರೂಪಿಸಿಕೊಂಡು ಪಕ್ಷದ ಗುಂಪುಗಾರಿಕೆಯ ಒತ್ತಡಕ್ಕೆ ಒಳಗಾಗುವುದಿಲ್ಲ ಎಂಬುದು ನನ್ನ ಅಭಿಪ್ರಾಯ. ನಾವು ಅಮೇರಿಕದ ವ್ಯವಸ್ಥೆಯನ್ನು ತಂದಿದ್ದರೆ, ಆ ವ್ಯವಸ್ಥೆಯಲ್ಲಿ ಅಧ್ಯಕ್ಷರೇ ತಮ್ಮ ಕಾರ್ಯನಿರ್ವಾಹಕರನ್ನು ನಾಮನಿರ್ದೇಶನ ಮಾಡುತ್ತಾರೆ. ಆದರೆ, ನಾವು ಇಂಥ ವ್ಯವಸ್ಥೆಗೆ ಸಿದ್ಧರಿಲ್ಲ. ಆದರೆ, ಸ್ವಿಸ್ ವ್ಯವಸ್ಥೆಯಲ್ಲಿ ವಿಧಾನಮಂಡಲವು ನಿರ್ದಿಷ್ಟ ಅವಧಿಯ ವರೆಗೆ ತನ್ನ ಕಾರ್ಯನಿರ್ವಾಹಕರನ್ನು ಆಯ್ಕೆ ಮಾಡುತ್ತದೆ. ಆ ಅವಧಿಯಲ್ಲಿ ಅವರನ್ನು ತೆಗೆದುಹಾಕುವಂತಿಲ್ಲ, ಪ್ರಾಂತ್ಯಗಳಿಗೆ ಇದು ಅತ್ಯುತ್ತಮ ರೀತಿಯ ಸರ್ಕಾರವಾಗಿದೆ ಎಂಬುದು ನನ್ನ ಅಭಿಪ್ರಾಯ. ಏಕೆಂದರೆ, ಒಂದು ಸಲ ಮಂತ್ರಿಗಳನ್ನು ಚುನಾಯಿಸಿದ ತರುವಾಯ, ವಿಧಾನಮಂಡಲದಲ್ಲಿ ಅವಿಶ್ವಾಸ ಮತದಿಂದ ಅವರನ್ನು ತೆಗೆದುಹಾಕುವಂತಾಗಬಾರದು. ಆದ್ದರಿಂದ

ಸ್ವಿಸ್ ವ್ಯವಸ್ಥೆಯು ಅತ್ಯುತ್ತಮ ಹಾಗೂ ಮಧ್ಯಮ ಮಾರ್ಗ ಎಂದು ನನ್ನ ಭಾವನೆ. ಇದನ್ನು ನಮ್ಮ ದೇಶದಲ್ಲಿಯೂ ಒಪ್ಪಿಕೊಳ್ಳಬಹುದಾಗಿದೆ ಮತ್ತು ರಾಜಕೀಯ ಪರಿಸ್ಥಿತಿಯನ್ನು ಹಾಗೂ ಇಲ್ಲಿರುವ ಇತರ ಪರಿಸ್ಥಿತಿಗಳನ್ನು ಗಮನಿಸಲಾಗಿ ಇವು ಮುಂದುವರಿದದ್ದೇ ಆದರೆ, ಈ ವ್ಯವಸ್ಥೆ ಬರಲು ದೀರ್ಘಕಾಲ ಬೇಕಾಗುತ್ತದೆ. "ವರ್ಗಾಯಿಸಲಾಗದ ಒಂದೇ ಮತ"ದ ಮೂಲಕ ಆಯ್ಕೆ ಮಾಡುವ ವ್ಯವಸ್ಥೆಯನ್ನು ಕಾರ್ಯನಿರ್ವಾಹಕರನ್ನು ನೇಮಕಮಾಡುವುದಕ್ಕಾಗಿ ಅಳವಡಿಸಿಕೊಳ್ಳುವುದು ಅತ್ಯುತ್ತಮವಾಗುತ್ತದೆ. ಏಕೆಂದರೆ, ಎಲ್ಲ ಹಿತಾಸಕ್ತಿಗಳನ್ನು ಪ್ರತಿನಿಧಿಸಲಾಗುವುದು ಮತ್ತು ವಿಧಾನಮಂಡಲವು ಯಾವೊಂದು ಪಕ್ಷವನ್ನೂ ಪ್ರತಿನಿಧಿಸುತ್ತಿಲ್ಲ ಎಂಬ ಭಾವನೆಯು ಅದಕ್ಕೆ ಬರುವುದಕ್ಕೆ ಅವಕಾಶ ಇರುವುದಿಲ್ಲ. ಆದ್ದರಿಂದ ಶ್ರೀ ಅಜೀಜ್ ಅಹ್ಮದ್ ಖಾನ್ ಅವರು ಮಂಡಿಸಿದ ತಿದ್ದುಪಡಿಯನ್ನು ನಾನು ಬಲವಾಗಿ ಬೆಂಬಲಿಸುತ್ತೇನೆ.

ಮಂತ್ರಿಮಂಡಲವು, ವಿಧಾನಸಭೆಯ ನಿಗದಿತ ಅವಧಿ ಇರುವಷ್ಟು ಅವಧಿಯವರೆಗೂ ಜೊತೆ ಜೊತೆಯಾಗಿ ಇರುವಂಥ ವ್ಯವಸ್ಥೆ ಅತ್ಯುತ್ತಮ ಎಂಬ ವಿಚಾರವನ್ನು ನಾನು ಸ್ಪಷ್ಟ ಪಡಿಸುತ್ತೇನೆ.

ನಾವು ಸಂವಿಧಾನವನ್ನು ಸಿದ್ಧ ಪಡಿಸುತ್ತಿರುವಾಗ, ಚುನಾಯಿತರಾದ ರಾಜ್ಯಪಾಲರಿಗೆ ಶಕ್ತಿಯುತವಾದ ಹಾಗೂ ವ್ಯಾಪಕ ಅಧಿಕಾರಗಳನ್ನು ನೀಡಿದ್ದೇನೆ. ಎಂದರೆ, ರಾಜ್ಯಕ್ಕೆ ಇನ್ನೊಬ್ಬ ಮುಖ್ಯಸ್ಥರ ಅಗತ್ಯವಿಲ್ಲ. ಏಕೆಂದರೆ, ರಾಜ್ಯಪಾಲರು ಮುಖ್ಯಸ್ಥರಾಗಿದ್ದು, ಖಾತೆಗಳನ್ನು ಹಂಚಿಕೆ ಮಾಡುವ ಸ್ಥಿತಿಯಲ್ಲಿರುತ್ತಾರೆ. ಅವರು ಸಮಾರಂಭ ಸಂದರ್ಭಗಳಲ್ಲಿ ರಾಜ್ಯವನ್ನು ಪ್ರತಿನಿಧಿಸುತ್ತಾರೆ ಮತ್ತು ಸಭೆಗಳ ಅಧ್ಯಕ್ಷತೆ ವಹಿಸುತ್ತಾರೆ ಮತ್ತು ಮಂತ್ರಿಗಳ ಕೆಲಸಕಾರ್ಯಗಳನ್ನು ಸಮನ್ವಯಗೊಳಿಸುತ್ತಾರೆ. ಈ ಎಲ್ಲ ವಿಷಯಗಳು "ರಾಜ್ಯಪಾಲರ ಕರ್ತವ್ಯಗಳು" ಎನ್ನುವುದರ ಅಡಿಯಲ್ಲಿ ಬರುತ್ತವೆ ಮತ್ತು ವಿಧಾನಮಂಡಲದಿಂದ ಚುನಾಯಿತರಾದ ಸಚಿವರು ಜವಾಬ್ದಾರರಾಗಿದ್ದ ಪಕ್ಷದ ಇಚ್ಛೆಯಂತೆ ಕಾರ್ಯನಿರ್ವಹಿಸದೇ ತಮ್ಮದೇ ಆದ ಬಲವಾದ ಸ್ಥಾನಮಾನದಿಂದ ಕಾರ್ಯನೀತಿ ತತ್ತ್ವಗಳನ್ನು ಅನುಷ್ಠಾನಗೊಳಿಸಲು ಮತ್ತು ದೀರ್ಘಕಾಲಿಕ ಕಾರ್ಯನೀತಿಗಳನ್ನು ಸಿದ್ಧಪಡಿಸಲು ಸಾಧ್ಯವಾಗುತ್ತದೆ. ಮಂತ್ರಿಗಳು ಪಕ್ಷದ ಪ್ರತಿನಿಧಿಗಳಾಗಿದ್ದಲ್ಲಿ, ಪಕ್ಷದ ಸದಸ್ಯರ ಪ್ರಭಾವಕ್ಕೆ ಒಳಗಾಗದೇ ದೈನಂದಿನ ಕೆಲಸ ಕಾರ್ಯಗಳನ್ನು ಮತ್ತು ಪ್ರಾಂತ್ಯದ ಆಡಳಿತ ಕೆಲಸ ಕಾರ್ಯಗಳನ್ನಾಗಲೀ ಮಾಡಲು ಸಾಧ್ಯವಾಗುವುದಿಲ್ಲ ಎಂಬುದು ನನ್ನ ಅನುಭವ. ತಮ್ಮ ತಮ್ಮ ಪಕ್ಷದ ಸದಸ್ಯರನ್ನು ಸಂತುಷ್ಟಗೊಳಿಸಬೇಕಾದ ಮಂತ್ರಿಗಳು, ಆಡಳಿತದ ದೃಷ್ಟಿಯಿಂದ ಸೂಕ್ತವಲ್ಲದಂಥ ಅನೇಕ ಕೆಲಸಗಳನ್ನು ಮಾಡಬೇಕಾಗುತ್ತದೆ ಎಂಬುದು ಸಹಜ ಮಾತು, ಇದರಿಂದಾಗಿ ಮಂತ್ರಿಮಂಡಲವು ದುರ್ಬಲವಾಗಿ ಆಡಳಿತ ವ್ಯವಸ್ಥೆಯೇ ತೊಂದರೆಗೊಳಗಾಗುತ್ತದೆ ಎಂದೇ ಹೇಳಬೇಕಾಗುತ್ತದೆ. ಆದ್ದರಿಂದ, ಪ್ರಾಂತ್ಯಗಳಲ್ಲಿ ಬಲವಾದ ಹಾಗೂ ಸುಸ್ಥಿರ ಸರ್ಕಾರ ಇರಬೇಕೆಂಬ ದೃಷ್ಟಿಯಿಂದ ನಾನು ಮಂಡಿಸಿರುವ ಈ ತಿದ್ದುಪಡಿಯು ಅಂಗೀಕೃತವಾಗುವುದೆಂದು ಆಶಿಸಿದ್ದೇನೆ.

(ಶ್ರೀ ಬಿ.ಎಮ್. ಗುಪ್ತ ತಮ್ಮ ತಿದ್ದುಪಡಿಯನ್ನು ಮಂಡಿಸಲಿಲ್ಲ)

**ಮಾನ್ಯ ಅಧ್ಯಕ್ಷರು** : ಇವೆಲ್ಲವು ತಿದ್ದುಪಡಿಗಳೇ ಆಗಿವೆ. ಈಗ ಸದರಿ ಖಂಡ ಮತ್ತು ತಿದ್ದುಪಡಿಗಳನ್ನು ಚರ್ಚೆಗೆ ತೆರೆದಿಡಲಾಗಿದೆ.

**ಸೇಠ್ ಗೋವಿಂದ ದಾಸ್** (ಸಿ.ಪಿ. ಮತ್ತು ಬೆರಾರ್ : ಸಾಮಾನ್ಯ) : *[ಮಾನ್ಯ ಅಧ್ಯಕ್ಷರೆ, ನಾನು, ಶ್ರೀ ಅಜೀಜ್ ಅಹ್ಮದ್ ಅವರು ಮಂಡಿಸಿದ ತಿದ್ದುಪಡಿಯನ್ನು ಮತ್ತು ಅವರು ಮಂಡಿಸಿರುವ ಮತ್ತೆರಡು ತಿದ್ದುಪಡಿಗಳನ್ನು ವಿರೋಧಿಸುತ್ತೇನೆ. ಅವರು ಅಮೆರಿಕದ ಉದಾಹರಣೆಯನ್ನು ಕೊಟ್ಟಿದ್ದಾರೆ, ಅಲ್ಲಿ ಮಂತ್ರಿಗಳನ್ನು ಚುನಾಯಿಸಲಾಗುತ್ತದೆ, ಅಮೆರಿಕದ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಬೇಕೆಂದು, ಬ್ರಿಟಿಷ್ ಪದ್ಧತಿಯನ್ನು ಅಲ್ಲ ಎಂದು ಸಲಹೆ ಮಾಡಿದ್ದಾರೆ. ಅಮೆರಿಕದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮಂತ್ರಿಗಳು ವಿಧಾನಮಂಡಲಕ್ಕೆ ಜವಾಬ್ದಾರರಾಗಿರುವುದಿಲ್ಲ ಎಂಬುದನ್ನು ನಾನು ಇಲ್ಲಿ ಸ್ಪಷ್ಟ ಪಡಿಸಬಯಸುತ್ತೇನೆ. ಜವಾಬ್ದಾರಿಯುತ ಸರ್ಕಾರದ ವ್ಯವಸ್ಥೆಗಳು ಜಾರಿಯಲ್ಲಿರುವ ಈ ದೇಶಗಳ ಸಂವಿಧಾನಗಳತ್ತ ಗಮನ ಹರಿಸಿದರೆ, ಮುಖ್ಯಮಂತ್ರಿಯವರು

ವಿಧಾನಮಂಡಲದಲ್ಲಿ ಬಹುಮತ ಇರುವ ಪಕ್ಷದಿಂದ ಆಯ್ಕೆಯಾಗಿದ್ದು, ಅವರು ತಮ್ಮ ಸಹೋದ್ಯೋಗಿಗಳನ್ನು ಆಯ್ಕೆ ಮಾಡುತ್ತಾರೆ. ಮುಖ್ಯಮಂತ್ರಿಯವರು ರಾಜ್ಯಪಾಲರಿಗೆ ಸಲ್ಲಿಸಿರುವ ಸದಸ್ಯರ ಪಟ್ಟಿಯನ್ನು ರಾಜ್ಯಪಾಲರು ಅನುಮೋದಿಸುತ್ತಾರೆ.

ಜವಾಬ್ದಾರಿಯುತ ಸರ್ಕಾರದ ವ್ಯವಸ್ಥೆಯು ಅಸ್ತಿತ್ವದಲ್ಲಿರುವ ದೇಶಗಳಲ್ಲಿ, ಜಂಟಿ ಜವಾಬ್ದಾರಿಕೆ ಇದ್ದ ಹೊರತು, ಜವಾಬ್ದಾರಿಯುತ ಸರ್ಕಾರವು ಕಾರ್ಯನಿರ್ವಹಿಸಲಾಗುವುದಿಲ್ಲ ಎಂಬುದು ಸ್ಪಷ್ಟವಾಗುತ್ತದೆ ಮತ್ತು ಮುಖ್ಯಮಂತ್ರಿಯವರು ತಮ್ಮ ಸಹೋದ್ಯೋಗಿಗಳನ್ನು ಆಯ್ಕೆ ಮಾಡುವವರೆಗೆ ಮತ್ತು ಆಯ್ಕೆ ಮಾಡಿದ ಹೊರತು, ಜಂಟಿ ಜವಾಬ್ದಾರಿ ಇರುವುದಿಲ್ಲ. ಈ ದೇಶದಲ್ಲಿ ನಡೆದ ಎಲ್ಲ ಕಚ್ಚಾಟಗಳಿಗೆ, ಇಂಗ್ಲಿಷ್ ಸರ್ಕಾರಿ ವ್ಯವಸ್ಥೆಯೇ ಹೊಣೆ ಎಂದು ಶ್ರೀ ಅಜೀಜ್ ಅಹ್ಮದ್ ಅವರು ಹೇಳಿದ್ದಾರೆ. ಇನ್ನೂ ಈ ದೇಶದಲ್ಲಿ ಜಾರಿಗೊಳಿಸದೇ ಇರುವಂಥ ವ್ಯವಸ್ಥೆಯು, ನಮ್ಮ ದೇಶದಲ್ಲಿ ಉಂಟಾಗಿರುವ ಪರಿಸ್ಥಿತಿಗಳಿಗೆ ಕಾರಣ ಎಂದು ತೀರ್ಮಾನಿಸಲಾಗದು ಎಂದು ನಾನು ಹೇಳುತ್ತೇನೆ. ಈ ಸರ್ಕಾರ–ವ್ಯವಸ್ಥೆಯನ್ನು ಸ್ವತಂತ್ರ ದೇಶಗಳಲ್ಲಿ ಮಾತ್ರ ಅಳವಡಿಸಿಕೊಳ್ಳಬಹುದಾಗಿದೆ. ಆದ್ದರಿಂದ, ಎಲ್ಲಿಯವರೆಗೆ ನಮ್ಮ ದೇಶವು, ಸ್ವತಂತ್ರವಾಗುವುದಿಲ್ಲವೋ ಅಲ್ಲಿಯವರೆಗೂ ಈ ಎಲ್ಲ ತೊಂದರೆಗಳಿಗೆ ಅಂಥ ವ್ಯವಸ್ಥೆಯೇ ಮೂಲಕಾರಣ ಎಂದು ಹೇಳುವುದು ತಪ್ಪಾಗುತ್ತದೆ. ಈ ದೇಶದಲ್ಲಿ ಏನಾಗುತ್ತದೆ, ಅದಕ್ಕೆ ಹೊಣೆ 'ಮುಸ್ಲಿಮ್ ಲೀಗ್' ಎಂದು ಮತ್ತು, ಇದು ಎರಡು ರಾಷ್ಟ್ರಗಳ ತತ್ತ್ವವನ್ನು ಪ್ರತಿಪಾದಿಸುತ್ತದೆ, 'ಇಸ್ಲಾಮ್ ಅಪಾಯದಲ್ಲಿದೆ' ಎಂಬ ಕೂಗನ್ನು ಆಗಾಗ್ಗೆ ಮಾಡುತ್ತಲೇ ಬಂದಿದೆ ಮತ್ತು ಈ ದೇಶದಲ್ಲಿ ಎರಡು ನಾಗರಿಕತೆಗಳು ಹಾಗೂ ಎರಡು ಸಂಸ್ಕೃತಿಗಳು ಇವೆ ಎಂದು ಹೇಳುತ್ತಲೇ ಬಂದಿದೆ. ನಾವು ಇಲ್ಲಿ, ಸ್ಥಾಪಿಸಲು ಉದ್ದೇಶಿಸಿರುವ ಜವಾಬ್ದಾರಿಯುತ ಸರ್ಕಾರ ವ್ಯವಸ್ಥೆಯು ಈ ಗಂಭೀರ ಗಲಭೆಗಳಿಗೆ ಜವಾಬ್ದಾರಿಯಾಗಿದೆ ಎಂದು ಹೇಳುವುದು ತಪ್ಪಾಗುತ್ತದೆ. ಮುಸ್ಲಿಮ್ ಲೀಗ್ ಈವರೆಗೂ ಅಳವಡಿಸಿಕೊಂಡಿರುವ ವ್ಯವಸ್ಥೆಯ ಕಡೆಗೆ ಶ್ರೀ ಅಜೀಜ್ ಅಹ್ಮದ್ ಅವರು ಗಮನ ಹರಿಸಬೇಕಾಗಿದೆ. ಮುಸ್ಲಿಮ್ ಲೀಗ್‌ನ ಅಧ್ಯಕ್ಷರು, ಖೈದ್–ಇ–ಅಜಮ್‌ನ್ನು ಆಯ್ಕೆ ಮಾಡುತ್ತಾರೆ. ಆದರೆ ಅಧ್ಯಕ್ಷರು, ಲೀಗ್ ಕಾರ್ಯಕಾರಿ ಸಮಿತಿಯ ಸದಸ್ಯರನ್ನು ಆಯ್ಕೆ ಮಾಡುತ್ತಾರೆ. ಲೀಗ್‌ನ ಮಾನ್ಯ ಅಧ್ಯಕ್ಷರು ಮಹಾಸಭೆಯ ಕಾರ್ಯಕಾರಿ ಸಮಿತಿಯನ್ನು ಆಯ್ಕೆ ಮಾಡುತ್ತದೆ. ನಾವು ನಮ್ಮ ರಾಷ್ಟ್ರಪತಿಯವರನ್ನು (ಕಾಂಗ್ರೆಸ್ ಅಧ್ಯಕ್ಷರನ್ನು) ಆಯ್ಕೆ ಮಾಡುತ್ತೇವೆ. ಪ್ರಾಂತೀಯ ಕಾಂಗ್ರೆಸ್ ಸಮಿತಿಗಳು ತಮ್ಮ ಅಧ್ಯಕ್ಷರನ್ನು ಆಯ್ಕೆ ಮಾಡುತ್ತವೆ. ರಾಷ್ಟ್ರಪತಿಯವರು ಮತ್ತು ಪ್ರಾಂತೀಯ ಕಾಂಗ್ರೆಸ್ ಸಮಿತಿಗಳ ಅಧ್ಯಕ್ಷರು, ತಮ್ಮ ತಮ್ಮ ಕಾರ್ಯಕಾರಿ ಸಮಿತಿಗಳ ಅಧ್ಯಕ್ಷರನ್ನು ಆಯ್ಕೆ ಮಾಡಲು ಅವರಿಗೆ ಅಧಿಕಾರ ನೀಡಿದ್ದೇವೆ. ಇವೆಲ್ಲವುಗಳನ್ನು ಗಮನಿಸಲಾಗಿದೆ. ಇಲ್ಲಿ ಜವಾಬ್ದಾರಿಯುಳ್ಳ ಸರ್ಕಾರವನ್ನು ನಾವು ಸ್ಥಾಪಿಸಲು ಬಯಸುವುದಾದರೆ, ನಾವು ಅಮೆರಿಕನ್ ವ್ಯವಸ್ಥೆಯನ್ನು ಅನುಸರಿಸಲೇಬಾರದು ಎಂಬುದು ನನ್ನ ಪ್ರಾರ್ಥನೆ. ಅಮೆರಿಕದಲ್ಲಿ ಮಂತ್ರಿಗಳು ವಿಧಾನಮಂಡಲಕ್ಕೆ ಎಂದರೆ, ಹೌಸ್ ಆಫ್ ರೆಪ್ರೆಸೆಂಟೆಟೀವ್‌ಗೆ ಅಥವಾ ಸೆನೆಟ್‌ಗೆ ಜವಾಬ್ದಾರರಾಗಿರುವುದಿಲ್ಲ. ನಮಗೆ ಜವಾಬ್ದಾರಿ ಸರ್ಕಾರ ಬೇಕಾಗಿದೆ. ನಮ್ಮ ಮಂತ್ರಿಗಳು ನಮ್ಮ ವಿಧಾನಮಂಡಲಕ್ಕೆ ಜವಾಬ್ದಾರರಾಗಿರತಕ್ಕದ್ದು. ನಮಗೆ ಈ ವ್ಯವಸ್ಥೆ ಬೇಕಾದರೆ, ವರ್ಗಾಯಿಸಬಹುದಾದ ಏಕಮತದ ಮೂಲಕ, ದಾಮಾಷಾ ಪ್ರಮಾಣದ ಪ್ರಾತಿನಿಧ್ಯ ತತ್ತ್ವದ ಮೇಲೆ ಚುನಾಯಿತರಾಗುವ ಅಗತ್ಯವಿಲ್ಲ.

ಈ ತಿದ್ದುಪಡಿಗೆ ಸೂಚಿಸಿರುವ ಇತರ ಎರಡು ತಿದ್ದುಪಡಿಗಳು ಆಶ್ಚರ್ಯಕರವಾಗಿವೆ. ಅವುಗಳಲ್ಲಿ ಒಂದು ತಿದ್ದುಪಡಿಯು, ವರ್ಗಾಯಿಸಬಹುದಾದ ಏಕಮತದ ಮೂಲಕ ಚುನಾಯಿತರಾದ ಮಂತ್ರಿಗಳು ತಮ್ಮ ತಮ್ಮ ವಿಧಾನಮಂಡಲಗಳಿಗೆ ಜವಾಬ್ದಾರರಾಗಿರತಕ್ಕದ್ದು ಎಂಬುದಾಗಿದೆ. ಮಂತ್ರಿಗಳು ಹೇಗೆ ವೈಯಕ್ತಿಕವಾಗಿ ವಿಧಾನಮಂಡಲಕ್ಕೆ ಜವಾಬ್ದಾರರಾಗಿರುತ್ತಾರೆ ಎಂಬುದನ್ನು ನಾನು ತಿಳಿಯಬೇಕಾಗಿದೆ.

ನಮ್ಮ ಸೋದರಿಯರಲ್ಲೊಬ್ಬರು ಮಂಡಿಸಿರುವ ಇನ್ನೊಂದು ತಿದ್ದುಪಡಿ, ಎಂದರೆ, ವಿಧಾನಸಭೆಯ

ನಿಗದಿತ ಅವಧಿ ಪರ್ಯಂತ ಪದಧಾರಣ ಮಾಡತಕ್ಕದ್ದು ಎಂಬುದಾಗಿದೆ. ವಿಧಾನಮಂಡಲದ ಬಹುಮತವುಳ್ಳ ಸದಸ್ಯರಿಗೆ ಆ ಮಂತ್ರಿಗಳಲ್ಲಿ ಅಥವಾ ಪ್ರಧಾನ ಮಂತ್ರಿಗಳಲ್ಲಿ ವಿಶ್ವಾಸವಿಲ್ಲದಿರುವಾಗ, ವಿಧಾನಸಭೆಯ ನಿಗದಿತ ಅವಧಿಪೂರ್ತಿ ಹೇಗೆ ಪದಧಾರಣ ಮಾಡುತ್ತಾರೆ ಎಂದು ಅರ್ಥಮಾಡಿಕೊಳ್ಳಲು ನಾನು ವಿಫಲನಾಗಿದ್ದೇನೆ. ತಿದ್ದುಪಡಿ ಹಾಗೂ ಅದಕ್ಕೆ ಸೂಚಿಸಿದ ತಿದ್ದುಪಡಿಗಳು ಪರಸ್ಪರ ವಿರುದ್ಧವಾಗಿವೆ.

ಆದ್ದರಿಂದ, ನಾನು ಭಾಷಣವನ್ನು ಮುಕ್ತಾಯಗೊಳಿಸುತ್ತಾ ನಾವು ಸ್ವಾತಂತ್ರ್ಯವನ್ನು ಪಡೆದುಕೊಳ್ಳುವುದಕ್ಕೆ ಮೊದಲು ಬ್ರಿಟನ್‌ನಲ್ಲಿ ಅಸ್ತಿತ್ವದಲ್ಲಿರುವ ಸರ್ಕಾರ (ಆಡಳಿತ) ವ್ಯವಸ್ಥೆಯನ್ನು ನಾವು ಅನುಸರಿಸಲೇಬೇಕಾಗುತ್ತದೆ ಎಂದು ನಾನು ಮತ್ತೊಮ್ಮೆ ಹೇಳುತ್ತೇನೆ.]*

**ಮಾನ್ಯ ಅಧ್ಯಕ್ಷರು** : ಇಲ್ಲಿ ಮಾಡಿರುವ ಎಲ್ಲ ಭಾಷಣಗಳು ಹಿಂದೂಸ್ತಾನಿಯಲ್ಲಿವೆ, ಸದಸ್ಯರ ಉಪಯೋಗಕ್ಕಾಗಿ ಅವುಗಳನ್ನು ಇಂಗ್ಲಿಷಿಗೆ ಭಾಷಾಂತರಿಸಬೇಕು ಎಂದು ಒಬ್ಬರು ಮದ್ರಾಸ್ ಸದಸ್ಯರು ವಿನಂತಿಸಿ ಕೊಂಡಿದ್ದಾರೆ. ಈ ತಿದ್ದುಪಡಿಗಳಲ್ಲಿ ಒಂದು ತಿದ್ದುಪಡಿಯನ್ನು ಅವರೇ ಮಂಡಿಸಿದ್ದಾರೆ. ಈ ಮನವಿಯನ್ನು ಈಡೇರಿಸಲು ಸಾಧ್ಯವಾಗುವುದಿಲ್ಲ ಎಂದು ತಿಳಿಸುವುದಕ್ಕೆ ವಿಷಾದವಾಗುತ್ತದೆ. ಏಕೆಂದರೆ, ಮೊದಲನೆಯದಾಗಿ, ಹಿಂದೂಸ್ತಾನಿ ಭಾಷೆಯಲ್ಲಿ ಮಾಡಿದ ಈ ಎಲ್ಲ ಭಾಷಣಗಳನ್ನು ಇಂಗ್ಲಿಷಿಗೆ ಭಾಷಾಂತರ ಮಾಡಲು ಸಮರ್ಥರಾದ ಭಾಷಾಂತರಕಾರ ವ್ಯವಸ್ಥೆ ನಮ್ಮಲ್ಲಿ ಇಲ್ಲ ಮತ್ತು ಇಂಗ್ಲಿಷ್ ತಿಳಿಯದಿರುವ ಕೆಲವು ಸದಸ್ಯರೂ ಇದ್ದರೆ, ಅವರು, ಇಂಗ್ಲಿಷಿನಲ್ಲಿರುವ ಭಾಷಣಗಳನ್ನು ತಮ್ಮ ತಮ್ಮ ಭಾಷೆಗಳಿಗೆ ಭಾಷಾಂತರಿಸಿ ಕೊಡಬೇಕೆಂದು ಒತ್ತಾಯ ಪಡಿಸುತ್ತಾರೆ. ಸದಸ್ಯರ ಇತಿಮಿತಿಗಳನ್ನು, ಈಗ ಇರುವಂತೆಯೇ ಮುಂದುವರಿಸಿ ಈಗ ನಡೆಯುತ್ತಿರುವ ಚರ್ಚೆಗಳನ್ನು ಹಾಗೆಯೇ ಮುಂದುವರಿಸುವುದು ಮತ್ತು ಭಾಷಣ ಮಾಡುವವರು ಯಾವ ಭಾಷೆಯಲ್ಲಿ ಮಾತನಾಡಲು ಬಯಸುತ್ತಾರೆಯೋ ಅದೇ ಭಾಷೆಯಲ್ಲಿ ಮುಂದುವರಿಸುವುದು ಸೂಕ್ತವೆಂಬುದು ನನ್ನ ಅಭಿಪ್ರಾಯ.

**ಶ್ರೀ ಜೈಪಾಲ್ ಸಿಂಗ್** (ಬಿಹಾರ : ಸಾಮಾನ್ಯ) : ಮಾನ್ಯ ಅಧ್ಯಕ್ಷರೆ, ನಾನು ಮದ್ರಾಸಿನವರಂತೆ ಆಗಿದ್ದೇನೆಂದು ನನಗೆ ಅನಿಸುತ್ತದೆ. ಒಂದು ಕಡೆ ನನಗಿಂತ ಮೊದಲು ಮಾತನಾಡಿದ ಸದಸ್ಯರು ಹಾಗೂ ಅವರಿಗಿಂತ ಸ್ವಲ್ಪ ಮೊದಲೇ ಮಾತನಾಡಿದವರು, ಏನು ಹೇಳಿದರೆಂದು ಬಹುಪಾಲು ನನಗೆ ಅರ್ಥವಾಗಲಿಲ್ಲ. ಅವರೊಂದಿಗೆ ನನ್ನ ಪೂರ್ಣ ಸಹಮತ ಇದೆ. ಭಾಷಣ ಮಾಡುವವರು ಸಾಧ್ಯವಾದಷ್ಟು ಮಟ್ಟಿಗೆ ಈ ಸಭೆಯ ಬಹಳಷ್ಟು ಜನರು ತಿಳಿದಿರುವ ಭಾಷೆಯಲ್ಲಿ ಭಾಷಣ ಮಾಡುವುದೇ ಅತ್ಯುತ್ತಮ ವಿಧಾನ. ನಾನು ನನ್ನ ಮಾತುಗಳನ್ನು ಯಾವ ಭಾಷೆಯಲ್ಲಿ ಅತ್ಯುತ್ತಮವಾಗಿ ಅಭಿವ್ಯಕ್ತಗೊಳಿಸಬಹುದೆಂದು ಹೇಳಲು ನನಗೆ ಅವಕಾಶ ಕೊಟ್ಟರೆ, ನನಗೆ ಯಾವ ಭಾಷೆ ಗೊತ್ತಿದೆಯೋ ಆ ಭಾಷೆಯಲ್ಲಿ ಮಾತನಾಡಿದರೆ, ಅದು ಯಾರೊಬ್ಬರಿಗೂ ತಿಳಿಯುವುದಿಲ್ಲ. ಏಕೆಂದರೆ, ನಾನು ನನ್ನದೇ ಆದ ಒಂದು ಆದಿವಾಸಿ ಭಾಷೆಯಲ್ಲಿ ಮಾತನಾಡುತ್ತೇನೆ. ಇಲ್ಲಿರುವ ಯಾರೊಬ್ಬ ಸದಸ್ಯರಿಗೂ ಈ ಭಾಷೆ ಅರ್ಥವಾಗುವುದಿಲ್ಲ. ನಾನು ಯಾವ ಪ್ರಾಂತ್ಯಕ್ಕೆ ಸೇರಿದವನಾಗಿದ್ದೇನೋ ಮಾನ್ಯ ಅಧ್ಯಕ್ಷರೂ ಅದೇ ಪ್ರಾಂತ್ಯದವರಾಗಿದ್ದಾರೆ ಹಾಗೂ ಆ ಭಾಷೆಯ ಭಾಷಾಂತರಕಾರರನ್ನು ಹುಡುಕುವುದು ಕಷ್ಟ. ಇಂಥ ವಿಷಯಗಳಲ್ಲಿ ಭಿನ್ನಾಭಿಪ್ರಾಯಗಳು ಇವೆ ಎಂಬುದು ಸ್ಪಷ್ಟವಾಗಿದ್ದರೂ ಬಲವಂತವಾಗಿ ಅವುಗಳನ್ನು ಅನುಷ್ಠಾನಗೊಳಿಸಬೇಕೆಂದು ಅನಿಸುತ್ತದೆ ಹಾಗೂ ಸದನದಲ್ಲಿ ಏನು ಹೇಳಲಾಗಿದೆ ಎಂದರೆ, ಸದನಗಳ ಬಹಳಷ್ಟು ಸದಸ್ಯರು ತಿಳಿದಿರುವ ಭಾಷೆಯಲ್ಲಿ ಮಾತನಾಡುವುದು ಉತ್ತಮ ಎನಿಸುತ್ತದೆ.

ನಾನು ಇಲ್ಲಿಗೆ ಬಂದಿರುವುದು, ತಿದ್ದುಪಡಿಯನ್ನು ವಿರೋಧಿಸುವುದಕ್ಕೆ, ಆದರೆ ನಾನು ತಿದ್ದುಪಡಿಯನ್ನು ವಿರೋಧಿಸುವುದಕ್ಕೆ ಮೊದಲು ಟಿಪ್ಪಣಿ ಬಗ್ಗೆ ಹೇಳಲು ಇಚ್ಛಿಸುತ್ತೇನೆ. ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರು, ಟಿಪ್ಪಣಿಗಳ ಬಗ್ಗೆ ಯಾರೂ ಮಾತನಾಡುವಂತಿಲ್ಲವೆಂದು ಸಲಹೆ ನೀಡಿದ್ದರೂ, ಇಂಥ

ಹೇಳಿಕೆಗಳು ಅತ್ಯಂತ ದುರದೃಷ್ಟಕರವಾದವೆಂದು ಹೇಳುವುದಕ್ಕೆ ಅವಕಾಶ ಎಂದು ಭಾವಿಸುತ್ತೇನೆ ಹಾಗೂ ಇಂಥ ಕಂಡಿಕೆಗಳು ಗಂಭೀರ ವಿಚಾರಗಳ ದಸ್ತಾವೇಜುಗಳಲ್ಲಿ ಎಂದೂ ಕಂಡು ಬರಬಾರದು.

ನಾನು ಅದನ್ನು ಓದುತ್ತೇನೆ.

"ಪ್ರಸ್ತಾವಿತ ಸಂವಿಧಾನದ ಮೇರೆಗೆ, ರಾಜ್ಯಪಾಲರು ಜನರಿಂದ ಚುನಾಯಿತರಾಗುವುದರಿಂದ ತಮ್ಮ ವಿವೇಚನಾಧಿಕಾರಗಳನ್ನು ದುರುಪಯೋಗ ಪಡಿಸಿಕೊಳ್ಳುವ ಸಾಧ್ಯತೆ ಇರುವುದಿಲ್ಲ ಎಂಬುದನ್ನು ಗಮನಿಸಬೇಕು."

ಇಂಥ ವಾದವನ್ನು ತಿಳಿದುಕೊಳ್ಳುವಲ್ಲಿ ಮೂಲ ತರ್ಕಜ್ಞಾನವೇ ನನಗಿಲ್ಲವೇನೋ ಅನಿಸುತ್ತದೆ. ಜನಪ್ರಿಯತೆಯಿಂದ ಚುನಾಯಿತನಾಗಿರುವ ಒಬ್ಬ ವ್ಯಕ್ತಿಯು ತನ್ನ ವಿವೇಚನಾಧಿಕಾರಗಳನ್ನು ದುರುಪಯೋಗ ಪಡಿಸಿಕೊಳ್ಳುವನೆಂಬುದು ಕಲ್ಪನಾತೀತ. ತಿದ್ದುಪಡಿಯ ಪ್ರಸ್ತಾವಕಾರರು ಹಾಗೂ ಅನುಮೋದಿಸಿದವರು ಮುಂದಿಟ್ಟಿರುವ ವಾದವನ್ನು ಕುರಿತು ನಾನು ನನ್ನ ವಾದವನ್ನು ಮುಂದುವರಿಸುತ್ತಿದ್ದೇನೆ. ವಾದ ಸರಣಿಗಳು, ಖಂಡಗಳು ಅವು ಹೇಗಿವೆಯೋ ಹಾಗೆ ಇರುವುದು ದುರದೃಷ್ಟಕರವೆಂದು ಹೇಳಬಹುದಷ್ಟೇ. ಪ್ರಸ್ತಾವಕಾರರು ಹಾಗೂ ಅನುಮೋದನೆಕಾರರು, ೧೪ನೇ ಖಂಡವು, ೨ನೇ ಖಂಡದ ಸ್ಥಳದಲ್ಲಿ ಬಂದಿರಬಹುದೆಂದು ಅನ್ಯಥಾ ಭಾವಿಸಿರಬಹುದು. ಖಂಡ ೧೪ರಲ್ಲಿ, ಸೂಚನೆಗಳ ಲಿಖಿತ ದಾಖಲೆ ಪತ್ರಕ್ಕೆ ಸಮನಾಗಿರುವ ಅನುಸೂಚಿಯನ್ನು ನೀವು ನೋಡಬಹುದು, ಅದನ್ನೇ ಇಲ್ಲಿ ಒದಗಿಸಲಾಗಿದೆ. ಅನುಸೂಚಿ ಅಥವಾ ಸೂಚನೆಗಳ ಲಿಖಿತ ದಾಖಲೆ ಪತ್ರ ಏನೆಂಬುದನ್ನು ನಾನು ತಿಳಿದುಕೊಂಡಿದ್ದಾದರೆ ಊಹೆಗಳ ಸಮೂಹವನ್ನೇ ಸಂಪೂರ್ಣವಾಗಿ ತೆಗೆದುಹಾಕಬಹುದೆಂದು ನಾನು ಭಾವಿಸಿದ್ದೇನೆ.

ಇಲ್ಲಿಯವರೆಗೆ ನಾವು, ಜವಾಬ್ದಾರಿ ಸರ್ಕಾರದ ಬಗ್ಗೆ ಮಾತನಾಡುತ್ತಿದ್ದೆವು. ಜವಾಬ್ದಾರಿ ಸರ್ಕಾರ ಎಂದರೇನು ಮತ್ತು ಪ್ರಾಂತ್ಯದ ಕಾರ್ಯಾಂಗ ಮುಖ್ಯಸ್ಥರು, ಜವಾಬ್ದಾರಿ ಸರ್ಕಾರದ ತಾಂತ್ರಿಕತೆಗಳಿಗೆ ಮತ್ತು ಪದ್ಧತಿಗಳಿಗೆ ಬದ್ಧರಾಗಿರುವರೇ? ಅವರು ಹೇಳುವಂಥ ವ್ಯವಸ್ಥೆ ಯಾವುದಾದರೂ ಇದೆ ಎಂಬುದಾದರೆ ಅದು ಸ್ವೇಚ್ಛಾನುಸಾರವಾದುದೇ ಎಂಬ ಪ್ರಶ್ನೆಯೇ ಇಲ್ಲ. ಈವರೆಗೆ, ಈ ಖಂಡದಲ್ಲಿ ಹೇಳಿರುವ ಭಾಷೆಯ ಮಟ್ಟಿಗೆ ಹೇಳುವುದಾದರೆ, ಅದನ್ನೂ ಪರಿಗಣಿಸಿದಾಗ ಸ್ವೇಚ್ಛಾನುಸಾರವಾಗಿರುವ ಅಧಿಕಾರಗಳನ್ನು, ಪ್ರಾಂತ್ಯದ ಕಾರ್ಯಾಂಗದ ಮುಖ್ಯಸ್ಥರಲ್ಲಿ ನಿಹಿತಗೊಳಿಸಿರುವುದು ಮುಂದುವರಿಸಲಾಗಿದೆ ಎಂಬುದನ್ನು ಒಪ್ಪಿಕೊಳ್ಳಲಾಗಿದೆ. ಅವರು ಬದ್ಧರಾಗಿರಬೇಕಾದ ಸೂಚನಾದೇಶಗಳ ಲಿಖಿತ ದಾಖಲೆ ಪತ್ರ ಎಂದರೆ, ನಾವು ಈಗ ಅದನ್ನು ಅನುಸೂಚಿ ಎಂದು ಕರೆದಿದ್ದೇವೆ, ಇದನ್ನು ನಾವು ಪರಿಗಣಿಸಿದ್ದಾದರೆ, ಅದು ವಾದದ ವಿಷಯವಲ್ಲ ಎಂಬುದನ್ನು ಖಂಡಿತವಾಗಿಯೂ ಮಾನ್ಯ ಅಧ್ಯಕ್ಷರಿಗೆ ಹೇಳಬಯಸುತ್ತೇನೆ. ವಿಷಯವು ಹೀಗಿರುವಾಗ, ಇನ್ನೊಂದು ದೃಷ್ಟಿಕೋನದಿಂದ ಮಾತನಾಡಿದ ನನ್ನ ಸ್ನೇಹಿತರು ವ್ಯಕ್ತಪಡಿಸಿದ ಭಯವು ದೂರವಾಗುತ್ತದೆ.

ಮಾನ್ಯರೆ, ನಮ್ಮ ಸಂವಿಧಾನ ತಜ್ಞರು ಈವರೆಗೆ ಏನು ಮಾಡಿದ್ದಾರೆಂಬ ಬಗ್ಗೆ ನನಗೇ ಆಶ್ಚರ್ಯವಾಗುತ್ತದೆ. ನಾನು ಒಬ್ಬ ಸಾಮಾನ್ಯ ಮನುಷ್ಯನಾಗಿ, ಅವರು ಈ ಮಧ್ಯಾಂತರ ಹಂತಕ್ಕಾಗಿ ಸಹ ಪ್ರಜಾಸತ್ತಾತ್ಮಕವಾಗಿರಬೇಕಾಗಿದ್ದ ಸಂವಿಧಾನವನ್ನು ಸಿದ್ಧ ಪಡಿಸುತ್ತಿದ್ದಾರೆ ಎಂದು ನಾನು ತಿಳಿಯಲು ಪ್ರಯತ್ನಿಸುತ್ತಿದ್ದೇನೆ. ಇಂದಿನವರೆಗೂ ನನಗೆ ಈ ಮನವರಿಕೆಯಾಗಿಲ್ಲ. ಕೊನೇ ಪಕ್ಷ ಅದರಲ್ಲಿ ಹೇಳಿರುವ ವಿಷಯ ನಿರೂಪಣಾ ಶೈಲಿಯು ಹೇಗಾದರೂ ಆಗಲಿ ಅಥವಾ ಇಲ್ಲಿ ಹೇಳಿರುವ ಇತರ ತಾಂತ್ರಿಕ ಸ್ವರೂಪವಾಗಲೀ ಅಥವಾ ಈ ಪ್ರಜಾಪ್ರಭುತ್ವ ವ್ಯವಸ್ಥೆಯಾಗಲೀ ಪ್ರಜಾಪ್ರಭುತ್ವ ವ್ಯವಸ್ಥೆಯಾಗುತ್ತದೆ ಎಂದು ನನಗೆ ಅನಿಸುತ್ತಿಲ್ಲ. ಆದರೆ, ಈ ನಿರ್ದಿಷ್ಟ ಖಂಡವು ಸಂಬಂಧಪಡುವಷ್ಟರಮಟ್ಟಿಗೆ ನನ್ನ ಅಭಿಪ್ರಾಯ ಏನೇ ಇದ್ದರೂ, ರಾಜ್ಯಪಾಲರು, ಜವಾಬ್ದಾರಿಯುತ ರೀತಿಯಲ್ಲಿ ಕಾರ್ಯನಿರ್ವಹಿಸತಕ್ಕದ್ದೆಂಬುದರಲ್ಲಿ ಸಂಶಯವೇ ಇಲ್ಲ.

**ಶ್ರೀ ಮಹಮ್ಮದ್ ಷರೀಫ್** (ಮೈಸೂರು ರಾಜ್ಯ) : (ಹಿಂದೂಸ್ತಾನಿಯಲ್ಲಿ ಮಾತನಾಡಲು ಪ್ರಾರಂಭಿಸಿದರು)

**ಶ್ರೀ ಬಿ. ಪಾಕರ್ ಸಾಹಿಬ್ ಬಹಾದೂರ್** (ಮದ್ರಾಸ್ : ಮುಸ್ಲಿಮ್) : ಕ್ರಿಯಾಲೋಪ ಕುರಿತು, ಮಾನ್ಯ ಅಧ್ಯಕ್ಷರೆ, ಇಂಗ್ಲಿಷ್ ಬಲ್ಲ ಭಾಷಣಕಾರರು ಇಂಗ್ಲಿಷಿನಲ್ಲಿ ಮಾತನಾಡಬಹುದಲ್ಲ ಎಂದು ನಾನು ವಿನಂತಿಸಿಕೊಳ್ಳುತ್ತೇನೆ.

**ಶ್ರೀ ಮಹಮ್ಮದ್ ಷರೀಫ್** : ಮಾನ್ಯರೆ, ತಾವು ಈಗಾಗಲೇ ನಿರ್ಣಯವನ್ನು ಕೊಟ್ಟಿದ್ದೀರಿ.

**ಮಾನ್ಯ ಅಧ್ಯಕ್ಷರು** : ಯಾರೊಬ್ಬ ಭಾಷಣಕಾರರನ್ನು ಒಂದು ನಿರ್ದಿಷ್ಟ ಭಾಷೆಯಲ್ಲಿ ಮಾತನಾಡುವಂತೆ ಒತ್ತಾಯಪಡಿಸಬೇಕೆಂದರೆ ಹಿಂಜರಿಯಬೇಕಾಗುತ್ತದೆ.

**ಶ್ರೀ ಬಿ. ಪಾಕರ್ ಸಾಹಿಬ್ ಬಹಾದೂರ್** : ಆ ಪ್ರಕರಣದಲ್ಲಿ, ಗೌರವಾನ್ವಿತ ಭಾಷಣಕಾರರು ಇಂಗ್ಲಿಷನ್ನು ಚೆನ್ನಾಗಿ ಬಲ್ಲವರಾಗಿದ್ದಾರೆಂಬುದು ನನಗೆ ಗೊತ್ತು, ಅವರು ಇಂಗ್ಲಿಷಿನಲ್ಲಿ ಮಾತನಾಡುವಂತೆ ವಿನಂತಿಸಿಕೊಳ್ಳುತ್ತಿದ್ದೇನೆ.

**ಶ್ರೀ ಮಹಮ್ಮದ್ ಷರೀಫ್** : ನಾನು ಉರ್ದು ಭಾಷೆಯಲ್ಲಿ ಮಾತನಾಡಲು ಇಷ್ಟಪಡುತ್ತೇನೆ. *[ಮಾನ್ಯ ಅಧ್ಯಕ್ಷರೆ, ಮೌಲ್ವಿ ಅಜಿಜ್ ಅಹ್ಮದ್ ಸಾಹೆಬ್ ಅವರು ಹಾಗೂ ಬೇಗಮ್ ಐಜಾಜ್ ರಸೂಲ್ ಮಂಡಿಸಿದ ತಿದ್ದುಪಡಿಗಳಿಗೆ ನನ್ನ ಪೂರ್ಣ ಬೆಂಬಲವಿದೆ. ಈ ತಿದ್ದುಪಡಿಗಳ ಉದ್ದೇಶ ರಾಜ್ಯಪಾಲರ ಅಧಿಕಾರಗಳನ್ನು ಸೀಮಿತಗೊಳಿಸುವುದಾಗಿದೆ ಮತ್ತು ವಿಧಾನಸಭೆಗೆ, ಮಂತ್ರಿಗಳ ಚುನಾವಣೆಯಲ್ಲಿ ಆದ್ಯತೆ ನೀಡುವುದಾಗಿದೆ. ಆಡಳಿತದಲ್ಲಿ ಪ್ರಜಾಪ್ರಭುತ್ವ ತತ್ತ್ವಗಳನ್ನು ಅಳವಡಿಸಿಕೊಳ್ಳುವುದೇ ಈ ತಿದ್ದುಪಡಿಗಳ ಉದ್ದೇಶವಾಗಿದೆ. ಬಹುತೇಕ ನಾವು ಪ್ರತಿ ದಿನವೂ, ಎಲ್ಲ ವಿಷಯಗಳಲ್ಲಿಯೂ ಪ್ರಜಾಪ್ರಭುತ್ವ ತತ್ತ್ವಗಳನ್ನು ಜನಪ್ರಿಯಗೊಳಿಸಬೇಕೆಂದು ಘೋಷಿಸುವ ಮೂಲಕ ಆ ತತ್ತ್ವಗಳಿಗೆ ನಮ್ಮ ನಿಷ್ಠೆಯನ್ನು ಮತ್ತೆ ಮತ್ತೆ ಘೋಷಿಸುತ್ತಲೇ ಇದ್ದೇವೆ. ಈ ಹಿನ್ನೆಲೆಯಲ್ಲಿ ಪರಿಶೀಸಿದರೆ, ರಾಜ್ಯಪಾಲರ ಅಧಿಕಾರಗಳು ಸೀಮಿತವಾಗಿವೆ ಎಂಬುದು ಆವಶ್ಯಕವಾಗಿ ಕಂಡುಬರುತ್ತದೆ. ಸ್ವಿಟ್ಜರ್‌ಲೆಂಡ್ ಮತ್ತು ಇನ್ನಿತರ ಪ್ರಗತಿಪರ ರಾಷ್ಟ್ರಗಳಲ್ಲಿ ಯಾವ ವ್ಯವಸ್ಥೆ ಜಾರಿಯಲ್ಲಿದೆ ಎಂಬುದು ನಿಮಗೆ ತಿಳಿದಿರಬಹುದು. ಸರ್ದಾರ್ ಪಟೇಲ್ ಸಾಹೇಬ್ ಅವರ ಅಭಿಪ್ರಾಯದಂತೆ ಜನರಿಂದ ಆಯ್ಕೆಯಾದ ರಾಜ್ಯಪಾಲರಿಗೆ ಪೂರ್ಣ ಅಧಿಕಾರ ನೀಡುವಲ್ಲಿ ಬಹುಶಃ ಯಾವುದೇ ತೊಂದರೆ ಇಲ್ಲ ಎಂದು ನಾನು ಹೇಳಬಯಸುತ್ತೇನೆ. ಆದಾಗ್ಯೂ, ರಾಜ್ಯಪಾಲರು ಎಷ್ಟೇ ಸಮರ್ಥರಾಗಿರಲಿ, ಜನರ ಆಶೋತ್ತರಗಳನ್ನು ನೆರವೇರಿಸುವ ಸ್ಥಿತಿಯಲ್ಲಿ ಇರಲೇಬೇಕಾಗುತ್ತದೆ ಎಂದು ನಾನು ತಿಳಿಸಬಯಸುತ್ತೇನೆ. ತಿದ್ದುಪಡಿಗಳನ್ನು ಮಂಡಿಸಿದವರು ಯಾವ ತತ್ತ್ವಗಳನ್ನು ಉಲ್ಲೇಖಿಸಿದ್ದಾರೋ, ಅವು ಅತ್ಯುತ್ತಮವಾದ ತತ್ತ್ವಗಳಾಗಿರುವ ಪ್ರಜಾಪ್ರಭುತ್ವ ತತ್ತ್ವಗಳೇ ಆಗಿವೆ. ನೀವೆಲ್ಲರೂ ಪ್ರಜಾಪ್ರಭುತ್ವದ ಪ್ರಚಂಡ ಬೆಂಬಲಿಗರಾಗಬೇಕೆಂದು ಮತ್ತು ಅವರು ತತ್ತ್ವಗಳ ಶ್ರೇಷ್ಠ ಪ್ರತಿಪಾದಕರಾಗಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ. ನಾನು ಈ ತಿದ್ದುಪಡಿಗಳನ್ನು ಬಲವಾಗಿ ಬೆಂಬಲಿಸುತ್ತೇನೆ ಹಾಗೂ ನೀವೂ ಬೆಂಬಲಿಸಬೇಕೆಂದು ವಿನಂತಿಸಿಕೊಳ್ಳುತ್ತೇನೆ]*

**ಶ್ರೀ ಎನ್.ವಿ. ಗಾಡ್ಗಿಲ್** (ಬಾಂಬೆ : ಸಾಮಾನ್ಯ) : ಮಾನ್ಯ ಅಧ್ಯಕ್ಷರೆ, ನಾನು ಈ ತಿದ್ದುಪಡಿಯನ್ನು ವಿರೋಧಿಸಬಯಸುತ್ತೇನೆ. ಪ್ರಜಾಪ್ರಭುತ್ವ ವ್ಯವಸ್ಥೆಗೆ ಇನ್ನೂ ಉತ್ತಮ ಭವಿಷ್ಯವನ್ನು ದೊರಕಿಸಿಕೊಡುವಲ್ಲಿ ಮಾಡಿದ ತಿದ್ದುಪಡಿ ಇದಾಗಿದೆ ಎಂದು ನಾನು ಕೇಳಿದ್ದೇನೆ. ನನಗೆ ತಿಳಿದಿರುವಂತೆ, ಪ್ರಜಾಪ್ರಭುತ್ವವೇ ಗುರಿಯಲ್ಲ. ಇದೊಂದು ವ್ಯವಸ್ಥೆ, ಕೆಲವು ಆಶಯಗಳನ್ನು ಮತ್ತು ಇದು ಅಪೇಕ್ಷಿತ ಫಲಿತಾಂಶಗಳನ್ನು ಪಡೆದುಕೊಳ್ಳುವ ವ್ಯವಸ್ಥೆಯಾಗಿದೆ.

ಈಗ, ಯಾವ ಉದ್ದೇಶಗಳಿಗಾಗಿ ಈ ಸಂವಿಧಾನವನ್ನು ನಾವು ಸಿದ್ಧ ಪಡಿಸುತ್ತಿದ್ದೇವೆ? ಅಂಗೀಕರಿಸಿರುವ ನಿರ್ಣಯದಲ್ಲಿ ಈ ಉದ್ದೇಶಗಳನ್ನು ತಿಳಿಸಲಾಗಿದೆ. ಅದೂ ಅಲ್ಲದೇ, ದೇಶದಲ್ಲಿ ಅನೇಕ ಪಕ್ಷಗಳಿವೆ ಹಾಗೂ ಪ್ರತಿಯೊಂದು ಪಕ್ಷವೂ ತನ್ನದೇ ಆದ ಗುರಿಗಳನ್ನು ಮತ್ತು ಉದ್ದೇಶಗಳನ್ನು ತಮ್ಮದೇ ರೀತಿಯಲ್ಲಿ ವಿಶದೀಕರಿಸುತ್ತಿವೆ. ಎಂಬುದನ್ನು ಗಮನಿಸಬೇಕಾಗುತ್ತದೆ. ಈ ಗುರಿಗಳು ಮತ್ತು ಉದ್ದೇಶಗಳು, ಆಯಾ ಪಕ್ಷಗಳ ಕಾರ್ಯ

ಕ್ರಮಗಳಾಗುತ್ತವೆ. ಈ ಗುರಿಗಳು ಮತ್ತು ಧ್ಯೇಯೋದ್ದೇಶಗಳು ಕಾರ್ಯಕ್ರಮದಲ್ಲಿ ಒಳಗೊಂಡಿರದೇ, ಇವೇ ನಮ್ಮ ಗುರಿಗಳು ಮತ್ತು ಧ್ಯೇಯೋದ್ದೇಶಗಳು ಎಂದು ಸಾರ್ವಜನಿಕರಿಗೆ ಹೇಳುವುದಕ್ಕಾಗಿ ಮಾತ್ರವೇ ಇವೆ ಎಂಬುದು ಸ್ಪಷ್ಟ. ಆ ಪಕ್ಷವು ಅಧಿಕಾರಕ್ಕೆ ಬಂದಾಗ, ಇವುಗಳನ್ನು ಅನುಷ್ಠಾನಗೊಳಿಸಲಾಗುವುದೆಂಬ ವಿಚಾರ ಇರುತ್ತದೆ. ಆ ಪಕ್ಷಕ್ಕೆ ಅಧಿಕಾರ ಬಂದಾಗ, ಆ ಪಕ್ಷಕ್ಕೆ ಸರ್ಕಾರದ ಸಂಪೂರ್ಣ ಕಾರ್ಯಾಂಗದ ಜವಾಬ್ದಾರಿ ವಹಿಸಿಕೊಟ್ಟ ಹೊರತು, ಅದು ಇವುಗಳನ್ನು ಅನುಷ್ಠಾನಗೊಳಿಸಲಾಗುವುದಿಲ್ಲ.

ಇಷ್ಟೇ ಅಲ್ಲದೇ, ಈ ದೇಶದಲ್ಲಿ ಈಗಿರುವ ರಾಜಕೀಯ ಪ್ರವೃತ್ತಿಗಳು ಸಂಬಂಧಪಡುವಷ್ಟರಮಟ್ಟಿಗೆ ಹೇಳುವುದಾದರೆ, ಸಂಸದೀಯ ಜವಾಬ್ದಾರಿಯುಳ್ಳ ಸರ್ಕಾರವೆಂದು ಕರೆಯಬಹುದಾದ ಹಾಗೂ ಸಾಮಾನ್ಯವಾಗಿ ನಾವು ಹೊಂದಿಕೊಳ್ಳಬಹುದಾದ ವ್ಯವಸ್ಥೆಯನ್ನು ಸ್ಥಾಪಿಸುವುದಕ್ಕೆ ಇರಬೇಕಾದ ಅನುಕೂಲಕರವಾದ ವಾತಾವರಣದಲ್ಲಿ ನಾವು ಬೆಳೆದಿದ್ದೇವೆಯೇ ಎಂಬುದನ್ನು ನಾನು ಈ ಸದನದಲ್ಲಿ ತಿಳಿಸಬಯಸುತ್ತೇನೆ. ಅಂಥ ಸರ್ಕಾರ ಮಾತ್ರವೇ ನಿರ್ದಿಷ್ಟ ಪರಿಸ್ಥಿತಿಗಳಲ್ಲಿ ಕಾರ್ಯನಿರ್ವಹಿಸಬಹುದಷ್ಟೇ. ದೇಶದಲ್ಲಿ ಕೊನೇಪಕ್ಷ ಎರಡು ದೊಡ್ಡ ಪಕ್ಷಗಳು ಇರಬೇಕು ಮತ್ತು ಸದನದ ನಾಯಕನು, ಸದನದಲ್ಲಿ ಬಹುಮತ ಪಡೆದಿರುವ ಪಕ್ಷದ ವಿಶ್ವಾಸವನ್ನು ಗಳಿಸಿಕೊಂಡಿರಬೇಕೆಂಬುದು ಅಂಥ ನಿಬಂಧನೆಗಳ ಪೈಕಿ ಒಂದು ನಿಬಂಧನೆಯಾಗಿದೆ. ಇದನ್ನೇ ಬೇರೆ ರೀತಿ ಹೇಳುವುದಾದರೆ, ಅಂಥ ಭರವಸೆ ಇದ್ದವನೇ ನಾಯಕನಾಗುತ್ತಾನೆ ಹಾಗೂ ಅವನು ತನ್ನ ಸಹೋದ್ಯೋಗಿಗಳನ್ನು ಆಯ್ಕೆ ಮಾಡಿಕೊಳ್ಳಲು ಅವನಿಗೆ ನೀವು ಅವಕಾಶ ಕೊಡದಿದ್ದರೆ, ಯಾವ ಕಾರ್ಯಕ್ರಮಗಳನ್ನು ಆಧಾರವಾಗಿಟ್ಟುಕೊಂಡು ಆ ಪಕ್ಷವು ಚುನಾವಣೆಯಲ್ಲಿ ಗೆದ್ದುಬಂದಿದೆಯೋ ಆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಜವಾಬ್ದಾರಿಯನ್ನು ಆತನ ಹೆಗಲ ಮೇಲೆ ಇಡದೇ ಇದ್ದರೆ, ಅದು ಪ್ರಜಾಪ್ರಭುತ್ವ ವ್ಯವಸ್ಥೆಯನ್ನೇ ಹಾಳುಮಾಡುವುದಲ್ಲದೇ ಯಾವುದೇ ಪ್ರಗತಿ ಸಾಧಿಸಲು ಅವಕಾಶಗಳೇ ಇರುವುದಿಲ್ಲ ಎಂಬುದು ನನ್ನ ಭಾವನೆ. ಇದಕ್ಕಿಂತ ಹೆಚ್ಚು ಮುಖ್ಯವಾದ ವಿಷಯ ಯಾವುದೆಂದರೆ ನಾವು ಈ ತಿದ್ದುಪಡಿಯನ್ನು ಅಂಗೀಕರಿಸಿದ್ದಾದರೆ ಯಾವುದೇ ಸಮ್ಮಿಶ್ರ ಸರ್ಕಾರಗಳು ರಾಷ್ಟ್ರದಲ್ಲಿ ಪ್ರಗತಿಗೆ ಸಹಾಯಕವಾಗುವುದಿಲ್ಲ. ಸಮ್ಮಿಶ್ರ ಸರ್ಕಾರವು ಕೆಲವೊಂದು ಒಡಂಬಡಿಕೆ, ಕೆಲವೊಂದು ಒಪ್ಪಂದಗಳನ್ನು ಅವಲಂಬಿಸಿರುತ್ತದೆ. ಆದರೆ, ಈ ತಿದ್ದುಪಡಿಯ ಪ್ರಕಾರ, ಅಪರಿಚಿತ ಹಾಗೂ ಪರಸ್ಪರ ವಿರುದ್ಧ ಮನೋಭಾವವುಳ್ಳ ಶಕ್ತಿಗಳು ಕಾರ್ಯಾಂಗವನ್ನು ಪ್ರವೇಶಿಸುವಂತಾಗುತ್ತದೆ.

ಅಷ್ಟೇ ಅಲ್ಲದೆ, ನಾವು ಈಗಷ್ಟೇ ಚರ್ಚಿಸಿರುವಂತೆ, ವರ್ಗಾಯಿಸಬಹುದಾದ ಏಕಮತ ಅಥವಾ ವರ್ಗಾಯಿಸಲಾಗದ ಏಕಮತ ಪ್ರಕ್ರಿಯೆಯ ಮೂಲಕ ಮಂತ್ರಿಗಳು ಆಯ್ಕೆಯಾದರೆ, ಅದರ ಪರಿಣಾಮವೇನು? ಖಾತೆಗಳ ಹಂಚಿಕೆಯ ಉದ್ದೇಶಕ್ಕಾಗಿ ರಾಜ್ಯಪಾಲರಿಗೆ ಯಾವುದರಿಂದ ಮಾರ್ಗದರ್ಶನ ದೊರೆಯುತ್ತದೆ? ಅವರು ಕೇವಲ ಸಂವಿಧಾನಾತ್ಮಕವಾದ ಮುಖ್ಯಸ್ಥರಾಗಿರುತ್ತಾರೆ ಎಂಬುದು ಒಂದು ದೃಷ್ಟಿಕೋನವಾದರೆ, ಪಕ್ಷದ ವಿಚಾರವಾದರೆ, ಇದಕ್ಕೆ ಪ್ರತಿಯಾಗಿ, ನೀವು ಈ ತಿದ್ದುಪಡಿಯನ್ನು ಒಪ್ಪಿಕೊಂಡಿದ್ದಾದರೆ, ಅವರು ಚಲಾಯಿಸಬಹುದಾದ ಅಪರಿಮಿತ ಅಧಿಕಾರಗಳನ್ನು ನೀವು ನೀಡಿದ್ದಾದರೆ, ಅದು ಪ್ರಜಾಪ್ರಭುತ್ವ ವ್ಯವಸ್ಥೆಯ ಪ್ರಯೋಜನಕ್ಕಾಗಿ ಅಲ್ಲ. ಆದರೆ, ಅವರ ನಿರಂಕುಶ ಪ್ರಭುತ್ವಕ್ಕೆ ಅವಕಾಶ ಕೊಟ್ಟಂತಾಗುತ್ತದೆ. ಉದಾಹರಣೆಗೆ ಹೇಳುವುದಾದರೆ, ಕಾರ್ಯಾಂಗವಾಗಿ ರಚಿತವಾಗಿರುವ ಒಂಬತ್ತು ಜನರ ಗುಂಪಿನ ಪೈಕಿ ಬಹುಮತ ಪಕ್ಷಕ್ಕೆ ನಾಲ್ಕು ಜನ, ಇನ್ನೊಂದು ಪಕ್ಷಕ್ಕೆ ಇಬ್ಬರು, ಮೂರನೇ ಪಕ್ಷಕ್ಕೆ ಒಬ್ಬರು ಹಾಗೂ ಇನ್ನೆರಡು ಗುಂಪುಗಳಿವೆ, ತಲಾ ಒಂದರಂತೆ ಆಯ್ಕೆಯಾಗಿವೆ ಎಂದು ಭಾವಿಸಿರಿ. ರಾಜ್ಯಪಾಲರು, ಅಷ್ಟೊಂದು ಸಮರ್ಥರಾಗಿದ್ದರೆ, ಅತ್ಯಂತ ಮುಖ್ಯ ಖಾತೆಗಳನ್ನು ಅಲ್ಪ ಬಹುಮತ ಪಡೆದ ಗುಂಪುಗಳಿಗೆ ಸೇರಿದ ಇಬ್ಬರಿಗೆ ಖಂಡಿತವಾಗಿ ಹಂಚಿಕೆ ಮಾಡುತ್ತಾರೆ. ಅಂಥ ಪರಿಸ್ಥಿತಿಯು ಈ ದೇಶದ ಪ್ರಗತಿಗೆ ಉತ್ತಮವಾಗುತ್ತದೆಂದು ತಿಳಿಯಬಹುದೇ? ಯಾವ ಕಾರ್ಯಕ್ರಮಗಳ ಆಧಾರವಾಗಿಟ್ಟುಕೊಂಡು ಬಹುಮತ ಪಡೆದು ಗೆದ್ದಿರುವ ಪಕ್ಷವು ಹೆಚ್ಚಿಗೆ ಏನನ್ನು

ನಿರೀಕ್ಷಿಸಬಹುದು? ಈ ತಿದ್ದುಪಡಿಯನ್ನು ಒಪ್ಪಿಕೊಂಡಿದ್ದಾದರೆ, ನೀವು ಮತದಾರರಿಗೆ ಹಾಗೂ ಯಾವ ಕಾರ್ಯಕ್ರಮಗಳ ಮೇಲೆ ಚುನಾವಣೆಯಲ್ಲಿ ವಿಜಯ ಸಾಧಿಸಿದೆಯೋ ಆ ಕಾರ್ಯಕ್ರಮಗಳನ್ನು ಮತದಾರರ ಮುಂದೆ ಇಟ್ಟಿರುವ ಪಕ್ಷಕ್ಕೆ ಬಹು ದೊಡ್ಡ ಅನ್ಯಾಯ ಮಾಡುತ್ತೀರಿ ಎಂದು ನಾನು ಭಾವಿಸುತ್ತೇನೆ. ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುವುದೆಂದು ಮತದಾರರು ನಿರೀಕ್ಷಿಸಿರುವುದನ್ನು ಸಮರ್ಥಿಸ ಬಹುದಾಗಿದೆ. ಆದರೆ, ಅಂಥ ತಿದ್ದುಪಡಿಯನ್ನು ಅಂಗೀಕರಿಸುವುದರಿಂದ ಅದರ ಅನುಷ್ಠಾನವನ್ನು ಅಸಾಧ್ಯಗೊಳಿಸುವುದಾದರೆ, ನೀವು ಮತದಾರರಿಗೆ ನ್ಯಾಯ ನೀಡಿದಂತೆ ಆಗುವುದಿಲ್ಲ ಎಂದು ನನಗೆ ಅನಿಸುತ್ತದೆ. ಇದನ್ನೇ ಬೇರೆ ರೀತಿ ಹೇಳುವುದಾದರೆ, ಇದು ಪ್ರತಿಯೊಂದು ಅಂಶದಿಂದಲೂ ಅಪಾಯಕಾರಿ ಎಂದು ಗೌರವಪೂರ್ವಕ ಮನವಿ ಮಾಡಿಕೊಳ್ಳುತ್ತೇನೆ. ಇದು ಮತದಾರರಿಗೆ ಅನುಚಿತವಾಗುತ್ತದೆ. ಇದು ಕಾರ್ಯಸಾಧ್ಯ ವಾದುದಲ್ಲ. ಇದು ರಾಜ್ಯಪಾಲರಿಗೆ ಅತಿಯಾದ ಅಧಿಕಾರಗಳನ್ನು ನೀಡುತ್ತದೆ. ಈ ತಿದ್ದುಪಡಿಯನ್ನು ನಾನು ಒಪ್ಪಿಕೊಳ್ಳಲು ಸಾಧ್ಯವಿಲ್ಲ.

ತಿದ್ದುಪಡಿಯನ್ನು ಬೆಂಬಲಿಸಿದವರಲ್ಲಿ ಒಬ್ಬರು ಹೇಳುವಂತೆ, ಇದು ಶಕ್ತಿಶಾಲಿಯಾದ ಹಾಗೂ ಸುಸ್ಥಿರ ಸರ್ಕಾರವನ್ನು ತರುತ್ತದೆ. ಶಕ್ತಿಶಾಲಿ ಸರ್ಕಾರ ಎಂಬುದಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ, ಅಂಥ ಸರ್ಕಾರವನ್ನು ಪಡೆಯಲು ಸಾಧ್ಯವಿಲ್ಲವೆಂದು ನಾನು ಭಾವಿಸಿದ್ದೇನೆ. ಅದು ದುರ್ಬಲ ಸರ್ಕಾರವಾಗು ವುದರಲ್ಲಿ ಸಂದೇಹವೇ ಇಲ್ಲ. ಸಾಮೂಹಿಕ ಜವಾಬ್ದಾರಿ ಇರದಿದ್ದರೆ, ಆಡಳಿತದಲ್ಲಿ ಮುಂದುವರಿಯುವುದಕ್ಕಾಗಲಿ ಅಥವಾ ಸಾಮರಸ್ಯವಾಗಲೀ ಇರುವುದಿಲ್ಲ. ನೀವು ಆ ತಿದ್ದುಪಡಿಯನ್ನು ಒಪ್ಪಿಕೊಂಡಿದ್ದಾದರೆ, ಅವರು ವಿಧಾನಸಭೆಯ ನಿಗದಿತ ಅವಧಿಯವರೆಗೂ ಪದಧಾರಣ ಮಾಡುತ್ತಾರೆ. ಅದು ಸುಸ್ಥಿರವಾಗಿದ್ದರೂ ಪ್ರಗತಿಪರವಾಗುವುದಿಲ್ಲ. ಪ್ರಜಾಪ್ರಭುತ್ವ ಸರ್ಕಾರ ಹಾಗೂ ಜವಾಬ್ದಾರಿ ಸರ್ಕಾರದ ವಿಚಾರವೇನೆಂದರೆ, ಚುನಾಯಿತ ಸದಸ್ಯರು, ಶಾಸನಬದ್ಧ ಅವಧಿಯಲ್ಲಿಯೂ ಏನನ್ನಾದರೂ ಮಾಡಿದರೂ, ದೇಶದ ವಿಶ್ವಾಸವನ್ನೇ ಕಳೆದುಕೊಳ್ಳುವಂಥ ರೀತಿಯಲ್ಲಿ ಕಾರ್ಯನಿರ್ವಹಿಸಿದಂತಾಗುತ್ತದೆ. ಸಂವಿಧಾನದಲ್ಲಿ ವಿಸರ್ಜನೆಗೆ ಅವಕಾಶ ಕೊಡುವಂಥ ಸಾಕಷ್ಟು ಪರಿಣಾಮಕಾರಿಯಾಗುವಂಥ ಉಪಬಂಧ ಇರಬೇಕಾಗುತ್ತದೆ. ಆದ್ದರಿಂದ ಸದನವು ಈ ತಿದ್ದುಪಡಿಯನ್ನು ಕೈಬಿಡುವುದನ್ನು ಸಮಂಜಸವಾಗಿ ಸಮರ್ಥಿಸಿಕೊಳ್ಳಬಹುದೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಖಾಜಿ ಸೈಯದ್ ಕರೀಮುದ್ದೀನ್** (ಬೇರಾರ್ : ಮುಸ್ಲಿಮ್) : *[ಮಾನ್ಯ ಅಧ್ಯಕ್ಷರೆ, ಶ್ರೀ ಅಜಿಜ್ ಅಹ್ಮದ್ ಹಾಗೂ ಬೇಗಮ್ ಐಜಾಜ್ ರಸೂಲ್ ಅವರು ಮಂಡಿಸಿದ ತಿದ್ದುಪಡಿಗಳನ್ನು ನಾನು ಬೆಂಬಲಿಸುತ್ತೇನೆ. ಕಳೆದ ಮೂರು ದಿನಗಳಿಂದ, ಲೀಗ್‌ನ ಸದಸ್ಯರು ಮಾತನಾಡಿದಾಗಲೆಲ್ಲ, ಅವರ ಮಾತಿಗೆ ಉತ್ತರಿಸುತ್ತಾ, ಧರ್ಮವು ಅಪಾಯದಲ್ಲಿದೆ ಎಂಬ ಘೋಷಣೆಯನ್ನು ಕಳೆದ ಮೂರು ದಿನಗಳಿಂದಲೂ ಮಾಡುತ್ತಲೇ ಇರುತ್ತಾರೆ ಎಂದು ಹೇಳಲಾಗಿದೆ ಎಂಬುದನ್ನು ನಾನು ನೋಡುತ್ತಿದ್ದೇನೆ. ಆದ್ದರಿಂದ ನಾವು (ಲೀಗ್‌ನ ಸದಸ್ಯರು) ಸಮಾಜವಾದವನ್ನಾಗಲೀ ಮತ್ತು ಪ್ರಜಾಪ್ರಭುತ್ವವನ್ನಾಗಲೀ ಎಂದೂ ಬೆಂಬಲಿಸುವುದೇ ಇಲ್ಲ. ಶ್ರೀ ಕಾಮತ್ ಅವರು, ಸಮಾಜವಾದವನ್ನು ಗಾಂಧೀಜಿಯವರಿಗೆ ಮತ್ತು ಪಂಡಿತ್ ಜವಾಹರಲಾಲ್ ನೆಹರು ಅವರಿಗೆ ಕಲಿಸಿಕೊಡಬೇಕಾಗಿಲ್ಲ ಎಂದು ಸಹ ಹೇಳಿದ್ದಾರೆ. ಬಹಳ ಕಾಲದಿಂದಲೂ ಅವರಿಗೆ ಅದನ್ನು ಕಲಿಸಲು ಪ್ರಯತ್ನಿಸುತ್ತಲೇ ಇದ್ದಾರೆ. ಬಹುಶಃ ಅವರು ಅದನ್ನು ಬಹಳ ಚೆನ್ನಾಗಿ ತಿಳಿದಿದ್ದಾರೆಂದು ನಾನು ಹೇಳುತ್ತೇನೆ. ಇದೆಲ್ಲವೂ ಏನೇ ಇದ್ದರೂ, ಉರ್ದು ಕವಿಯೊಬ್ಬರು ಹೇಳಿದುದನ್ನೇ ಶ್ರೀ ಕಾಮತ್ ಅವರಿಗೆ ಹೇಳಬೇಕಾಗಿದೆ.

"ರಾತ್ರಿ ಕಂಠಪೂರ್ತಿ ಕುಡಿಯುತ್ತಾನೆ. ಬೆಳಗ್ಗೆ ಪಶ್ಚಾತ್ತಾಪ ಪಡುತ್ತಾನೆ. ಆದರೂ ಅವನು ಎಂದೂ ಸ್ವರ್ಗಸುಖವನ್ನು ತಪ್ಪಿಸಿಕೊಳ್ಳುವುದಿಲ್ಲ."

ಶ್ರೀ ಕಾಮತ್ ಅವರು ನಾಯಕನ ಪಾತ್ರ ವಹಿಸಬಹುದಷ್ಟೇ. ಆದರೆ ಮುಸ್ಲಿಮ್ ಲೀಗ್‌ನ್ನು ದ್ವೇಷಿಸುವುದರಿಂದ ಯಾರೂ ನಾಯಕರಾಗುವುದಿಲ್ಲ. ಇಷ್ಟೇ ಅಲ್ಲದೆ, ಇನ್ನೊಂದು ಮುಖ್ಯವಾದ ಸಂಗತಿಯನ್ನು ಇಲ್ಲಿ ಹೇಳಲೇಬೇಕಾಗಿದೆ. ಕಾಂಗ್ರೆಸ್ಸಿನಿಂದ ಯಾವುದೇ ಪ್ರಸ್ತಾವವನ್ನು ಮುಂದಿಟ್ಟಾಗ, ನೀವು ಅದನ್ನು ಒಪ್ಪಿಕೊಳ್ಳುತ್ತೀರಿ. ಆದರೆ ಮುಸ್ಲಿಮ್ ಲೀಗ್‌ನಿಂದ ಯಾವುದೇ ಪ್ರಸ್ತಾವ ಬಂದಾಗಲೆಲ್ಲ ಪಾಕಿಸ್ತಾನಿವಾಲಾಗಳಿಂದ ಪ್ರಸ್ತಾವಿಸಲಾಗುವ ವಿಷಯವೆಂದು ನೆಪವೊಡ್ಡಿ ಅದನ್ನು ಒಪ್ಪಿಕೊಳ್ಳುವುದಿಲ್ಲ. ಈ ಸಂವಿಧಾನ ಸಭೆಯು, ರಾಜಕೀಯ ವೇದಿಕೆಯಲ್ಲ, ಇದು ಸಂವಿಧಾನಾತ್ಮಕ ಸಂಸ್ಥೆ. ಇಲ್ಲಿ ಮುಸ್ಲಿಮ್ ಲೀಗ್ ಕೂಡಾ ತನ್ನ ಅಭಿಪ್ರಾಯಗಳನ್ನು ಮಂಡಿಸಬಹುದಾಗಿದೆ. ಹಾಗೆಯೇ ಪ್ರತಿಯೊಬ್ಬ ಸದಸ್ಯನೂ ಹಾಗೆ ಮಾಡಲು ಹಕ್ಕು ಇದೆ. ನಮ್ಮ ಮುಂದಿರುವ ತಿದ್ದುಪಡಿಯು, "ಮಂತ್ರಿಗಳು ಸದನದಿಂದ ಆಯ್ಕೆಯಾಗಿರಬಹುದು". ಬ್ರಿಟಿಷರು ಭಾರತವನ್ನು ಬಿಟ್ಟುಹೋಗುತ್ತಿದ್ದಾರೆ. ಆದರೆ, ಅವರ ನೆರಳು ನಮ್ಮನ್ನು ಬಿಟ್ಟು ಹೋಗುತ್ತಿಲ್ಲ. ಬ್ರಿಟಿಷ್ ಆಳ್ವಿಕೆ ಮತ್ತು ಬ್ರಿಟಿಷ್ ಕಾರ್ಯಾಂಗವು ಪ್ರಜಾಪ್ರಭುತ್ವದ ಮೇಲೆ ಆಧಾರಿತವಾಗಿದೆ ಎಂದು ನೀವು ಹೇಳುತ್ತಿದ್ದೀರಿ. ಇದು ಸಂಪೂರ್ಣವಾಗಿ ತಪ್ಪು. ನೀವು ಅಮೆರಿಕದ ಮತ್ತು ಸ್ವಿಟ್ಜರ್‌ಲೆಂಡ್‌ನ ಸಂವಿಧಾನವನ್ನು ಗಮನಿಸಬೇಕು. ೧೯೨೧ರಿಂದ ಹಾಗೂ ಅದರಲ್ಲಿ ಮುಖ್ಯವಾಗಿ ೧೯೩೫ರ ಅಧಿನಿಯಮದ ತರುವಾಯ, ನನಗೆ ಕಂಡುಬಂದ ಅಂಶವೆಂದರೆ, ಬಹುಮತ ಪಕ್ಷವು ಯಾವಾಗಲೂ ವಿರೋಧ ಪಕ್ಷಕ್ಕೆ ಎಳ್ಳಷ್ಟು ಗೌರವ ತೋರಿಸಿಲ್ಲ. ಬಹುಮತದ ಪರಿಣಾಮವಾಗಿ, ಬಹುಮತ ಪಕ್ಷವು ಕಮ್ಯುನಿಸ್ಟ್ ಪಕ್ಷವಾಗಿರಲಿ ಅಥವಾ ಇನ್ನಾವುದೋ ಪಕ್ಷವಾಗಿರಲಿ, ಮಂತ್ರಿಮಂಡಲವು ವಿರೋಧ ಪಕ್ಷದ ವಿರುದ್ಧ ಯಾವಾಗಲೂ ಪ್ರತಿಕೂಲ ಅಭಿಪ್ರಾಯ ತಳೆದಿರುವುದು ನನಗೆ ಗೊತ್ತಿದೆ. ಮಂತ್ರಿಮಂಡಲವನ್ನು ಅಧಿಕಾರದಲ್ಲಿಡುವುದಕ್ಕಾಗಿ ಬಹುಮತ ಪಕ್ಷವು ಮುಖಸ್ತುತಿ ಮಾಡಬೇಕಾಗುತ್ತದೆ. ಬಹುಮತ ಪಕ್ಷದ ಆಡಳಿತವು ಸ್ವಜನ ಪಕ್ಷಪಾತ ಹಾಗೂ ಪಕ್ಷಪಾತಗಳಿಂದ ಕೂಡಿದ್ದಾಗಿರುತ್ತದೆ ಎಂಬುದು ನನ್ನ ಭಾವನೆ. ದುಷ್ಟಶಕ್ತಿಗಳನ್ನು ನಿವಾರಿಸಿ ಪಕ್ಷದ ಬೆಂಬಲಿಗರನ್ನು ನಿಕಟವರ್ತಿಗಳಾಗಿ ಇಟ್ಟುಕೊಳ್ಳುವುದು ಕಷ್ಟ; ಆದ್ದರಿಂದ, ಪ್ರಜಾಪ್ರಭುತ್ವ ಆಧರಿತವಾಗಿರುವ ಅಂಥ ಬಹುಮತ ಪ್ರಭುತ್ವವು ಎಳ್ಳಷ್ಟೂ ಸರಿಯಾದುದಲ್ಲ ಎಂದು ಹೇಳಬೇಕಾಗುತ್ತದೆ.

ಶ್ರೀ ಅಜೀಜ್ ಅಹ್ಮದ್ ಅವರು ಮಂಡಿಸಿರುವ ತಿದ್ದುಪಡಿಯು, ಮಂತ್ರಿಗಳನ್ನು ಚುನಾಯಿಸತಕ್ಕದ್ದು ಎಂಬಷ್ಟರ ಮಟ್ಟಿಗೆ ಇದೆ. ಭಾರತದಲ್ಲಿ ಬೇಕಾಗಿರುವುದೇನೆಂದರೆ, ನಮ್ಮ ಸಂವಿಧಾನವು, ವಿಶ್ವದ ಪ್ರಗತಿಶೀಲ ರಾಷ್ಟ್ರಗಳ ಗುಂಪಿಗೆ ಭಾರವನ್ನು ಸೇರಿಸುವಂಥದ್ದಾಗಿರಬೇಕು. ನಮ್ಮ ಪರಸ್ಪರ ಭಿನ್ನಾಭಿಪ್ರಾಯಗಳನ್ನು ಪರಿಹರಿಸಿಕೊಳ್ಳಬೇಕಾದ ಸೂಕ್ಷ್ಮ ಪರಿಸ್ಥಿತಿಯನ್ನು ದಾಟಿಕೊಂಡು, ಭಾರತವು ಮುಂದೆ ಸಾಗಬೇಕಾಗಿದೆ. ಇದಕ್ಕೆ ಇರುವ ಏಕೈಕ ಮಾರ್ಗ, ಪರಸ್ಪರ ತಿಕ್ಕಾಟಗಳನ್ನು ನಿಲ್ಲಿಸಬೇಕು. ಇದಕ್ಕಾಗಿ ಪ್ರತಿಯೊಂದು ಪಕ್ಷದ ಪ್ರತಿನಿಧಿಗಳನ್ನು ಮಂತ್ರಿಮಂಡಲದಲ್ಲಿ ಸೇರಿಸಿಕೊಳ್ಳಬೇಕು.

ಬಹುಮತದ ಪಕ್ಷವು, ಹೆಚ್ಚಿನ ಪ್ರಾತಿನಿಧ್ಯವನ್ನು ಪಡೆದುಕೊಳ್ಳತಕ್ಕದ್ದು, ಅಲ್ಪಮತದ ಪಕ್ಷಗಳು ಕಡಿಮೆ ಸಂಖ್ಯೆಯಲ್ಲಿ ಸ್ಥಾನಗಳನ್ನು ಪಡೆದುಕೊಳ್ಳತಕ್ಕದ್ದು. ಇಂಥ ಸನ್ನಿವೇಶಗಳಲ್ಲಿ, ಬೇಗಮ್ ಸಾಹೇಬ್ ಅವರು ಅಭಿಪ್ರಾಯ ಪಡುವಂತೆ, ಮಂತ್ರಿಮಂಡಲವು, ಅಧಿಕಾರದಲ್ಲಿ ಮುಂದುವರಿಯುತ್ತಿರುವವರೆಗೆ ಸದನವು ಇರತಕ್ಕದ್ದು. ಆಮೇಲೆ ಸಮಾಪನಗೊಳ್ಳತಕ್ಕದ್ದು. ಇದರಲ್ಲಿ ಹೊಸದೇನೂ ಇಲ್ಲ. ಇದನ್ನು ಅಮೆರಿಕದ ಸಂವಿಧಾನದಲ್ಲಿ ಸ್ಪಷ್ಟವಾಗಿ ತಿಳಿಸಲಾಗಿದೆ. ಹೀಗೆ ಮಾಡುವುದರಿಂದ, ಕಾರ್ಯಾಂಗ, ನ್ಯಾಯಾಂಗ ಮತ್ತು ಶಾಸಕಾಂಗಗಳನ್ನು ಮೂರು ವಿಭಾಗಗಳಾಗಿ ರಚಿಸಬಹುದು. ಈ ಶಾಸಕಾಂಗವು, ಕಾರ್ಯನೀತಿಯನ್ನು ರೂಪಿಸುತ್ತದೆ. ನ್ಯಾಯಾಂಗದ ಪ್ರಕಾರ್ಯವು, ಕಾರ್ಯಾಂಗವು ತನ್ನ ಇತಿಮಿತಿಗಳನ್ನು ಮೀರದಂತೆ ತಡೆಯುವುದಾಗಿದೆ ಮತ್ತು ಕಾರ್ಯಾಂಗದ ಕರ್ತವ್ಯವು, ಶಾಸಕಾಂಗವು ರೂಪಿಸಿದ ಕಾರ್ಯನೀತಿಗಳನ್ನು ನೆರವೇರಿಸುವುದೇ ಆಗಿದೆ.

ಇಂದು ಇಲ್ಲಿ ಅನೇಕ ಧರ್ಮಗಳಿವೆ, ವಿವಿಧ ಪಕ್ಷಗಳಿವೆ ಮತ್ತು ದೇಶದಲ್ಲಿ ಅಸಂಖ್ಯಾತ ವರ್ಗಗಳು–

ಪಂಗಡಗಳೂ ಇರುವುದು ಕಂಡುಬರುತ್ತದೆ. ಪ್ರತಿಯೊಂದು ಪಕ್ಷವು ಸರ್ಕಾರವನ್ನು ಪ್ರತಿನಿಧಿಸತಕ್ಕದ್ದು ಎಂಬುದು ಅತ್ಯುತ್ತಮ ವಿಧಾನವಾಗುತ್ತದೆ. ಅದು ಸರ್ಕಾರದ ಸ್ಥಿರತೆಯನ್ನು ಖಚಿತ ಪಡಿಸಿಕೊಳ್ಳುತ್ತದೆ ಮತ್ತು ಪರಸ್ಪರ ತಿಕ್ಕಾಟವನ್ನು ಸಹ ನಿವಾರಿಸುತ್ತದೆ. ಆದ್ದರಿಂದ, ಈಗಷ್ಟೇ ಮಂಡಿಸಿರುವ ತಿದ್ದುಪಡಿಯನ್ನು ನಾನು ಬೆಂಬಲಿಸುತ್ತೇನೆ ಹಾಗೂ ಸದನವು ಅಂಗೀಕರಿಸುವುದೆಂದು ಆಶಿಸಿದ್ದೇನೆ.*

**ಶ್ರೀ ಮಹಬೂಬ್ ಅಲಿಬೇಗ್ ಸಾಹಿಬ್ ಬಹಾದ್ದೂರ್** (ಮದ್ರಾಸ್ : ಮುಸ್ಲಿಮ್) : ಮಾನ್ಯ ಅಧ್ಯಕ್ಷರೆ, ನನ್ನ ಸ್ನೇಹಿತರಾದ ಶ್ರೀ ಅಜೀಜ್ ಅಹ್ಮದ್ ಖಾನ್ ಸಾಹೇಬ್ ಅವರು ಮಂಡಿಸಿದ ತಿದ್ದುಪಡಿಗಳನ್ನು ಮತ್ತು ಬೇಗಮ್ ಐಜಾಜ್ ರಸೂಲ್ ಅವರು ಮಂಡಿಸಿದ ಮತ್ತೊಂದು ತಿದ್ದುಪಡಿಯನ್ನು ನಾನು ಅತ್ಯಂತ ಸಂತೋಷದಿಂದ ಬೆಂಬಲಿಸುತ್ತೇನೆ. ಹಾಗೆ ಮಾಡುವಾಗ ನಮ್ಮ ಮುಂದಿಟ್ಟಿರುವ ಕರಡು ಸಂವಿಧಾನ ಹಾಗೂ ಅದರ ಮೇಲಿನ ವರದಿ, ಪ್ರಾಂತೀಯ ಸ್ವಾಯತ್ತತೆಗೆ ಸಂಬಂಧಿಸಿದಂತೆ, ರಾಜ್ಯಪಾಲರ ಚುನಾವಣೆ ಮತ್ತು ಅಡ್ವೋಕೇಟ್ ಜನರಲ್ ಅವರ ಪದಾವಧಿ–ಇವುಗಳಿಗೆ ಸಂಬಂಧಿಸಿದ್ದು, ಇದರಲ್ಲಿ ಕೆಲವು ಪ್ರಶ್ನೆಗಳನ್ನು ಹೊರತುಪಡಿಸಿ, ಇದನ್ನು ೧೯೩೫ರ ಸಂವಿಧಾನದಿಂದ ಪ್ರತಿ ಮಾಡಲಾಗಿದೆ ಎಂದು ನನಗೆ ಕಂಡುಬರುತ್ತದೆ ಎಂಬುದಾಗಿ ಹೇಳುವುದು ವಿಷಯಕ್ಕೆ ದೂರವಾಗಲಾರದು. ಮಾನ್ಯರೆ, ನಾವು ನಮ್ಮ ಸಂವಿಧಾನವು ಪ್ರಜಾಸತ್ತಾತ್ಮಕವಾಗಿರಬೇಕೆಂದು ಇಚ್ಛಿಸಿದರೆ, ವಿಧಾನಮಂಡಲ, ಮಂತ್ರಿಮಂಡಲ ಮತ್ತು ಕಾರ್ಯಾಂಗ ಇವುಗಳಲ್ಲಿ ಜನರ ವಿವಿಧ ವರ್ಗಗಳ ಪ್ರತಿನಿಧಿಗಳು ಇರುವಂತೆ ನಾವು ನೋಡಿಕೊಳ್ಳಬೇಕಾಗುತ್ತದೆ.

ನಾವು, ಪ್ರಜಾಪ್ರಭುತ್ವ ಸಂಸದೀಯ ವ್ಯವಸ್ಥೆ ಎಂದು ಕರೆಯಲಾಗುವ ವ್ಯವಸ್ಥೆಯನ್ನು ಆಧರಿಸುವುದಾದರೆ, ಇದು ಪ್ರಜಾಪ್ರಭುತ್ವ ಸರ್ಕಾರ–ವ್ಯವಸ್ಥೆಯಾಗಿಲ್ಲ ಎಂಬುದು ಸಂವಿಧಾನ ಪಂಡಿತರ ಪರಿಗಣಿತ ಅಭಿಪ್ರಾಯ. ನಮ್ಮ ಮುಂದಿರಬೇಕಾದ ಮಾದರಿ ಯಾವುದೆಂದರೆ, ಸ್ವಿಸ್ ಸರ್ಕಾರದ ಮಾದರಿ. ಸಮಾಜದ ಎಲ್ಲ ವರ್ಗಗಳಿಗೆ ವಿಧಾನಮಂಡಲದಲ್ಲಿ ಪ್ರಾತಿನಿಧ್ಯ ಇದ್ದಾಗ ಮಾತ್ರ ಅಂಥ ಸರ್ಕಾರದ ವ್ಯವಸ್ಥೆಯನ್ನು ಪ್ರಜಾಪ್ರಭುತ್ವ ವ್ಯವಸ್ಥೆ ಎಂದು ಕರೆಯುತ್ತಾರೆ. ಚುನಾವಣಾ ಪದ್ಧತಿ ಯಾವುದು ಆಗಿರಬೇಕು, ಮತಕ್ಷೇತ್ರಗಳು ಯಾವುವು ಆಗಿರಬೇಕು, ಹಾಗೆಯೇ ಇನ್ನು ಅನೇಕ ವಿಷಯಗಳ ಬಗ್ಗೆ ನಮಗೆ ಗೊತ್ತಿಲ್ಲದೇ ಇರುವುದರಿಂದ, ನಾವು ಈಗ ತೊಂದರೆಯಲ್ಲಿದ್ದೇವೆ. ಅದು ಹೇಗೆ ಇರಲಿ, ಚುನಾವಣಾ ಕ್ಷೇತ್ರಗಳು, ಪ್ರಾದೇಶಿಕ ಚುನಾವಣಾ ಕ್ಷೇತ್ರಗಳಾಗಿರಬೇಕು ಮತ್ತು ಅದೇ ಕಾಲಕ್ಕೆ ಸಮುದಾಯಗಳಿಗಾಗಿ ಅಥವಾ ಹಿತಾಸಕ್ತಿಗಳಿಗಾಗಿ ಕೆಲವು ಮೀಸಲಾತಿಗೆ ಅವಕಾಶ ಮಾಡಬೇಕಾಗುತ್ತದೆ. ಇದರಿಂದ ಆ ಸಮುದಾಯಗಳು ತಮ್ಮ ತಮ್ಮ ಜನರನ್ನು ವಿಧಾನಮಂಡಲಕ್ಕೆ ಆಯ್ಕೆ ಮಾಡಿ ಕಳುಹಿಸಬಹುದು ಎಂದು ನಾನು ಹೇಳಲು ಇಚ್ಛಿಸುತ್ತೇನೆ. ಮಾನ್ಯರೇ, ಈಗ ತಾವು ಅನುಷ್ಠಾನಗೊಳಿಸಬೇಕೆಂದಿರುವ ವಿಧಾನ ಮತ್ತು ಭಾರತದಲ್ಲಿರುವ ಪ್ರಾಂತ್ಯಗಳ ವಿಶಿಷ್ಟ ಸನ್ನಿವೇಶಗಳಲ್ಲಿ ಮತ್ತು ಪ್ರಾಂತ್ಯದ ಎಲ್ಲ ವರ್ಗಗಳಿಂದ ಮತ್ತು ವಿವಿಧ ಹಿತಾಸಕ್ತಿಯುಳ್ಳ ವ್ಯಕ್ತಿಗಳಿಂದ, ವಿಧಾನಮಂಡಲಕ್ಕೆ ಪ್ರತಿನಿಧಿಗಳನ್ನು ಆಯ್ಕೆ ಮಾಡಬಹುದಾಗಿದೆ. ಯಾವುದೇ ವಿಧಾನದ ಮೂಲಕವಾಗಲೀ ಸ್ಥಾನಗಳ ಮೀಸಲಾತಿ ಸಹಿತ, ವೇಯ್‌ಟೇಜ್ ಅಥವಾ ಯಾವುದೇ ವಿಧಾನದ ಮೂಲಕ, ವಿಧಾನಮಂಡಲಕ್ಕೆ ಜನರ ಪ್ರತಿನಿಧಿಗಳ ಆಯ್ಕೆಯ ವಿಧಾನವನ್ನು ನೀವು ಅಂಗೀಕರಿಸುವುದಾದರೆ– ಹಾಗೂ ಯಾವ ವಿಧಾನದ ಮೂಲಕ ಆಯ್ಕೆ ಮಾಡಲಾಗಿದೆ ಎಂಬುದು ಮುಖ್ಯ ವಿಷಯವಾಗುವುದಿಲ್ಲ. ಅದು ಈಗ ಉದ್ಭವಿಸಿಯೂ ಇಲ್ಲ– ಆಗ ಮಂತ್ರಿಮಂಡಲದಲ್ಲಿ ಅಲ್ಪಸಂಖ್ಯಾತರು ಅಥವಾ ವಿವಿಧ ವರ್ಗಗಳವರಿಗೆ ವಿಧಾನಮಂಡಲದಲ್ಲಿ ಅವಕಾಶ ಸಿಕ್ಕಿದೆ ಎಂದು ಆವಶ್ಯಕವಾಗಿ ಗೊತ್ತಾಗುತ್ತದೆ. ಸ್ವಿಸ್ ಸರ್ಕಾರದಲ್ಲಿ ಅದನ್ನೇ ಅನುಸರಿಸಲಾಗುತ್ತಿದೆ ಮತ್ತು ಸ್ವಿಸ್ ಸಂವಿಧಾನವು ಅತ್ಯಂತ ಪ್ರಜಾಸತ್ತಾತ್ಮಕವಾದುದೆಂದು ಹೇಳಲು ಕಾರಣ, ಅದು ದೇಶದ ಎಲ್ಲ ವರ್ಗಗಳವರನ್ನು ಮತ್ತು ಎಲ್ಲ ಭಾಗಗಳನ್ನು ಮತ್ತು ಅದರ ವಿಧಾನಮಂಡಲವನ್ನು ಅದೇ ರೀತಿ ಮಂತ್ರಿಮಂಡಲವನ್ನು ಪ್ರತಿನಿಧಿಸುತ್ತದೆ. ಈ ವಿಧಾನವನ್ನು ಸ್ವಿಟ್ಜರ್‌ಲೆಂಡ್‌ನಲ್ಲಿ ಅನುಸರಿಸಲಾಗುತ್ತಿದೆ.

ವಿಧಾನಮಂಡಲವು ಎಲ್ಲ ಅಲ್ಪಸಂಖ್ಯಾತರನ್ನು ಪ್ರತಿನಿಧಿಸುವುದನ್ನು ಸುನಿಶ್ಚಿತ ಪಡಿಸಿಕೊಳ್ಳುವಂಥ ಕೆಲವು ವಿಧಾನಗಳ ಮೂಲಕ ತನ್ನ ಮಂತ್ರಿಗಳನ್ನು ಆಯ್ಕೆ ಮಾಡುತ್ತದೆ. ಆ ವಿಧಾನಕ್ಕೆ ವರ್ಗಾಯಿಸಲಾಗದ ಮತಗಳ ಮೂಲಕದ ದಾಮಾಷಾ ಪ್ರಮಾಣ ವಿಧಾನ ಎಂದು ಕರೆಯುತ್ತಾರೆ. ಸಂವಿಧಾನವು ಪ್ರಜಾಸತ್ತಾತ್ಮಕವಾಗಿರ ಬೇಕಾದರೆ ಅಂಥ ವ್ಯವಸ್ಥೆಯು ನಮಗೂ ಬೇಕಾಗುತ್ತದೆ ಮತ್ತು ನಿರ್ದಿಷ್ಟ ಹಿತಾಸಕ್ತಿಯುಳ್ಳವರು ಮತ್ತು ಅಲ್ಪಸಂಖ್ಯಾತರ ಗೆಲುವಿಗಾಗಿ ಅವಕಾಶ ಕಲ್ಪಿಸಬೇಕಾಗುತ್ತದೆ. ಈ ಜನರಿಗೂ ಮಂತ್ರಿಮಂಡಲದಲ್ಲಿ ಅವಕಾಶ ಸಿಗಲೇಬೇಕಾಗಿರುವುದರಿಂದ, ಆ ವಿಧಾನವನ್ನು ಅನುಸರಿಸುವುದು ಆವಶ್ಯಕ.

ಬೇಗಮ್ ಸಾಹೇಬ್ ಅವರು ಮಂಡಿಸಿದ ತಿದ್ದುಪಡಿಯು ಮೌಲ್ವಿ ಸಾಹೇಬ್ ಅವರು ಮಂಡಿಸಿದ ನಿರ್ಣಯಕ್ಕೆ ಪ್ರಾಸಂಗಿಕವಾಗಿದೆ. ನಾವು ಮಂತ್ರಿಮಂಡಲದಲ್ಲಿ ಯಾವುದೇ ನಾಮನಿರ್ದೇಶನವನ್ನು ಕೇಳುತ್ತಿಲ್ಲ. ಅಲ್ಪಸಂಖ್ಯಾತರು ಮತ್ತು ಹಿತಾಸಕ್ತಿ ವ್ಯಕ್ತಿಗಳು, ಮಂತ್ರಿಮಂಡಲಕ್ಕೆ ಬರಲು ಸಾಧ್ಯವಾಗುವಂತೆ ಮಾಡುವ ನಿರ್ದಿಷ್ಟ ವಿಧಾನದ ಮೂಲಕ ಚುನಾವಣೆ ನಡೆಸುವುದಕ್ಕೆ ಅವಕಾಶ ಕೊಡಬೇಕೆಂದು ಅಷ್ಟೇ ನಾವು ಕೇಳುತ್ತೇವೆ. ದಾಮಾಷಾ ಪ್ರಮಾಣದ ಪ್ರಾತಿನಿಧ್ಯದ ಮೂಲಕ ನಡೆಸುವ ವಿಧಾನವು ಅತ್ಯುತ್ತಮವಾದುದೆಂದು ಪರಿಗಣಿಸಲಾಗಿದೆ. ವಿಧಾನಮಂಡಲವು ೫೦ರಿಂದ ೫೦೦ ಅಥವಾ ೩೦೦ ಸದಸ್ಯರನ್ನು ಒಳಗೊಂಡಿದ್ದಾಗ ಈ ವಿಧಾನವು ತೊಡಕಿನ ವಿಧಾನವಾಗುವುದಿಲ್ಲ. ಈ ವಿಧಾನವನ್ನು ಅಳವಡಿಸಿಕೊಂಡಾಗ ನೀವು ನಿರೂಪಿಸಿದ ತತ್ತ್ವವನ್ನು ಅನುಸರಿಸುವಂಥ, ಅಲ್ಪಸಂಖ್ಯಾತರು ಮತ್ತು ಸಮಾಜದ ಕೆಲವು ವರ್ಗಗಳು ಪ್ರತಿನಿಧಿಸುವಂಥ ಸಂವಿಧಾನವು ಪ್ರಜಾಸತ್ತಾತ್ಮಕವಾಗಿರುತ್ತದೆ. ಇದನ್ನೇ ಹೀಗೆ ಹೇಳಬಹುದು. ಒಬ್ಬ ಮಂತ್ರಿಯನ್ನು ಯಾವ ತತ್ತ್ವದ ಮೇಲೆ ಚುನಾಯಿಸಲಾಗುತ್ತದೆಯೋ ಅದೇ ತತ್ತ್ವಕ್ಕೆ ವಿರುದ್ಧವಾಗಿ ಅವಿಶ್ವಾಸ ಮತದ ಮೂಲಕ ಅವನನ್ನು ತೆಗೆದುಹಾಕಬಹುದು. ನನ್ನ ಸ್ನೇಹಿತರಾದ ಶ್ರೀ ಇಬ್ರಾಹಿಂ ಅವರು ಮಂಡಿಸಿದ ತಿದ್ದುಪಡಿ ಮತ್ತು ಬೇಗಮ್ ಸಾಹಿಬ್ ಅವರು ಮಂಡಿಸಿದ ತಿದ್ದುಪಡಿ, ಇವುಗಳಲ್ಲಿ ಸ್ವಲ್ಪಮಟ್ಟಿಗೆ ಗೊಂದಲವಿದೆ. ಅದನ್ನು ಗಮನಿಸಿ. ಮಂತ್ರಿಗಳನ್ನು ಹೊಣೆಗಾರರನ್ನಾಗಿ ಮಾಡಬೇಕು ಎಂದು ಶ್ರೀ ಇಬ್ರಾಹಿಂ ಅವರು ಹೇಳಿದ್ದಾರೆ. ಮೌಲ್ವಿ ಸಾಹೇಬ್ ಅವರ ತಿದ್ದುಪಡಿಯನ್ನು ಒಪ್ಪಿಕೊಂಡಿದ್ದಾದರೆ, ಆಗ ಮಂತ್ರಿಗಳನ್ನು ತೆಗೆದುಹಾಕಬಹುದು ಎಂಬುದನ್ನು ಒಪ್ಪಿಕೊಂಡಂತೆ. ಮಾನ್ಯರೆ, ವಿಧಾನಮಂಡಲದಿಂದ ಆಯ್ಕೆಯಾದ ಮತ್ತು ಸಮಾಜದ ವಿವಿಧ ವರ್ಗಗಳಾದ ಕ್ರೈಸ್ತ, ಮುಸ್ಲಿಮ್ ಅಥವಾ ಆ ವರ್ಗಗಳು ಬೇರೆ ಹಿತಾಸಕ್ತಿಯುಳ್ಳ ಗುಂಪುಗಳಾಗಿರಲಿ, ಗಿರಿಜನ ಪ್ರದೇಶದವರಾಗಿರಲಿ ಮತ್ತು ಅದೇ ರೀತಿ ಯಾವುವೇ ಗುಂಪುಗಳು ಆಗಿರಲಿ, ಅವರನ್ನು ಮಂತ್ರಿಮಂಡಲದಲ್ಲಿ ಪ್ರತಿನಿಧಿಸುವುದಕ್ಕಾಗಿ ಚುನಾಯಿತರಾದ ಮಂತ್ರಿಗಳು, ಅವರು ವಿಧಾನಮಂಡಲದ ಅವಧಿಯುದ್ದಕ್ಕೂ ಪದಧಾರಣ ಮಾಡುವುದು ಮುಂದುವರಿಯತಕ್ಕದ್ದು, ಅದು ತಾರ್ಕಿಕವಾದುದಾಗಿದೆ.

ಮಾನ್ಯರೆ, ಇನ್ನು ಮುಂದೆ ಆಡಳಿತಕ್ಕೆ ಆಧಾರವಾದ ಸಂವಿಧಾನದಲ್ಲಿ, ಕೆಲವು ಹೊಸ ವಿಷಯಗಳು ಇರಬೇಕು ಎಂಬುದನ್ನು ನಾನು ನಿರೀಕ್ಷಿಸುತ್ತಿದ್ದೇನೆ. ಆದರೆ, ರಾಜ್ಯಪಾಲರನ್ನು ಆಯ್ಕೆ ಮಾಡತಕ್ಕದ್ದು ಎಂಬುದರ ಹೊರತು ಹೊಸತೇನೂ ಇಲ್ಲ, ಇಂಥ ಉಪಬಂಧವನ್ನು ಹೊರತುಪಡಿಸಬಹುದೆಂದು ನನಗೆ ಕಂಡುಬರುತ್ತದೆ. ಮಾನ್ಯರೆ, ಜನತೆಯ ಎಲ್ಲ ವರ್ಗಗಳ ಎಂದರೆ, ಮುಸ್ಲಿಮ್, ಹಿಂದೂ, ಬುಡಕಟ್ಟು ವರ್ಗಗಳು, ಇತ್ಯಾದಿ ವರ್ಗಗಳ ಜನರ ಮನಸ್ಸಿನಲ್ಲಿ ನೀವು ಸೃಜಿಸಲು ಉದ್ದೇಶಿಸಿರುವ ಸಂವಿಧಾನವನ್ನು ರೂಪಿಸುವ ಪ್ರಜಾಸತ್ತಾತ್ಮಕ ವಿಧಾನವನ್ನು ಕಾರ್ಯರೂಪಕ್ಕೆ ತರಲು ವಿಶ್ವಾಸದ ಭದ್ರ ಬುನಾದಿಯನ್ನು ಹಾಕುವುದಕ್ಕಾಗಿ ಈ ಸದನವು, ಅದನ್ನು ಸಂಪೂರ್ಣವಾಗಿ ಪರಿಗಣಿಸಬೇಕೆಂದು ನಾನು ನಿಮ್ಮ ಮೂಲಕ ಸದನಕ್ಕೆ ವಿನಂತಿಸಿಕೊಳ್ಳುತ್ತೇನೆ.

**ಶ್ರೀ ಎಸ್. ನಾಗಪ್ಪ** (ಮದ್ರಾಸ್ : ಸಾಮಾನ್ಯ) : ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರು ಮಂತ್ರಿಮಂಡಲವನ್ನು ಆಯ್ಕೆ ಮಾಡತಕ್ಕದ್ದು ಮತ್ತು ಅವರು ಮಂತ್ರಿಮಂಡಲದ ಸಭೆ ಕರೆಯತಕ್ಕದ್ದು ಮತ್ತು ರಾಜ್ಯಪಾಲರ ಇಷ್ಟ ಪರ್ಯಂತ ಪದಧಾರಣ ಮಾಡತಕ್ಕದ್ದೆಂದು ಸಮಿತಿಯ ಗೌರವಾನ್ವಿತ ಅಧ್ಯಕ್ಷರು ಮಂಡಿಸಿದ ಮೂಲ

ಖಂಡವನ್ನು ನಾನು ಸಮರ್ಥಿಸುತ್ತೇನೆ. ಹಾಗೆ ಹೇಳುವಾಗ ಕೆಲವೇ ಕೆಲವು ಆಕ್ಷೇಪಣೆಗಳು ಇದ್ದರೂ ಸಮರ್ಥಿಸುತ್ತೇನೆ. ೧೪ನೇ ಖಂಡವು ಮಂತ್ರಿಗಳ ನೇಮಕದಲ್ಲಿ ಮತ್ತು ಅವರೊಂದಿಗಿನ ಸಂಬಂಧ, ಇವುಗಳನ್ನು ವಿವರಿಸುತ್ತಿದ್ದು, ಸಾಮಾನ್ಯವಾಗಿ ರಾಜ್ಯಪಾಲರು ಅನುಸೂಚಿಯಲ್ಲಿ ಹೀಗೆಂದು ವಿವರಿಸಿದ ಜವಾಬ್ದಾರಿ ಸರ್ಕಾರದ ವಿಧಿವಿಧಾನಗಳಿಂದ ಮಾರ್ಗದರ್ಶನ ಪಡೆಯತಕ್ಕದ್ದು. ೧೪ನೇ ಖಂಡದ ಉತ್ತರಾರ್ಧದಲ್ಲಿ ರಾಜ್ಯಪಾಲರು ಕೈಗೊಂಡ ಯಾವುದೇ ಕ್ರಮದ ಸಿಂಧುತ್ವವನ್ನು ಮಾನ್ಯ ಮಾಡತಕ್ಕದ್ದು; ಅದನ್ನು ವಿಧಿವಿಧಾನಗಳಿಗೆ ಅನುಸಾರವಾಗಿ ಮಾಡಿಲ್ಲವೆಂಬ ಕಾರಣದ ಮೇಲೆ ಪ್ರಶ್ನಿಸತಕ್ಕದ್ದಲ್ಲ. ಮಾನ್ಯರೆ, ಅಲ್ಪಸಂಖ್ಯಾತರಿಗೆ ಸಂಬಂಧ ಪಟ್ಟಂತೆ ಈಗ ಹೇಳುವುದಾದರೆ, ರಾಜ್ಯಪಾಲರು ತಮ್ಮ ಮಂತ್ರಿಗಳನ್ನು ಆಯ್ಕೆ ಮಾಡುವ ಅಧಿಕಾರವನ್ನು ಅವರಿಗೆ ಕೊಡುವ ಬದಲು, ವಿಧಾನಮಂಡಲಕ್ಕೆ ಕೊಟ್ಟರೆ ಇನ್ನೂ ಉತ್ತಮವಾಗುತ್ತದೆ. ಉದಾಹರಣೆಗೆ, ರಾಜ್ಯಪಾಲರು ಅಥವಾ ಪ್ರಧಾನ ಮಂತ್ರಿಗಳು, ತಮ್ಮ ಇಚ್ಛೆಯಂತೆ, ತಮಗೆ ದೃಢವಾಗಿ ವಿಧೇಯರಾಗಿರುವ ವ್ಯಕ್ತಿಗಳನ್ನು ಆಯ್ಕೆ ಮಾಡಿಕೊಳ್ಳಬಹುದಾಗಿದೆ. ಆದರೆ, ಅಂಥ ಜನರು, ಅವರು ಯಾರನ್ನು ಪ್ರತಿನಿಧಿಸುತ್ತಿರುವರೋ ಆ ವರ್ಗದವರ ವಿಶ್ವಾಸವನ್ನು ಪಡೆದುಕೊಂಡಿರುವುದಿಲ್ಲ. ಆದ್ದರಿಂದ ಸ್ವಿಸ್ ಮಾದರಿಯ ಸರ್ಕಾರ ವ್ಯವಸ್ಥೆಯಲ್ಲಿ ಇರುವಂತೆಯೇ, ಕಾರ್ಯಾಂಗವು ವಿಧಾನಮಂಡಲದಿಂದ ರಚಿತವಾಗುವಂತೆ ಅವಕಾಶ ಕೊಡಬೇಕು. ಆಗ, ವಿಧಾನಮಂಡಲದ ಪ್ರತಿಯೊಂದು ಗುಂಪು ಮತ್ತು ಪ್ರತಿಯೊಬ್ಬ ಸದಸ್ಯನು, ತಮ್ಮ ಪ್ರತಿನಿಧಿಗಳನ್ನು ಆಯ್ಕೆ ಮಾಡುವುದಕ್ಕೆ ಅವಕಾಶ ಸಿಕ್ಕಂತಾಗುತ್ತದೆ. ಅಂಥ ಪ್ರತಿನಿಧಿಗಳು ನಿಜವಾಗಿ ಹಾಗೂ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವ ಪ್ರತಿನಿಧಿಗಳಾಗುತ್ತಾರೆ. ಆಗಲೇ ತೊಂದರೆ ಬರುವುದು, ಈ ರೀತಿಯಾಗಿ ಮಂತ್ರಿಮಂಡಲವು ರಚಿತವಾಗಿರುವಾಗ, ಮಂತ್ರಿಮಂಡಲದಲ್ಲಿ, ವಿವಿಧ ಮಾರ್ಗಗಳನ್ನು ಅನುಸರಿಸುವ ಶಕ್ತಿಗಳು ಇರಬಹುದು, ಒಬ್ಬರು ಒಂದು ಕಡೆ ಎಳೆದರೆ ಇನ್ನೊಬ್ಬರು ಇನ್ನೊಂದು ಕಡೆ ಎಳೆಯುತ್ತಾರೆ. ಹೀಗಾಗುವುದರಿಂದ ಮಂತ್ರಿಮಂಡಲದಲ್ಲಿ ಸಾಮರಸ್ಯ ಇರುವುದಿಲ್ಲ. ಇಂಥ ಪರಿಸ್ಥಿತಿಯನ್ನು ನಾವು ನೋಡುತ್ತಿದ್ದೇವೆ. ಅಂಥ ಪರಿಸ್ಥಿತಿಯನ್ನು ತಪ್ಪಿಸುವುದಕ್ಕಾಗಿ, ಮಂತ್ರಿಮಂಡಲವೇ ತನ್ನ ಪ್ರಧಾನ ಮಂತ್ರಿಯನ್ನು ಆಯ್ಕೆ ಮಾಡಿಕೊಳ್ಳಬೇಕು. ಏಕೆಂದರೆ, ಆಗ ಮಂತ್ರಿಮಂಡಲವು ಪ್ರಧಾನ ಮಂತ್ರಿಗಳನ್ನು ಅನುಸರಿಸದೇ ಇರಲು ಸಾಧ್ಯವಿಲ್ಲ.

ಮಾನ್ಯರೇ, ರಾಜ್ಯಪಾಲರು ತಮ್ಮ ಮಂತ್ರಿಗಳನ್ನು ಆಯ್ಕೆ ಮಾಡುತ್ತಾರೆ. ಆದರೆ ರಾಜ್ಯಪಾಲರು, ತಮ್ಮ ಕಾರ್ಯಾಂಗದ ಸದಸ್ಯರನ್ನಾಗಲೀ ಅಥವಾ ಬಹುಮತ ಪಡೆದಿರುವ ಪಕ್ಷದ ನಾಯಕರೊಂದಿಗೆ ಆಗಲೀ ಸಮಾಲೋಚಿಸಿ ಮಂತ್ರಿಗಳನ್ನು ಆಯ್ಕೆ ಮಾಡಬೇಕೆಂದು ಈಗಿನ ಕರಡು ಸಂವಿಧಾನದಲ್ಲಿ ಹೇಳಿಲ್ಲ ಎಂಬುದರಲ್ಲಿ ಸಂಶಯವಿಲ್ಲ. ಉದಾಹರಣೆಯಾಗಿ ಹೇಳುವುದಾದರೆ, ೧೯೩೫ರ ಅಧಿನಿಯಮದಲ್ಲಿ, ಸಿಂಧ್ ಪ್ರಾಂತ್ಯದ ರಾಜ್ಯಪಾಲರು ಏನು ಮಾಡಿದರೆಂಬುದು ನಿಮಗೆ ತಿಳಿದೇ ಇದೆ. ಸ್ವಲ್ಪ ಬಹುಮತ ಇರುವ ಪಕ್ಷವನ್ನು ಆಹ್ವಾನಿಸಲಿಲ್ಲ. ಅವು ಸಮ ಸಂಖ್ಯಾಬಲ ಇರುವ ಪಕ್ಷಗಳಾಗಿದ್ದವು. ಆದರೆ, (ರಾಜ್ಯಪಾಲರು ತಮ್ಮದೇ ಆದ ಆಯ್ಕೆ ಮಾಡಿದರು. ರಾಜ್ಯಪಾಲರು ತಮಗೆ ಯಾರು ಸೂಕ್ತ ಎಂದು ತಿಳಿದಿದ್ದರೋ ಅವರನ್ನೇ ಆಯ್ಕೆ ಮಾಡಿದರು.) ಅವರು ನಿಜವಾಗಿ ಪ್ರತಿನಿಧಿಗಳು ಹಾಗೂ ಬಹುಮತ ಪಡೆದ ಪಕ್ಷವನ್ನು ಆಹ್ವಾನಿಸಲಿಲ್ಲ. ಆದ್ದರಿಂದ ರಾಜ್ಯಪಾಲರಲ್ಲಿ ನಿಹಿತವಾಗಿರುವ ಅಧಿಕಾರಗಳು ಕೆಲವು ಸಲ ಅಪಾಯಕಾರಿಯಾಗಿರುತ್ತವೆ. ಈ ರಾಜ್ಯಪಾಲರು ವಯಸ್ಕಮತದಾನ ಪದ್ಧತಿಯ ಮೂಲಕ ಚುನಾಯಿತರಾಗಿದ್ದಾರೆ ಎಂಬುದರಲ್ಲಿ ಸಂದೇಹವೇ ಇಲ್ಲ ಮತ್ತು ಅದೇ ಕಾರಣಕ್ಕಾಗಿ ಈ ಅಧಿಕಾರವನ್ನು ರಾಜ್ಯದಲ್ಲಿಯೇ ಏಕೆ ನಿಹಿತಗೊಳಿಸಬಾರದು? ರಾಜ್ಯಪಾಲರು ವಯಸ್ಕ ಮತದಾನದ ಮೂಲಕ ಚುನಾಯಿತರಾಗಿರುವುದರಿಂದ, ಅವರು ಬಹುಮತ ಪಕ್ಷಕ್ಕೆ ಸೇರಿದವರಾಗಿರ ಬಹುದು. ಮಾನವಸಹಜ ಸ್ವಭಾವವು ಪಕ್ಷ ರಾಜಕೀಯಕ್ಕೆ ಮೀರಿದ್ದಲ್ಲ. ಅವರು ರಾಜ್ಯಪಾಲರಾಗಿರಬಹುದು. ಆದರೆ, ಅವರೂ ಒಬ್ಬ ಮನುಷ್ಯರೇ ಆಗಿದ್ದಾರೆ. ಆತನು ಜನರಿಂದ ಆಯ್ಕೆಯಾಗಿದ್ದಾನೆಂಬುದನ್ನು ತಿಳಿದೇ ಇದ್ದಾಗ ಹಾಗೂ ಯಾವ ಪಕ್ಷವು ಚುನಾವಣೆಯಲ್ಲಿ ಅವರನ್ನು ಬೆಂಬಲಿಸಿದೆ ಮತ್ತು ಯಾವ ಪಕ್ಷವು

ಬೆಂಬಲಿಸಿಲ್ಲ ಎಂಬುದೂ ಅವರಿಗೆ ತಿಳಿದಿದೆ. ಆದ್ದರಿಂದ ರಾಜ್ಯಪಾಲರು ತಮ್ಮ ಅಧಿಕಾರಗಳನ್ನು ದುರುಪಯೋಗ ಪಡಿಸಿಕೊಳ್ಳುವುದಕ್ಕೆ ಸಾಕಷ್ಟು ಅವಕಾಶಗಳು ಇರುತ್ತವೆ. ಆದ್ದರಿಂದ, ಮಂತ್ರಿಮಂಡಲವನ್ನು ರಚಿಸುವಾಗ ಈ ವಿಧಾನದ ಮೂಲಕ ನೀವು ಕೆಲವು ಅಧಿಕಾರಗಳನ್ನು ತೆಗೆದುಹಾಕುತ್ತೀರಲ್ಲದೇ, ಅದೇ ಕಾಲಕ್ಕೆ ಅಲ್ಪಸಂಖ್ಯಾತರನ್ನು ಸಮಾಧಾನ ಪಡಿಸಲು ದೀರ್ಘಕಾಲ ಬೇಕಾಗುತ್ತದೆ. ಅವರಿಗಾಗಿ ಧ್ವನಿ ಎತ್ತಲು ಅವಕಾಶವಿದೆ ಹಾಗೂ ಈ ವರ್ಗಾಯಿಸಬಹುದಾದ ಒಂಟಿ ಮತದ ಮೂಲಕ ನಿಜವಾದ ಹಾಗೂ ಪರಿಣಾಮಕಾರಿಯಾದ ತಮ್ಮ ಪ್ರಾತಿನಿಧ್ಯವನ್ನು ಪಡೆಯಬಹುದಾಗಿದೆ. ಹಾಗೆ ಮಾಡದಿದ್ದರೆ, ರಾಜ್ಯಪಾಲರ ಇಚ್ಛೆಗೆ ಬಿಟ್ಟುಕೊಟ್ಟರೆ, ಎರಡು ಸಮಾನ ಪಕ್ಷಗಳಿದ್ದರೆ ಅಥವಾ ಅವುಗಳಲ್ಲಿ ಅತ್ಯಲ್ಪ ವ್ಯತ್ಯಾಸವಿದ್ದರೆ, ಅತ್ಯಲ್ಪ ಬಹುಮತ ಇರುವ ಪಕ್ಷವನ್ನು ಕರೆಯುವ ಬದಲು, ಸಿಂಧ್ ಪ್ರಾಂತ್ಯದ ರಾಜ್ಯಪಾಲರು ಮಾಡಿದಂತೆಯೇ ಇನ್ನೊಂದು ಪಕ್ಷವನ್ನು ಮಂತ್ರಿಮಂಡಲ ರಚಿಸಲು ಆಹ್ವಾನಿಸಬಹುದು. ಅಂಥ ಮಂತ್ರಿಮಂಡಲಗಳ ರಚನೆಯಾಗಿದ್ದಾದರೆ, ಅವು ಸುಸ್ಥಿರವಾದ ಹಾಗೂ ಸುಭದ್ರವಾದ ಸರ್ಕಾರಗಳಾಗುತ್ತವೆ ಎಂಬ ಭರವಸೆ ಹೇಗೆ ಇರಲು ಸಾಧ್ಯ? ದಿನದಿನವೂ, ಸರ್ಕಾರಗಳು ತಮ್ಮ ಸ್ಥಾನಮಾನವನ್ನು ಕಾಯ್ದುಕೊಂಡು ಬರುವುದರಲ್ಲೇ ಆಸಕ್ತವಾಗಿರುತ್ತವೆ; ಅವು ಕಾರ್ಯನೀತಿಗಳನ್ನು ರೂಪಿಸುವ ಸ್ಥಿತಿಯಲ್ಲಿಯೂ ಇರುವುದಿಲ್ಲ ಅಥವಾ ದೇಶದ ಜನತೆಗೆ ತಮ್ಮ ಪ್ರಯೋಜನವಾಗಿದೆಯೇ ಎಂಬುದನ್ನು ನೋಡುವ ಸ್ಥಿತಿಯಲ್ಲಿಯೂ ಇರುವುದಿಲ್ಲ. ರಾಜ್ಯಪಾಲರಲ್ಲಿ ನಿಹಿತವಾಗಿರುವ ಅಧಿಕಾರಗಳು, ಸಂಶಯ ವ್ಯಕ್ತಪಡಿಸುವಂತೆ ಮಾಡುವಷ್ಟು ಬಹುದೊಡ್ಡ ಪ್ರಮಾಣದಲ್ಲಿವೆ ಎಂಬುದು ನನ್ನ ಅಭಿಪ್ರಾಯ. ವಯಸ್ಕ ಮತದಾನ ಪದ್ಧತಿಯ ಮೂಲಕ ಚುನಾಯಿತರಾದ ರಾಜ್ಯಪಾಲರು, ಅಧಿಕಾರ ದುರುಪಯೋಗ ಪಡಿಸಿಕೊಳ್ಳುತ್ತಾರೆಂದು ಹೇಳಲಾಗದಿದ್ದರೂ, ಜನರು ಅಂಥವರನ್ನು ಆಯ್ಕೆ ಮಾಡಲು ಮುಂದುವರಿಯದಿರಬಹುದು. ಆದರೆ, ರಾಜ್ಯಪಾಲರು ಒಬ್ಬ ಮನುಷ್ಯರೆಂಬುದನ್ನು ನಾವು ನೆನಪಿನಲ್ಲಿಟ್ಟುಕೊಂಡಿರಬೇಕು ಹಾಗೂ ಅವರಿಗೂ ಅವರವೇ ಆದ ಬೇಕು ಬೇಡಗಳು ಇದ್ದೇ ಇರುತ್ತವೆ. ಆದ್ದರಿಂದ ತಪ್ಪು ಮಾಡುವ ಸಾಧ್ಯತೆ ಇದ್ದೇ ಇರುತ್ತದೆ, ಇದನ್ನೇ ನಾನು ಸ್ಪಷ್ಟ ಪಡಿಸುತ್ತಿದ್ದೇನೆ.

ಇನ್ನೊಂದು ಅಂಶವೆಂದರೆ, ಪ್ರಾರಂಭದಲ್ಲಿ ನಾನು ಹೇಳಿರುವಂತೆ, ರಾಜ್ಯಪಾಲರು ಮಂತ್ರಿಮಂಡಲವನ್ನು ರಚಿಸುವುದಕ್ಕೆ ಬದಲಾಗಿ, ವಿಧಾನಮಂಡಲಿಯೇ ಮಂತ್ರಿಮಂಡಲವನ್ನು ರಚಿಸುವುದು. ಪ್ರತಿಯೊಬ್ಬ ಸದಸ್ಯನು, ತನ್ನ ಪ್ರತಿನಿಧಿಗಳನ್ನು ಚುನಾಯಿಸುವುದಕ್ಕೆ ಹಕ್ಕನ್ನು ಹೊಂದಿರುವುದು. ಈ ಸಂದರ್ಭದಲ್ಲಿ ಇರುವ ಪ್ರಶ್ನೆ ಎಂದರೆ ಅಂಥ ಸಂವಿಧಾನವು ಕಾರ್ಯನಿರ್ವಹಿಸುವುದೇ ಎನ್ನುವುದು. ಅಂಥ ಸಂವಿಧಾನದ ಪ್ರಕಾರ ಸಾಧ್ಯವಾದಷ್ಟು ಎಲ್ಲ ಬಗೆಯ ಜನಸಮೂಹ ಪ್ರತಿನಿಧಿಗಳು (ಶಕ್ತಿಗಳು) ಮಂತ್ರಿಮಂಡಲದಲ್ಲಿರುವ ಮತ್ತು ಅವರಿಗೆ ವೈಯಕ್ತಿಕ ಹೊಣೆಗಾರಿಕೆ ಇರುವುದೇ ಅಥವಾ ಸಾಮೂಹಿಕ ಹೊಣೆಗಾರಿಕೆ ಇರುವುದೇ, ಪ್ರತಿಯೊಂದು ಮಂತ್ರಿಮಂಡಲವು ಅಥವಾ ಮಂತ್ರಿಗಳ ತಂಡವು, ಜಂಟಿ ಜವಾಬ್ದಾರಿಯಿಂದ ಕಾರ್ಯನಿರ್ವಹಿಸುವುದೇ, ಎಂದು ನಿರೀಕ್ಷಿಸಲಾಗಿರುತ್ತದೆ. ಮಂತ್ರಿಮಂಡಲದ ಸದಸ್ಯರು ತಮ್ಮ ಪ್ರಧಾನಮಂತ್ರಿಗಳನ್ನು ಆಯ್ಕೆ ಮಾಡಿದರೆ, ಸ್ವಲ್ಪ ಮಟ್ಟಿಗಾದರೂ ಅವರು ಜವಾಬ್ದಾರರಾಗಿರುತ್ತಾರೆ ಮತ್ತು ಜಂಟೀ ಜವಾಬ್ದಾರಿಯನ್ನು ಹೊಂದಿರುತ್ತಾರೆ.

ಇಲ್ಲಿಯವರೆಗೆ, ಅಲ್ಪಸಂಖ್ಯಾತ ಸಮುದಾಯಗಳ ಸದಸ್ಯರನ್ನು ಆಯ್ಕೆ ಮಾಡುವುದಕ್ಕಾಗಿ, ರಾಜ್ಯಪಾಲರು ಲಿಖಿತ ಸೂಚನಾದೇಶ ಪತ್ರಕ್ಕೆ ಅನುಸಾರವಾಗಿ ಕ್ರಮ ಕೈಗೊಳ್ಳಲಾಗುತ್ತಿದ್ದು, ೧೪ನೇ ಖಂಡದ ಮೇರೆಗೆ, ಅನುಸೂಚಿಯು ಈಗ ರಾಜ್ಯಪಾಲರಿಗೆ ನೀಡಿರುವ ಲಿಖಿತ ಸೂಚನಾದೇಶ ಪತ್ರದ ಸ್ಥಾನವನ್ನು ಆಕ್ರಮಿಸುತ್ತದೆ. ಆ ಉಪಬಂಧವು, ಈಗಾಗಲೇ ಇದೆ ಎಂಬುದನ್ನು ತಿಳಿಸಲು ನನಗೆ ಸಂತೋಷವಾಗುತ್ತದೆ ಮತ್ತು ಈ ಅನುಸೂಚಿಯ ಅಡಿಯಲ್ಲಿರುವ ಈ ಖಂಡವು, ಸ್ವಲ್ಪ ಮಟ್ಟಿಗೆ ಅವಕಾಶ ಕೊಡುತ್ತದೆ. ಆದರೆ, ಅದು ಇನ್ನೊಂದು ರೀತಿಯಲ್ಲಿದ್ದಿದ್ದರೆ ಇನ್ನೂ ಉತ್ತಮವಾಗುತ್ತಿತ್ತು.

**ಡಾ. ಬಿ. ಪಟ್ಟಾಭಿ ಸೀತಾರಾಮಯ್ಯ** (ಮದ್ರಾಸ್ : ಸಾಮಾನ್ಯ) : ಮಾನ್ಯ ಅಧ್ಯಕ್ಷರೆ, ಸ್ವಾಮಿ, ನಾನು

ಉತ್ಸಾಹದಿಂದ ಹಾಗೂ ಬಹಳ ಆಸಕ್ತಿಯಿಂದ ಚರ್ಚೆಯನ್ನು ಗಮನಿಸುತ್ತಿದ್ದೇನೆ ಮತ್ತು ನನ್ನ ಹಳೆಯ ಸ್ನೇಹಿತರಾದ, ಉತ್ತರ ಪ್ರದೇಶದ ಶ್ರೀ ಅಜೀಜ್ ಅಹ್ಮದ್ ಖಾನ್ ಅವರು ಈ ಚರ್ಚೆಯನ್ನು ಪ್ರಾರಂಭಿಸಿದ್ದುದು ವಿಶೇಷವಾಗಿ ನನಗೆ ಸಂತೋಷವಾಗುತ್ತಿದೆ. ಅವರು, ಜವಾಬ್ದಾರಿಯುತ ಸರ್ಕಾರ– ಹಾಗೂ ಸ್ಥಿರ ಕಾರ್ಯಾಂಗ– ಇವುಗಳನ್ನು ಕುರಿತ ಪೂರ್ಣಪ್ರಮಾಣದ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದಾರೆ. ಇವರು ಸೂಚಿಸಿರುವ ತಿದ್ದುಪಡಿಯಲ್ಲಿ ಒಂದು ಸಣ್ಣ ವಿಷಯ ಬಿಟ್ಟು ಹೋಗಿದ್ದು ಅದನ್ನೂ ಶ್ರೀಮತಿ ಬೇಗಮ್ ಐಜಾಜ್ ರಸೂಲ್ ಸಾಹೇಬ್ ಅವರು ಪೂರ್ಣಗೊಳಿಸಿದ್ದಾರೆ. ಆದ್ದರಿಂದ ನಾನು ಈ ಚರ್ಚೆಯಲ್ಲಿ ಭಾಗಿಯಾಗುವುದಕ್ಕೆ ಆಸಕ್ತನಾಗಿದ್ದೇನೆ, ಈ ಚರ್ಚೆಯನ್ನು ಪ್ರಾರಂಭಿಸಿರುವ ಹಂತದಿಂದ ಕೆಲ ಹಂತದಲ್ಲಿ ಚರ್ಚಿಸಲಾಗಿದ್ದು, ಆದರೆ ನಾನು ಸಮಗ್ರ ಚರ್ಚೆಯನ್ನು ಕೈಗೆತ್ತಿಕೊಳ್ಳಲು ಇಚ್ಛಿಸುತ್ತೇನೆ ಎಂದು ಹೆಮ್ಮೆಯಿಂದ ಹೇಳಬೇಕಾದರೆ ಚರ್ಚೆಯನ್ನು ಇನ್ನೂ ಉನ್ನತ ಹಂತದಲ್ಲಿ ನಡೆಸಬೇಕಾಗುತ್ತದೆ.

೧೯೩೫ರ ಅಧಿನಿಯಮ ಮೂಲಕ ಅನುಷ್ಠಾನಗೊಳಿಸಲಾಗಿರುವ ಪ್ರಾಂತೀಯ ಸ್ವಾಯತ್ತತೆಯು ಹೇಗೆ ಕಾರ್ಯರೂಪದಲ್ಲಿ ಇದೆ ಎಂಬುದನ್ನು ತಿಳಿಯಲು ಕಳೆದ ಕೆಲವು ವರ್ಷಗಳಲ್ಲಿ ನಡೆದ ಸಂಗತಿಗಳ ಮತ್ತು ಇರುವ ಪರಿಸ್ಥಿತಿಗಳ ಮೇಲೆ ನಾವೆಲ್ಲರೂ ತೀರ್ಮಾನ ಕೈಗೊಳ್ಳುತ್ತಿದ್ದೇವೆ. ದುರ್ದೈವದಿಂದಲೋ ಅಥವಾ ಸುದೈವದಿಂದಲೋ ಇಂದಿನ ದಿನಗಳಲ್ಲಿ ಕಂಡುಬರುವ ಐತಿಹಾಸಿಕ ಪರಿಸ್ಥಿತಿಗಳು, ಕಳೆದ ೩೦–೪೦ ವರ್ಷಗಳ ಬಳುವಳಿಯಾಗಿವೆ. ಕೆಲವು ಪರಿಸ್ಥಿತಿಗಳು ಪಾರಂಪರ್ಯವಾಗಿ ಬಂದವುಗಳಾಗಿದ್ದು, ಆ ಪರಿಸ್ಥಿತಿಗಳಿಗೆ ನಾವೇ ಬಲಿಪಶುಗಳಾಗಿದ್ದೇವೆ. ನಾವು ಈ ಪರಿಸ್ಥಿತಿಗಳ ದಬ್ಬಾಳಿಕೆಯ ಹಿಡಿತದಿಂದ ತಪ್ಪಿಸಿಕೊಂಡು ಬರುವುದಕ್ಕೆ ಸಾಧ್ಯವಾಗಿಲ್ಲ; ಶುದ್ಧ ಮನಸ್ಸಿನಿಂದ ಕಾರ್ಯತತ್ಪರರಾಗಲು ಸಾಧ್ಯವಾಗಿಲ್ಲ ಅಥವಾ ಪರಿಶುದ್ಧ ರಾಜ್ಯವ್ಯವಸ್ಥೆಯನ್ನು ತರಲು ಅಥವಾ ಪರಿಶುದ್ಧ ಮನಸ್ಸಿನಿಂದ ಕಾರ್ಯಾರಂಭ ಮಾಡಲು ಸಾಧ್ಯವಾಗಿಲ್ಲ. ಬ್ರಿಟಿಷ್ ಸರ್ಕಾರವು, ಸೃಷ್ಟಿಸಿದ ಈ ಪರಿಸ್ಥಿತಿಗಳನ್ನು ನಾವು ಬಳುವಳಿಯಾಗಿ (ಪಾರಂಪರ್ಯವಾಗಿ) ಪಡೆದುಕೊಂಡಿದ್ದೇವೆ. ಲಾರ್ಡ್ ಮಿಂಟೋ ಅವರ ಕಾಲದಲ್ಲಿ ಎಂದರೆ ೧೯೦೬ರಲ್ಲಿ, ಗೌರವಾನ್ವಿತ ಆಗಾಖಾನ್ ಅವರು ನಿಯೋಗವನ್ನು ತೆಗೆದುಕೊಂಡು ಹೋಗಿ ಪ್ರತ್ಯೇಕ ಚುನಾವಣಾ ಕ್ಷೇತ್ರಗಳಿಗಾಗಿ ಮಾತುಕತೆ ನಡೆಸಿದ್ದರೆಂಬುದು ನಿಮಗೆಲ್ಲ ತಿಳಿದೇ ಇದೆ. ಈ ವಿಷಬೀಜ ಮೊಳೆತು ದೊಡ್ಡದಾಗಿ ೧೯೧೬ರಲ್ಲಿ ನೀಡಿದ ಫಲವೇ ಲೀಗ್–ಕಾಂಗ್ರೆಸ್ ಮೈತ್ರಿಕೂಟ, ಇದು ಸ್ವಲ್ಪ ಹೆಚ್ಚು ಕಡಮೆ ಮಾಂಟೆಗೋ ಸುಧಾರಣೆಯಲ್ಲಿಯೇ ಸೇರಿದೆ. ಪ್ರತ್ಯೇಕ ಚುನಾವಣಾ ಕ್ಷೇತ್ರಗಳೆಂಬ ಈ ವಿಷಬೀಜಗಳು, ಒಂದು ದಶಕ ಕಳೆದ ಮೇಲೆ ನಾಶವಾಗಬಹುದೆಂದು ನಾವು ಆಶಿಸಿದ್ದೆವು. ಆದರೆ, ಅದು ಯಶಸ್ವಿಯಾಗಲಿಲ್ಲ. ರಾಜಕೀಯ ವ್ಯವಸ್ಥೆಯನ್ನು ಪುನರ್‌ಪರಿಶೀಲಿಸುವ ಅವಕಾಶ ಕಾಲಕಾಲಕ್ಕೆ ನಮಗೆ ಒದಗಿ ಬಂದಿತ್ತು. ಈ ಮರದ ಬೇರುಗಳು ಇನ್ನೂ ಆಳಕ್ಕೆ ಇಳಿದು, ಅತ್ಯಂತ ಕೆಟ್ಟ ಫಲಗಳನ್ನೇ ನೀಡುತ್ತಾ ಬಂದಿದೆ; ಅಂತಿಮ ಫಲವಾಗಿ ಭಾರತವು ಕಾರ್ಪೊರೇಟ್ ಸಂಸ್ಥೆಯಾಗಿ ಮತ್ತು ಮೊದಲೇ ಉದ್ದೇಶಿದಂತೆ ಪಾಕಿಸ್ತಾನ ಎಂಬ ಪ್ರತ್ಯೇಕ 'ಸ್ಥಾನ'ವು ರೂಪುಗೊಂಡಿದ್ದು, ಈಗ ನಾವು ವರ್ತಮಾನ ಪರಿಸ್ಥಿತಿಯು ಆಶಾದಾಯಕವಾಗಿರಲೆಂದು ಹಾರೈಸಬೇಕಾಗಿದೆ ಅಷ್ಟೇ.

ಇಂಥ ಸನ್ನಿವೇಶಗಳಲ್ಲಿ, ಇಡೀ ಸಮಸ್ಯೆಯನ್ನು ಒಂದು ಹೊಸ ದೃಷ್ಟಿಕೋನದಿಂದ ಅವಲೋಕಿಸಿ ಹೊಸದಾಗಿ ವಿಚಾರ ಮಾಡಬೇಕಾಗಿದೆ ಮತ್ತು ಪ್ರತ್ಯೇಕ ಚುನಾವಣಾ ಕ್ಷೇತ್ರಗಳಿರುವುದು ಮುಂದುವರಿಯಬೇಕೇ ಎಂಬುದನ್ನು ಪರಾಮರ್ಶಿಸಬೇಕಾಗಿದೆ. ಈಗ ಪ್ರತ್ಯೇಕ ಚುನಾವಣಾ ಕ್ಷೇತ್ರಗಳಿಂದ ಯಾವ ಉದ್ದೇಶ ಈಡೇರುತ್ತದೆ? ಇಡೀ ರಾಜಕೀಯ ಪ್ರಶ್ನೆಯನ್ನು, ಒಟ್ಟಾರೆ ಸಮಗ್ರ ಸಮಸ್ಯೆ ಎಂಬುದಾಗಿ ಹೊಸದಾಗಿ ಪರಿಗಣನೆಗೆ ತೆಗೆದುಕೊಳ್ಳಲಾಗಿದೆ. ಈ ಪ್ರತ್ಯೇಕ ಚುನಾವಣಾ ಕ್ಷೇತ್ರಗಳು, ಮದ್ರಾಸಿನ ಶೇಕಡಾ ೭ರಷ್ಟು, ಬಾಂಬೆಯಲ್ಲಿ ಶೇ. ೯ರಷ್ಟು; ಸಿ.ಪಿ.ಯಲ್ಲಿ ಶೇ. ೪½ರಷ್ಟು ಮತ್ತು ಉತ್ತರ ಪ್ರದೇಶದಲ್ಲಿ ಶೇಕಡಾ ೧೪ರಷ್ಟು ಜನರ ಉದ್ದೇಶಗಳನ್ನು ಹೇಗೆ ಪೂರೈಸುತ್ತವೆ? ಅವು ನಿರಂತರವಾಗಿ ದೂರುಗಳಿಗೆ ಕಾರಣಗಳಾಗುತ್ತವೆ. ಆದ್ದರಿಂದ

ನಾವು ಎಲ್ಲರಿಗೂ ಒಂದೇ ಆದ ಚುನಾವಣಾ ಕ್ಷೇತ್ರಗಳ ಬಗ್ಗೆ ಪರಿಶೀಲಿಸಲಿದ್ದೇವೆ. ಅನಿವಾರ್ಯವಾಗಿ ಮತ್ತು ನಮ್ಮ ತಪ್ಪಿಲ್ಲದೇ ಉಂಟಾಗಿರುವ ಎಲ್ಲ ದ್ವೇಷವನ್ನು ಮರೆಯೋಣ, ಕಾಂಗ್ರೆಸ್ ಮತ್ತು ಲೀಗ್ ಎಂಬ ಈ ಎರಡೂ ಹೆಸರುಗಳೇ ಬೇಡ, ಪ್ರಜಾಸತ್ತಾತ್ಮಕ, ಗಣರಾಜ್ಯ ಅಥವಾ ಸಮಾಜವಾದ ವ್ಯವಸ್ಥೆ ಅಥವಾ ಸಂಪೂರ್ಣವಾಗಿ ರಾಜಕೀಯವಾಗಿ ಆಧಾರಿತವಾಗಿರುವ ನೀವು ಒಪ್ಪಿಕೊಳ್ಳಬಹುದಾದ ಯಾವುದೇ ಹೆಸರಿನ ಸಂಸ್ಥೆಯನ್ನು ಕಟ್ಟೋಣ. ಇದು ಎಲ್ಲ ಧಾರ್ಮಿಕ ಪಕ್ಷಪಾತಗಳನ್ನು ದೂರಮಾಡಿ ವಿಜಯಿಯಾಗುತ್ತದೆ.

'ಅಲ್ಪಸಂಖ್ಯಾತರು', ಧಾರ್ಮಿಕ ಪ್ರಜಾಸ್ವಾತಂತ್ರ್ಯ, ಶ್ರದ್ಧೆ ಮತ್ತು ಸಂಪ್ರದಾಯಗಳು ಮತ್ತು ಭಾಷೆ ಮತ್ತು ಸಂಸ್ಕೃತಿ ಸಂರಕ್ಷಣೆ ಈ ಮೂರು ಪ್ರಶ್ನೆಗಳಿಗೆ ಸಂಬಂಧಿಸಿದಂತೆ ವಿದೇಶಗಳಲ್ಲಿಯೂ ಅವರನ್ನು ಪ್ರತ್ಯೇಕವಾಗಿ ಗುರುತಿಸಲಾಗುತ್ತದೆ. ಬ್ರಿಟಿಷ್ ಸರ್ಕಾರದ ಮಧ್ಯಪ್ರವೇಶದಿಂದ ಅಲ್ಪಸಂಖ್ಯಾತರ ಪ್ರಶ್ನೆಯನ್ನು ರಾಜಕೀಯ ವಿಷಯಗಳ ಜೊತೆ ಸೇರಿಸಿ ಜಟಿಲಗೊಳಿಸಲಾಗಿರುವುದು ಈ ನಾಡಿನ ದುರ್ದೈವದ ಸಂಗತಿ. ಆದರೆ, ಆ ಕಾಲ ಗತಿಸಿಹೋಗಿದೆ. ನಮ್ಮ ರಾಷ್ಟ್ರದ ಅಭಿವೃದ್ಧಿಯ ಹೊಸ ಯುಗದಲ್ಲಿ ನಾವು ಪ್ರವೇಶಿಸುತ್ತಿದ್ದೇವೆ. ಆದ್ದರಿಂದ, ಯಾವಾಗ ಜಂಟಿ ಚುನಾವಣೆ ವ್ಯವಸ್ಥೆಯನ್ನು ರೂಪಿಸಲಾಗುತ್ತದೆಯೋ ಮತ್ತು ನನಗೂ ನಿಮಗೂ ಒಂದೇ ಆದ ರಾಜಕೀಯ ಕಾರ್ಯಕ್ರಮವು ಇರುತ್ತದೆಯೋ ಮತ್ತು ವ್ಯಾಜ್ಯದ ಮುಖ್ಯ ವಿಷಯ "ಕೃಷಿ ಆದಾಯ"–ವಿರುದ್ಧ–"ಭೂ–ಪರಿಮಿತಿ"–ವಿಷಯ ಎಂದರೆ, ಆರ್ಥಿಕ ಪ್ರಶ್ನೆಗಳು ಈ ಕ್ಷೇತ್ರಕ್ಕೆ ಸಂಬಂಧಿಸಿದ್ದರೆ, ಆಗ ನಾವು ಒಂದೇ ನೆಲದ ಮೇಲೆ ಜಾಗರೂಕತೆಯಿಂದ ಹೆಜ್ಜೆ ಹಾಕುವುದಕ್ಕೆ ಸಾಧ್ಯವಾಗಬಹುದು. ಆಗ ನಾನು, ಜನಾಬ್ ಮೊಹಮ್ಮದ್ ಅಲಿ ಬೇಗ್ ಅವರ ಮನೆಗೆ ಹೋಗಿ ಭೋಜನ ಕೂಟಕ್ಕೆ ನಿಮ್ಮನ್ನು ಆಹ್ವಾನಿಸಿದ್ದೇನೆ ಎಂದು ಅವರ ತಾಯಿಗೆ ಹೇಳಿದಾಗ ಅವರೂ ಅದೇ ರೀತಿ ನಿಮ್ಮ ಮನೆಗೆ ಹೋಗಿ ನನ್ನ ಪತ್ನಿಗೂ ಹಾಗೆಯೇ ಹೇಳುತ್ತಾರೆಂದು ಭಾವಿಸೋಣ, ಆಗ ನಾವು ಅತ್ಯಂತ ಸೌಹಾರ್ದತೆಯಿಂದ ಇರಲು ಸಾಧ್ಯ, ಹಾಗೆ ಪುನಃ ನಾವು ಸೋದರರಾಗಿ ಇರಬಹುದು. ಆಗ, ಕಾಂಗ್ರೆಸ್ ಜನರು ಮಾತ್ರವೇ ಸರ್ಕಾರದಲ್ಲಿ ಸ್ಥಾನಗಳನ್ನು ಏಕಸ್ವಾಮ್ಯ ಮಾಡಿಕೊಂಡಿದ್ದಾರೆಂಬ ಪ್ರಶ್ನೆಯೇ ಇರುವುದಿಲ್ಲ. ಕ್ರೈಸ್ತರು, ಮುಸ್ಲಿಮರು ಮತ್ತು ಪಾರಸಿಕರು ನಮ್ಮ ಸರ್ಕಾರದಲ್ಲಿ ಇದ್ದಾರೆ. ಚುನಾಯಿತನಾಗಲು ಅರ್ಹರಾದ ಯಾರೇ ವ್ಯಕ್ತಿಯು, ಆತನು ದೇಶಕ್ಕೆ ಸಲ್ಲಿಸಿರುವ ಸೇವೆಯ ಆಧಾರದ ಮೇಲೆ ಚುನಾಯಿತನಾಗುತ್ತಾನೆ. ಆದರೆ ಆತನು ಜೈಲಿಗೆ ಹೋಗಿದ್ದನೆಂಬ ಕಾರಣದ ಮೇಲೆ ಅಲ್ಲ; ಅದು ಕೂಡಲೇ ಮರೆತುಹೋಗುತ್ತದೆ, ಬಹುಶಃ ಇದು ಮರೆತೇ ಹೋಗಿದೆ. ಆದರೆ ಹಳೆಯ ಸಂಪ್ರದಾಯಗಳಿಂದ ಇನ್ನೂ ಉತ್ತಮವಾದುದೇ ಸೃಷ್ಟಿಯಾಗಲೀ. ನಾವು ಭವಿಷ್ಯವನ್ನು ಭೂತಕಾಲದ ಆಧಾರದ ಮೇಲೆ ತೀರ್ಮಾನಿಸುವ ಅಗತ್ಯವಿಲ್ಲ. ನಾವು ಭೂತಕಾಲದ ಮೇಲೊಂದು ತೆರೆ ಎಳೆದು ಹೊಸ ಭವಿಷ್ಯವನ್ನು ಪ್ರಾರಂಭಿಸೋಣ. ಅಲ್ಪಸಂಖ್ಯಾತರಾಗಿದ್ದಾರೆಂದು ಹೇಳುವುದನ್ನು ಬಿಟ್ಟುಬಿಟ್ಟಾಗ, ಹೊಸ ತತ್ತ್ವಗಳ ಆಧಾರದ ಮೇಲೆ ರಾಜಕೀಯ ಸಂಸ್ಥೆಗಳನ್ನು ಕಟ್ಟಲು ನಮಗೆ ಸಾಧ್ಯವಾಗುತ್ತದೆ. ಅಂಥ ಘಟನೆಗಳು ಇನ್ನು ಮುಂದೆ ಸಂಭವಿಸುವುದಿಲ್ಲ. ಈ ವೇದಿಕೆಯಿಂದ ಬಂದಿರುವ ದೂರುಗಳು ಸಂಪೂರ್ಣವಾಗಿ ಆಕ್ರಮಣಸಾಧ್ಯವಲ್ಲ. ಅಂಥ ಮಾತಗಳನ್ನಾಡುವುದಕ್ಕೆ ಒತ್ತಾಯ ಮಾಡಲಾಗುತ್ತಿರುವ ಜನರ ಬಗ್ಗೆ ಕನಿಕರ ಬರುತ್ತದೆ. ಗತಿಸಿದ ಕಾಲದ ಅನಿವಾರ್ಯತೆಯ ಪರಿಣಾಮವೆಂದು ಹೇಳಿದರೂ ಅದಕ್ಕೆ ನಾವು ಸಂಪೂರ್ಣವಾಗಿ ಜವಾಬ್ದಾರರಾಗಿಲ್ಲ ದಿದ್ದರೂ, ನಾವೂ ಸ್ವಲ್ಪಮಟ್ಟಿಗಾದರೂ ಜವಾಬ್ದಾರರಾಗಿದ್ದೇವೆ ಎಂಬುದನ್ನು ಒಪ್ಪಿಕೊಳ್ಳಬೇಕಾಗಿದೆ. ನಾವೆಲ್ಲರೂ ಒಂದೇ ಛತ್ರದ ಅಡಿಯಲ್ಲಿ ಇದ್ದೇವೆ; ಒಂದೇ ವೇದಿಕೆಯ ಮೇಲೆ ಇದ್ದೇವೆ. ನಾವು ಒಂದೇ ಕಾರ್ಯಕ್ರಮವನ್ನು ನೆರವೇರಿಸೋಣ, ಅಲ್ಲಿಂದ ಮುಂದೆ ಯಾವುದೇ ಅಡೆತಡೆಗಳು ಎದುರಾಗುವುದಿಲ್ಲ.

**ಶ್ರೀ ಚೌಧರಿ ಖಲಿಖುಜ್ಜಮಾನ್** (ಉತ್ತರ ಪ್ರದೇಶ : ಮುಸ್ಲಿಮ್) : ಗೌರವಾನ್ವಿತ ಸದಸ್ಯರು, ಯಾವ ವಿಷಯ ಕುರಿತ ಮಾತನಾಡುತ್ತಿದ್ದಾರೆಂಬುದನ್ನು ನಾನು ತಿಳಿಯಬಹುದೇ? ಅವರು ಮಾತನಾಡುತ್ತಿರುವ ಯಾವುದೇ ವಿಷಯಕ್ಕೆ ತಿದ್ದುಪಡಿಯು ಸಂಬಂಧಿಸಿದೆ ಎಂದು ಅನಿಸುತ್ತಿಲ್ಲ.

**ಡಾ. ಬಿ. ಪಟ್ಟಾಭಿ ಸೀತಾರಾಮಯ್ಯ** : ನನ್ನ ಸ್ನೇಹಿತರು, ಈ ಒಂದು ಸಣ್ಣ ವಿಷಯವನ್ನು ಎತ್ತಿ

ತೋರಿಸಿದ್ದಕ್ಕೆ ಅವರಿಗೆ ನಾನು ಋಣಿಯಾಗಿದ್ದೇನೆ. ಆ ಪ್ರಶ್ನೆಯು, ಮುಸ್ಲಿಮರು ಒಂದು ಸಣ್ಣ ಅಲ್ಪಸಂಖ್ಯಾತ ಗುಂಪು ಆಗಿದ್ದು–ಇದು ಎಲ್ಲ ಇತರ ಅಲ್ಪಸಂಖ್ಯಾತರನ್ನು ಪ್ರತಿನಿಧಿಸುತ್ತದೆ ಎಂಬ ದೂರುಗಳ ಆಧಾರವಾಗಿಟ್ಟುಕೊಂಡ–ಇಡೀ ತಿದ್ದುಪಡಿಗೆ ಸುಸಂಗತವಾಗಿದೆ ಹಾಗೂ ದೊಡ್ಡ ಬಹುಮತ ಇರುವ ಒಂದು ವರ್ಗವು ಚುನಾವಣೆಯಲ್ಲಿ ಉಳಿದೆಲ್ಲ ಪಕ್ಷಗಳನ್ನು ಹಿಂದೆ ಹಾಕಿ ಜವಾಬ್ದಾರಿಯುಳ್ಳ ಸರ್ಕಾರದ ತತ್ತ್ವದ ಆಧಾರದ ಮೇಲೆ ಅಲ್ಪಸಂಖ್ಯಾತರನ್ನು ಕಡೆಗಣಿಸುವುದರಿಂದ ಅಲ್ಪಸಂಖ್ಯಾತರು ತೊಂದರೆಗೊಳಗಾಗುತ್ತಾರೆ ಎಂಬ ದೂರಿನ ಮೇಲೆ ಆಧಾರಿತವಾಗಿರುವ ಇಡೀ ತಿದ್ದುಪಡಿಗೆ ಸುಸಂಗತವಾಗಿದೆ. ಪಕ್ಷಗಳು ರಾಜಕೀಯ ತತ್ತ್ವಗಳ ಮೇಲೆ ರಚಿತವಾಗಿವೆ ಮತ್ತು ಹೊಸ ಹೊಂದಾಣಿಕೆ ಮಾಡಿಕೊಂಡಾಗ ಇಂಥ ದೂರುಗಳಿಗೆ ಅವಕಾಶವೇ ಇರುವುದಿಲ್ಲ.

**ಶ್ರೀ ಖಾಜಿ ಸೈಯದ್ ಕರೀಮುದ್ದೀನ್ :** ಆದರೆ, ತಿದ್ದುಪಡಿಯನ್ನು ಬೆಂಬಲಿಸಿ, ಮಾತನಾಡಿದ ಯಾರೊಬ್ಬರೂ, ಅಲ್ಪಸಂಖ್ಯಾತರ ತೊಂದರೆಗಳನ್ನು ಉಲ್ಲೇಖಿಸಿ ಮಾತನಾಡಿಲ್ಲ, ಆದರೆ ನನ್ನ ಸ್ನೇಹಿತರು ಅದನ್ನು ಉಲ್ಲೇಖಿಸಿದ್ದಾರೆ.

**ಶ್ರೀ ಬಾಲಕೃಷ್ಣ ಶರ್ಮ** (ಸಂಯುಕ್ತ : ಪ್ರಾಂತ್ಯಗಳು) : ನಿಮ್ಮ ಮಾತುಗಳನ್ನು ಸಂಪೂರ್ಣವಾಗಿ ಅವರು ಗಮನಿಸಿದ್ದಾರೆ.

**ಡಾ. ಬಿ. ಪಟ್ಟಾಭಿ ಸೀತಾರಾಮಯ್ಯ :** ಚರ್ಚಿಸಬೇಕಾದ ಹೊಸ ಪರಿಸ್ಥಿತಿಗಳು ಇವೆ ಹಾಗೂ ಹಿಂದಿನ ವರ್ಷಗಳಲ್ಲಿ ದುರ್ದೈವವಶಾತ್ ನಮಗೆ ಆಗಿರುವ ಅನುಭವಗಳಿಂದ ನಾವು ಪ್ರಭಾವಿತರಾಗುವುದು ಬೇಡ. ಆದ್ದರಿಂದ, ಈ ಪ್ರಶ್ನೆಯನ್ನು ಹೊಸ ದೃಷ್ಟಿಕೋನದಿಂದ ಗಮನಿಸತಕ್ಕದ್ದೆಂದು ಸಲಹೆ ಮಾಡುತ್ತೇನೆ. ಯಾವುದೇ ಜಾತೀಯ ಪಕ್ಷಪಾತ ಇಲ್ಲದೇ ಕೇವಲ ರಾಜಕೀಯ ತತ್ತ್ವಗಳ ಆಧಾರದ ಮೇಲೆ ರಾಜಕೀಯ ಪಕ್ಷಗಳನ್ನು ಹೇಗೆ ರಚಿಸಲು ಸಾಧ್ಯ ಎಂಬುದನ್ನು ಮತ್ತು ಜವಾಬ್ದಾರಿಯುಳ್ಳ ಸರ್ಕಾರದ ಮೇಲೆ ನಿಜವಾಗಿ ಆಧಾರಿತವಾದ ಹೊಸ ಸೂತ್ರವನ್ನು ಸಿದ್ಧ ಪಡಿಸಲು ಸಾಧ್ಯ ಎಂಬುದನ್ನು ನಾವು ನೋಡಬೇಕಾಗಿದೆ. ಈ ಪ್ರಸ್ತಾವವನ್ನು ಹಿಂದಿನ ವರ್ಷಗಳಲ್ಲಿ ಆಗಿರುವ ಕೆಟ್ಟ ಅನುಭವದ ಆಧಾರದ ಮೇಲೆ ಮಾಡಲಾಗಿದೆ. ಆ ಅನುಭವವನ್ನು ಒಂದು ಕೆಟ್ಟ ಕನಸೆಂದು ಮರೆತು ನಮ್ಮ ರಾಜಕೀಯ ಕ್ಷೇತ್ರದ ಅಭಿವೃದ್ಧಿಯಲ್ಲಿ ಒಂದು ಹೊಸ ಅಧ್ಯಾಯವನ್ನು ನಾವು ಪ್ರಾರಂಭಿಸೋಣ, ಈ ಅಭಿವೃದ್ಧಿಯು ಒಟ್ಟಾರೆ ವಿಭಿನ್ನ ಸ್ವರೂಪದ್ದಾಗಿದ್ದು ಪರಿಸ್ಥಿತಿಗಳನ್ನು ಗಮನಿಸಿ ಮಾಡಿದ್ದಾಗಿರುತ್ತದೆ. ಆದ್ದರಿಂದ, ಮಾನ್ಯರೇ, ತಿದ್ದುಪಡಿಯನ್ನು ತಳ್ಳಿಹಾಕಬೇಕೆಂದು ನಾನು ಒತ್ತಾಯ ಪಡಿಸುತ್ತೇನೆ.

[ಆಗ, ಶ್ರೀ ಗೋವಿಂದ ದಾಸ್ (ಮದ್ರಾಸ್ : ಸಾಮಾನ್ಯ) ತೆಲುಗಿನಲ್ಲಿ ಮಾತನಾಡಿದರು.]

**ಶ್ರೀ ಬಿ. ಪಾಕರ್ ಸಾಹಿಬ್ ಬಹಾದೂರ್ :** ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಯಾವ ಭಾಷೆಯಲ್ಲಿ ಮಾತನಾಡುತ್ತಿದ್ದಾರೆ?

**ಶ್ರೀ ರಾಮ್ ನಾರಾಯಣ್ ಸಿಂಗ್** (ಬಿಹಾರ್ : ಸಾಮಾನ್ಯ) : ನಾನು, ಕ್ರಿಯಾಲೋಪ ಪ್ರಶ್ನೆಯನ್ನು ಎತ್ತಿದ್ದೇನೆ. ಶ್ರೀ ಗೋವಿಂದ ದಾಸ್ ಅವರು ಯಾವ ಭಾಷೆಯಲ್ಲಿ ಮಾತನಾಡಿದರೋ ಆ ಭಾಷೆಯು ಗೌರವಾನ್ವಿತ ಅಧ್ಯಕ್ಷರಿಗೆ ಅರ್ಥವಾಯಿತೇ? ಅರ್ಥವಾಗದಿದ್ದರೆ, ಅವರು ಹೇಗೆ ಭಾಷಣಕಾರರನ್ನು ನಿಯಂತ್ರಿಸುತ್ತಾರೆ ಎಂಬುದನ್ನು ನಾನು ತಿಳಿಯಬಯಸುತ್ತೇನೆ.

**ಮಾನ್ಯ ಅಧ್ಯಕ್ಷರು :** ಭಾಷಣಕಾರರನ್ನು ನಿಯಂತ್ರಿಸುವ ಅಗತ್ಯ ಇದೆ ಎಂದು ನನಗೆ ಅನಿಸುತ್ತಿಲ್ಲ. ಅವರು ತಮ್ಮ ಇತಿಮಿತಿಗಳಲ್ಲಿ ಮಾತನಾಡುತ್ತಿದ್ದಾರೆ (ಎಲ್ಲರೂ ನಗುತ್ತಾರೆ).

**ಒಬ್ಬರು ಗೌರವಾನ್ವಿತ ಸದಸ್ಯರು :** ಮಾನ್ಯ ಸದಸ್ಯರು ಸೂಚನೆಯನ್ನು ಬೆಂಬಲಿಸುತ್ತಿದ್ದಾರೆಯೇ ಅಥವಾ ವಿರೋಧಿಸುತ್ತಿದ್ದಾರೆಯೇ ಎಂಬುದನ್ನು ತಾವು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ. ಅವರು ಏನು ಹೇಳುತ್ತಿದ್ದಾರೆಂಬುದು ನನಗೆ ತಿಳಿಯುತ್ತಿಲ್ಲ ಹಾಗೂ ಮಾನ್ಯ ಸದಸ್ಯರು ಸದನದ ಮುಂದೆ ಇರುವ ಸೂಚನೆಯ

ಪರವಾಗಿದ್ದಾರೆಯೇ ಅಥವಾ ವಿರೋಧಿಸುತ್ತಿದ್ದಾರೆಯೇ? ಯಾರೇ ಗೌರವಾನ್ವಿತ ಸದಸ್ಯರಿಗೆ ತಿಳಿದಿದೆಯೋ ಅಥವಾ ಅರ್ಥಮಾಡಿಕೊಂಡರೋ ಎಂಬುದು ನನಗೆ ಅರ್ಥವಾಗುತ್ತಿಲ್ಲ.

**ಮಾನ್ಯ ಅಧ್ಯಕ್ಷರು :** ಭಾಷಣಕಾರರು ಒಂದು ರೀತಿಯ ಪರಿಮಿತಿಗಳಿಗೆ ಒಳಗಾಗಿದ್ದಾರೆ. ಇನ್ನೊಬ್ಬ ಸದಸ್ಯರು ಮತ್ತೊಂದು ರೀತಿಯ ಪರಿಮಿತಿಗಳಿಗೆ ಒಳಗಾಗಿದ್ದಾರೆ. ಈ ಭಾಷಣಕಾರರಿಗೆ ಕೆಲವು ಭಾಷೆಗಳು ತಿಳಿಯುವುದಿಲ್ಲ ಹಾಗೂ ಇತರರಿಗೆ ಅವರ ಭಾಷೆ ತಿಳಿದಿಲ್ಲ. ಎಲ್ಲರೂ ತೊಂದರೆಗೊಳಗಾದವರೇ. ಅವರು ಯಾವ ಭಾಷೆಯಲ್ಲಿ ಮಾತನಾಡಲು ಇಚ್ಛಿಸುತ್ತಾರೆಯೋ ಅದೇ ಭಾಷೆಯಲ್ಲಿ ಮಾತನಾಡಲು ಅವರಿಗೆ ನಾನು ಅನುಮತಿ ನೀಡುತ್ತೇನೆ. ಅವರಿಗೆ ಇಂಗ್ಲಿಷಿನಲ್ಲಿ ಮಾತನಾಡಲು ಸಾಧ್ಯವಾಗುತ್ತಿಲ್ಲವಾದ್ದರಿಂದ ತಮ್ಮ ಭಾಷೆಯಲ್ಲಿ ಮಾತನಾಡಲು ಇಚ್ಛಿಸುತ್ತಾರೆ.

[ಶ್ರೀ ಗೋವಿಂದ ದಾಸ್ ಅವರು ಮಾನ್ಯ ಅಧ್ಯಕ್ಷರು ಆ ಸದಸ್ಯರ ಹಕ್ಕನ್ನು ಎತ್ತಿ ಹಿಡಿದಿದ್ದಕ್ಕೆ ಧನ್ಯವಾದಗಳನ್ನು ಸಲ್ಲಿಸಿ ತೆಲುಗಿನಲ್ಲಿ ತಮ್ಮ ಭಾಷಣವನ್ನು ಮುಕ್ತಾಯಗೊಳಿಸಿದರು.]

**ಶ್ರೀ ಚೌಧರಿ ಖಲಿಖುಜ್ಜಮಾನ್ :** ಮಾನ್ಯ ಅಧ್ಯಕ್ಷರೆ, ಶ್ರೀ ಅಜೀಜ್ ಅಹ್ಮದ್ ಖಾನ್ ಅವರು ಮಂಡಿಸಿರುವ ತಿದ್ದುಪಡಿಯಲ್ಲಿ ಎರಡು ಭಾಗಗಳಲ್ಲಿ ಇವೆ ಎಂದು ನನ್ನ ಮನಸ್ಸಿಗೆ ಬಂದಿದೆ. ಒಂದನೆಯದು ಮಂತ್ರಿಗಳ ಚುನಾವಣೆಗೆ ಸಂಬಂಧಿಸಿದೆ, ಇನ್ನೊಂದು ಆ ಮಂತ್ರಿಗಳ ಚುನಾವಣೆಯ ವಿಧಾನಕ್ಕೆ ಸಂಬಂಧಿಸಿದೆ. ದುರ್ದೈವವಶಾತ್, ನಮ್ಮ ಕೆಲವು ಸ್ನೇಹಿತರು, ತತ್ತ್ವವನ್ನು ಸಮಗ್ರವಾಗಿ ಪರಿಗಣಿಸುವುದನ್ನು ಕಡೆಗಣಿಸಿ, ತಿದ್ದುಪಡಿಯ ಇನ್ನೊಂದು ಭಾಗವಾದ ಮಂತ್ರಿಗಳ ಚುನಾವಣೆಯ ವಿಧಾನಕ್ಕೆ ಸಂಬಂಧಿಸಿದುದಕ್ಕೆ, ಹೆಚ್ಚು ಗಮನಹರಿಸಿದ್ದರೆಂದು ನನಗೆ ಕಂಡುಬರುತ್ತದೆ. ಅಲ್ಪಸಂಖ್ಯಾತರ ಹಕ್ಕುಗಳ ಪ್ರಶ್ನೆಯು ಸಂಬಂಧಪಡುವಷ್ಟರ ಮಟ್ಟಿಗೆ ಹೇಳುವುದಾದರೆ, "ಅಲ್ಪಸಂಖ್ಯಾತರ ಸಮಿತಿ" ಎಂಬ ಒಂದು ಸಮಿತಿ ಇದ್ದು, ಅಲ್ಲಿ ನಮ್ಮ ಹಕ್ಕುಗಳ ಬಗ್ಗೆ ಚರ್ಚಿಸುವುದಕ್ಕೆ ಅವಕಾಶ ಇದೆ ಎಂಬುದನ್ನು ಸದಸ್ಯರಿಗೆ ನಾನು ಭರವಸೆ ನೀಡುತ್ತೇನೆ. ಪ್ರಾಂತೀಯ ಸಂವಿಧಾನ ಸಮಿತಿಯ ವರದಿಯನ್ನು ನಾವು ಗಮನಿಸಿ, ಪರಿಶೀಲಿಸಿ ಅಲ್ಪಸಂಖ್ಯಾತ ಸಮಿತಿಯ ವರದಿ ವಿರುದ್ಧವಾದುದನ್ನಾಗಲೀ ಅಥವಾ ಅಸಂಗತವಾದುದನ್ನಾಗಲೀ ಯಾವುದನ್ನೂ ಹೇಳಿಲ್ಲವೆಂದು ಹಾಗೂ ಅಲ್ಪಸಂಖ್ಯಾತ ಸಮಿತಿಯು ಮನವಿ ಸಲ್ಲಿಸುವಲ್ಲಿ ಪ್ರತಿಯೊಂದು ಸಾಧ್ಯವಾದ ಪ್ರಯತ್ನ ಮಾಡಿತ್ತೆಂಬ ತೀರ್ಮಾನಕ್ಕೆ ನಾವು ಬಂದಿದ್ದೇವೆ. ಈಗ ಪರಿಗಣನೆಯಲ್ಲಿರುವ ಪ್ರಾಂತೀಯ ಸಂವಿಧಾನ ರಚನಾಸಮಿತಿಯ ಸದಸ್ಯರಿಗೆ ನಾವು ಅಷ್ಟರ ಮಟ್ಟಿಗೆ ಆಭಾರಿಯಾಗಿದ್ದೇವೆ ಮತ್ತು ಈ ತಿದ್ದುಪಡಿಯ ಹಿಂದೆ ಯಾವುದೋ ಸುಪ್ತ ಉದ್ದೇಶ ಇದೆ ಎಂಬ ಭಾವನೆಯನ್ನು ನಿಮ್ಮ ಮನಸ್ಸಿನಿಂದ ತೆಗೆದುಬಿಡಬೇಕೆಂದು ನಾನು ಪ್ರಾರ್ಥಿಸುತ್ತೇನೆ. ಮಂತ್ರಿಗಳ ಚುನಾವಣೆಯ ತತ್ತ್ವವನ್ನು ಅದು ವರ್ಗಾಯಿಸಲಾಗದ ಏಕಮತದ ಮೂಲಕವಾಗಿರಲಿ ಅಥವಾ ಅನ್ಯಥಾ ಆಗಿರಲಿ, ಅದನ್ನು ಒಂದು ಒಪ್ಪಿಕೊಂಡದ್ದಾದರೆ, ಯಾವುದೇ ತೊಂದರೆ ಇರುವುದಿಲ್ಲ. ಆದರೆ, ಇಲ್ಲಿರುವುದು ತತ್ತ್ವದ ಪ್ರಶ್ನೆ. ರಾಜ್ಯಪಾಲರಿಗೆ ಸಾಕಷ್ಟು ಅಧಿಕಾರಗಳನ್ನು ಕೊಟ್ಟ ಮೇಲೆ, ತೆಗೆದು ಹಾಕಲಾಗದಂಥ ಮಂತ್ರಿಮಂಡಲ ನಮಗೆ ಇರಬೇಕಾಗುತ್ತದೆಂದು ನನಗೆ ಅನಿಸುತ್ತದೆ. ಆ ಪ್ರಸ್ತಾವಕ್ಕೆ ಸಂಬಂಧಿಸಿದಂತೆ ಅಮೆರಿಕ ಸಂವಿಧಾನವನ್ನಾಗಲೀ ಅಥವಾ ಸ್ವಿಸ್ ಸಂವಿಧಾನವನ್ನಾಗಲೀ ಅಥವಾ ಯಾವುದೇ ಇತರ ಸಂವಿಧಾನವನ್ನಾಗಲೀ ನಾನು ಉಲ್ಲೇಖಿಸುವುದಿಲ್ಲ. ಈ ಪ್ರಶ್ನೆಯನ್ನು, ಜನರು ಸೂಕ್ತ ವಿವೇಚನಾ ದೃಷ್ಟಿಯಿಂದ ಸರಿಯಾಗಿ ಗಮನಿಸಬೇಕೆಂದು ಹಾಗೂ ಜನರು ಹಾಗೆ ಪರಿಶೀಲಿಸಿದಾಗಲೇ ಸೂಕ್ತವಾಗಬಹುದಾದ ಮಾರ್ಗ ಕಂಡುಬರಬಹುದು ಎಂದು ನನಗೆ ಅನಿಸುತ್ತದೆ.

ಈಗ, ಪ್ರಾಂತ್ಯಗಳಲ್ಲಿ ನಮಗೆ ನಿಜವಾಗಿಯೂ ಸ್ವಲ್ಪ ಮಟ್ಟಿಗೆ ಅಧಿಕಾರ ನೀಡಿರುವ ೧೯೩೫ರ ಸಂವಿಧಾನವನ್ನು ನಾವು ಸಿದ್ಧಪಡಿಸುವಲ್ಲಿ ಸಾಕಷ್ಟು ದೂರ ಕ್ರಮಿಸಿಲ್ಲ. ಪ್ರಥಮ ಬಾರಿ ಕಾಂಗ್ರೆಸ್ ಅಧಿಕಾರ ವಹಿಸಿಕೊಂಡಾಗ ಕೇವಲ ಎರಡೂವರೆ ವರ್ಷ ಕಾರ್ಯನಿರ್ವಹಿಸಿತು. ಈ ಸಲ ಈಗಷ್ಟೇ ಅಧಿಕಾರ

ವಹಿಸಿಕೊಂಡಿದೆ. ಕಾರ್ಯ ಚಟುವಟಿಕೆಗಳ ಇತರ ಕ್ಷೇತ್ರಗಳಲ್ಲಿ ನಮಗೆ ಸ್ವಲ್ಪ ಅನುಭವವಿದೆ. ಉದಾಹರಣೆಗೆ, ಸ್ಥಳೀಯ ಸಂಸ್ಥೆಗಳಲ್ಲಿ ಚುನಾವಣೆಯ ವಿಧಾನವನ್ನು ಅಳವಡಿಸಿಕೊಳ್ಳುವಲ್ಲಿ ಬೇರೆ ವಿಧಾನವನ್ನು ಅನುಸರಿಸಿದ್ದೇವೆ. ಪುರಸಭೆಗಳಲ್ಲಿ ಹಾಗೂ ಜಿಲ್ಲಾ ಮಂಡಳಿಗಳಲ್ಲಿ ಏನಾಗುತ್ತಿದೆ ಎಂದರೆ, ಜಿಲ್ಲಾ ಮಂಡಳಿಗಳ ಅಧ್ಯಕ್ಷರ ಮತ್ತು ಪುರಸಭೆಗಳ ವಿರುದ್ಧ ಪ್ರತಿ ದಿನವೂ ಅವಿಶ್ವಾಸ ನಿರ್ಣಯದ ಮಂಡನೆಯಾಗುತ್ತಿದೆ. ಅವರಿಗೆ ಕೊಡಲಾಗಿರುವ ಅಧಿಕಾರವನ್ನು ಏನು ಮಾಡಬೇಕೆಂಬುದೇ ಗೊತ್ತಿಲ್ಲ. ಪ್ರಾಂತ್ಯಗಳ ರಾಜ್ಯಪಾಲರು ಎಲ್ಲ ರೀತಿಯಿಂದ ಆ ಬಗ್ಗೆ ಪ್ರಯತ್ನಿಸಿದ್ದಾರೆ. ಆದ್ದರಿಂದ ಈ ಹಿಂದೆ ಇದ್ದ ವ್ಯವಸ್ಥೆ ಇರಬೇಕೆಂದು ಇಚ್ಛಿಸುತ್ತಾರೆ. ಮೊದಲು, ಮೂರನೇ ಎರಡರಷ್ಟು ಬಹುಮತ ವ್ಯವಸ್ಥೆಯನ್ನು ಪ್ರಾರಂಭಿಸಲಾಯಿತು. ಪ್ರಾಂತ್ಯಗಳಲ್ಲಿರುವ ವಿಧಾನಮಂಡಲಗಳಲ್ಲಿ ನಾಲ್ಕನೇ ಮೂರರಷ್ಟು ಬಹುಮತ ವ್ಯವಸ್ಥೆಯನ್ನು ಏಕೆ ಪ್ರಾರಂಭಿಸಲಿಲ್ಲ ಎಂಬುದು ನನಗೆ ತಿಳಿಯುತ್ತಿಲ್ಲ. ಹಾಗೆ ಮಾಡದಿದ್ದರೆ, ಪುರಸಭಾಧ್ಯಕ್ಷರು ಮತ್ತು ಸ್ಥಳೀಯ ಸಂಸ್ಥೆಗಳ ಅಧ್ಯಕ್ಷರು, ಪ್ರತಿ ದಿನ ಹೊರ ಹೋಗುವ ತಮಾಷೆ ನೋಡಬೇಕಾಗುತ್ತಿತ್ತು. ಇತ್ತೀಚಿನ ಕೆಲವು ದಿನಗಳಲ್ಲಿ, ಮದ್ರಾಸಿನ ಮಂತ್ರಿಮಂಡಲವು ಬಿದ್ದು ಹೋಯಿತು. ನಮ್ಮ ಈ ಅನುಭವವು, ಕಿತ್ತುಹಾಕಲಾಗದಂಥ ಕಾರ್ಯಾಂಗ ವ್ಯವಸ್ಥೆ ಇರಬೇಕೆಂಬ ತೀರ್ಮಾನಕ್ಕೆ ಬರುವಂತೆ ಮಾಡಿದೆ. ಹೀಗೆ ಮಾಡದಿದ್ದರೆ, ಒಂದು ಘೋಷಣೆ ಮಾಡಿ ಮಂತ್ರಿಮಂಡಲವನ್ನು ಬದಲಾಯಿಸುವ ಪ್ರಸಂಗ ಬರುತ್ತದೆ. ನಮ್ಮ ಜನರು ಘೋಷಣೆ ಕೂಗಿದವರ ಕಡೆಗೆ ಹೋಗಿಬಿಡುವ ಪ್ರವೃತ್ತಿಯವರಾಗಿದ್ದಾರೆ. ಪಾಕಿಸ್ತಾನದ ಕೂಗೂ ಸಹ ಇದೇ ರೀತಿಯದೆಂದು ನೀವು ಹೇಳಬಹುದು. ಎರಡು ರಾಷ್ಟ್ರಗಳ ತತ್ತ್ವವನ್ನು ಜನಸಮೂಹದ ಮೂಲಕ ಎತ್ತಿ ಹಿಡಿಯಲಾಗಿದೆ. ಇದು, ನಿಮ್ಮ ಜನರು ಯಾವುದೇ ಮುಂದಾಳತ್ವವನ್ನು ಹಾಗೂ ಯಾವುದೇ ಘೋಷಣೆಯನ್ನು ಅನುಸರಿಸಿಕೊಂಡು ಹೋಗುವ ಪ್ರವೃತ್ತಿಯಿರುವವರಾಗಿದ್ದಾರೆ, ಎಂಬುದನ್ನು ತೋರಿಸುತ್ತದೆ. ಈ ಕಾರಣಕ್ಕಾಗಿಯೇ, ನಿಮ್ಮ ಮಂತ್ರಿಗಳನ್ನು ಕಾಯ್ದುಕೊಳ್ಳುವುದಕ್ಕಾಗಿ ನೀವು ಏರ್ಪಾಡು ಮಾಡಿಕೊಳ್ಳಬೇಕೆಂದು ನಾನು ಹೇಳುತ್ತೇನೆ. ಈ ಮಂತ್ರಿಗಳು ಪಕ್ಷಾಂತರ ಮಾಡುವುದರಿಂದ, ನೀವು ತಡೆಯಬೇಕು ಮತ್ತು ವಿಧಾನಮಂಡಲಗಳಲ್ಲಿ ಒಂದು ಗುಂಪಿನಿಂದ ಇನ್ನೊಂದಕ್ಕೆ ಪಕ್ಷಪಾತ ಮಾಡುವುದನ್ನು ತಡೆಯಬೇಕು. ನಿಚ್ಚಳವಾದ ಮತ್ತು ಸರಳವಾದ ಈ ಪ್ರಸ್ತಾವವನ್ನು ನಿಮ್ಮ ಮುಂದೆ ಪರಿಗಣನೆಗಾಗಿ ಇಟ್ಟಿದ್ದೇವೆ. ಇದು ವರ್ಗಾಯಿಸಬಹುದಾದ ಏಕಮತದ ವಿಷಯವೆಂದೇ ಅಥವಾ ವರ್ಗಾಯಿಸಲಾಗದ ಮತದ ವಿಷಯವೆಂದೇ ನಮ್ಮ ಕೆಲವು ಸ್ನೇಹಿತರು ತಿಳಿದು, ತಮ್ಮ ಮೂಗಿನ ನೇರಕ್ಕಷ್ಟೆ ನೋಡುವಂತಾಗಿದೆ, ಇದು ಸರಿಯಲ್ಲ. ನೀವು ತತ್ತ್ವವನ್ನು ಒಪ್ಪಿಕೊಂಡದ್ದಾದರೆ, ಚುನಾವಣೆಯಲ್ಲಿ ಯಾವುದೇ ಪರ್ಯಾಯ ಮಾರ್ಗವನ್ನು ನಾವು ಒಪ್ಪಿಕೊಳ್ಳುತ್ತೇವೆ ಎಂಬ ಭರವಸೆಯನ್ನು ನಾನು ನಿಮಗೆ ನೀಡುತ್ತೇನೆ. ಆದ್ದರಿಂದ ಚುನಾವಣೆಯ ವಿಧಾನವು, ಈ ತಿದ್ದುಪಡಿಗೆ ಒಪ್ಪಿಗೆ ನೀಡುವುದಕ್ಕಾಗಿನ ಅಥವಾ ಒಪ್ಪಿಗೆ ನೀಡದಿರುವುದಕ್ಕಾಗಿನ ಪರೀಕ್ಷೆಯಾಗುವುದಿಲ್ಲ. ತಿದ್ದುಪಡಿಯ ಬಗ್ಗೆ ನಿಮಗೆ ತೃಪ್ತಿಯಾಗಿಲ್ಲ ಎಂದು ತಿಳಿಯಬಹುದು. ನೀವು ಅದನ್ನು ನಿರಾಕರಿಸಬಹುದು. ಆದರೆ, ಈ ತಿದ್ದುಪಡಿಯನ್ನು ನಾವು ಚುನಾವಣೆಯ ಅಥವಾ ಪ್ರಾತಿನಿಧ್ಯದ ಕೆಲವು ನಿರ್ದಿಷ್ಟ ವಿಧಾನದ ಹಿಡಿತ ಸಾಧಿಸುವುದಕ್ಕಾಗಿ ಮಂಡಿಸಲಾಗಿದೆ ಎಂದು ಹೇಳುವುದು ತಪ್ಪಾಗಿ ನಿರ್ಣಯಿಸಿದಂತಾಗುತ್ತದೆ. ಜನರ ಮತಗಳಿಂದ ಆಯ್ಕೆಯಾಗಿರುವ ಯಾರೊಬ್ಬ ರಾಜ್ಯಪಾಲರೂ, ಜನರು ಯಾರೇ ಆಗಿರಲಿ, ಅವರು ಮುಸ್ಲಿಮರಾಗಿರಲಿ ಅಥವಾ ಮುಸ್ಲಿಮರಾಗಿಲ್ಲದಿರಲಿ, ಅವರ ಪ್ರಾತಿನಿಧ್ಯವಿಲ್ಲದೇ ಮಂತ್ರಿಮಂಡಲವನ್ನು ರಚಿಸುವುದು ಸಾಧ್ಯವಿಲ್ಲವೆಂದು ನಾನು ವೈಯಕ್ತಿಕವಾಗಿ ನಿಮಗೆ ಭರವಸೆ ನೀಡುತ್ತೇನೆ. ನನಗೆ ನಂಬಿಕೆ ಇದೆ. ಆದ್ದರಿಂದ ಈ ತಿದ್ದುಪಡಿಯನ್ನು ಆ ಪರಿಗಣನೆಯ ದೃಷ್ಟಿಯಿಂದ ನಾವು ಕೇಳುತ್ತಿದ್ದೇವೆ ಎಂಬ ದೃಷ್ಟಿಯಿಂದ ನಾನು ಹೇಳುತ್ತಿಲ್ಲ.

ನಾನು ಇಷ್ಟು ಮಾತನಾಡಿ, ಶ್ರೀ ಅಜೀಜ್ ಅಹ್ಮದ್ ಖಾನ್ ಅವರು ಮಂಡಿಸಿದ ತಿದ್ದುಪಡಿಯನ್ನು ಬೆಂಬಲಿಸುತ್ತೇನೆ.

**ಶ್ರೀ ಕೆ.ಎಂ. ಮುನ್ಷಿ** (ಮುಂಬೈ : ಸಾಮಾನ್ಯ) : ಮಾನ್ಯ ಅಧ್ಯಕ್ಷರೆ, ನನ್ನ ಸ್ನೇಹಿತರಾದ ಶ್ರೀ ಖಲಿಖುಜ್ಜಮಾನ್ ಅವರು ತಿಳಿಸಿದ ಅಭಿಪ್ರಾಯಕ್ಕೆ ಸಂಬಂಧಿಸಿದಂತೆ, ನಾನು ಕೆಲವು ಮಾತುಗಳನ್ನಾಡಬೇಕಾಗಿದೆ. ಈಗಾಗಲೇ ಸದನವು ಗಮನಿಸಿರುವಂತೆ ಶ್ರೀ ಅಜೀಜ್ ಅಹ್ಮದ್ ಖಾನ್ ಅವರು ಮಂಡಿಸಿರುವ ತಿದ್ದುಪಡಿಯ ಪ್ರಕಾರ, ಮಂತ್ರಿಮಂಡಲವನ್ನು ದಾಮಾಷಾ ಪ್ರಮಾಣದ ಪ್ರಾತಿನಿಧ್ಯದ ಮೂಲಕ ಚುನಾಯಿಸತಕ್ಕದ್ದು. ಆದರೆ, ಮಂಡಿಸಿರುವ ಈ ಎರಡೂ ತಿದ್ದುಪಡಿಗಳು ಪರಸ್ಪರ ವಿರುದ್ಧವಾಗಿವೆ. ಶ್ರೀ ಅಹ್ಮದ್ ಇಬ್ರಾಹಿಮ್ ಸಾಹೇಬ್ ಅವರು, ಮಂತ್ರಿಗಳು ಪ್ರಾಂತೀಯ ವಿಧಾನಮಂಡಲಕ್ಕೆ ಜವಾಬ್ದಾರರಾಗಿರತಕ್ಕದ್ದು ಎಂದರೆ, ದಾಮಾಷಾ–ಪ್ರಾತಿನಿಧ್ಯದ ಆಧಾರದ ಮೇಲೆ ಚುನಾಯಿತರಾಗಿರುವ ಮಂತ್ರಿಗಳು, ವಿಧಾನಮಂಡಲಕ್ಕೆ ಜವಾಬ್ದಾರರಾಗಿರತಕ್ಕದ್ದು. ಇದನ್ನೇ ಬೇರೆ ರೀತಿ ಹೇಳುವುದಾದರೆ ವಾಗ್ದಂಡನೆಯ ನಿರ್ಣಯವಾದ ಮೇಲೆ ಆ ಮಂತ್ರಿಯವರು ರಾಜೀನಾಮೆ ನೀಡತಕ್ಕದ್ದು. ಇದಕ್ಕೆ ಪ್ರತಿಯಾಗಿ ಹೇಳುವುದಾದರೆ, ಬೇಗಮ್ ಅಜೀಜ್ ರಸೂಲ್ ಅವರು ಮಂಡಿಸಿದ ತಿದ್ದುಪಡಿಯ ಪ್ರಕಾರ ದಾಮಾಷಾ–ಪ್ರಾತಿನಿಧ್ಯದ ಮೂಲಕ ಚುನಾಯಿತರಾದ ಮಂತ್ರಿಗಳು, ವಿಧಾನಸಭೆಯ ನಿಗದಿತ ಅವಧಿಪರ್ಯಂತ ಮುಂದುವರಿಯತಕ್ಕದ್ದು. ಎರಡನೇ ತಿದ್ದುಪಡಿಯ ಉದ್ದೇಶವು, ಮಂತ್ರಿಗಳು ದಾಮಾಷಾ–ಪ್ರಾತಿನಿಧ್ಯದ ಮೂಲಕ ಚುನಾಯಿತರಾಗತಕ್ಕದ್ದು ಮತ್ತು ವಿಧಾನಸಭೆಯ ನಿಗದಿತ ಅವಧಿಯ ಮುಕ್ತಾಯದವರೆಗೂ ಮುಂದುವರಿಯತಕ್ಕದ್ದು. ಮಾನ್ಯರೆ, ಈ ಯೋಜನೆಯ ತೊಡಕುಗಳನ್ನು ಈ ಸದನದ ಮುಂದೆ ಸ್ಪಷ್ಟ ಪಡಿಸಲು ಇಚ್ಛಿಸುತ್ತೇನೆ. ಪ್ರತಿಯೊಬ್ಬರಿಗೂ ತಿಳಿದಿರುವಂತೆ ದಾಮಾಷಾ–ಪ್ರಾತಿನಿಧ್ಯ ಎಂದರೆ, ಸದನದಲ್ಲಿ ಬಹುಮತದ ಬೆಂಬಲದ ಬದಲು, ಸಣ್ಣಗುಂಪಿನ ಮತವನ್ನು ಪಡೆದುಕೊಳ್ಳಬೇಕು ಮತ್ತು ಅಲ್ಪಸಂಖ್ಯಾತರ ಆಯ್ಕೆಯಲ್ಲಿ ದಾಮಾಷಾ–ಪ್ರಾತಿನಿಧ್ಯವಾಗಿರುವ ದೇಶದ ರಾಜಕೀಯ ಜೀವನವು, ತುಂಡು ತುಂಡುಗಳಾಗುವುದಕ್ಕಿಂತ ಬೇರೇನೂ ಆಗುವುದಿಲ್ಲ. ನಾನು ಇದಕ್ಕೆ ಸ್ಪಷ್ಟ ಉದಾಹರಣೆ ಕೊಡುತ್ತೇನೆ. ಅದೆಂದರೆ, ೩೦೦ ಸದಸ್ಯರ ಸದನದಲ್ಲಿ ೧೫೧ ಸದಸ್ಯರ ಬೆಂಬಲ ಇರುವ ಬಹುಮತ ಪಕ್ಷವು, ಮಂತ್ರಿಯೊಬ್ಬರು ತಮ್ಮ ಹುದ್ದೆಯಲ್ಲೇ ಉಳಿಯಬೇಕಾದರೆ ಬೆಂಬಲ ನೀಡಲೇಬೇಕು. ಆದರೆ ದಾಮಾಷಾ–ಪ್ರಾತಿನಿಧ್ಯದ ಪ್ರಕಾರ, ಏಳು ಜನ ಮಂತ್ರಿಗಳಿಗೆ ಅವಕಾಶ ಇದ್ದರೆ ಮತ್ತು ೩೦೦ ಮತ ಚಲಾಯಿಸುವ ಸದಸ್ಯರಿದ್ದರೆ, ೩೫ ಅಥವಾ ೪೦ ಸದಸ್ಯರ ಪ್ರಥಮ ಮತಗಳನ್ನು ಪಡೆದರೆ ಮಂತ್ರಿಯಾಗಲು ಅರ್ಹರಾಗುತ್ತಾರೆ. ಆದ್ದರಿಂದ ಸದನವು ಸಾಮಾನ್ಯ ತತ್ತ್ವಗಳ ಆಧಾರದ ಮೇಲೆ ಚುನಾಯಿತರಾದ ಪ್ರತಿನಿಧಿಗಳ ಸಂಯೋಜಿತ ನಿಕಾಯವನ್ನು ಮಂತ್ರಿಮಂಡಲವಾಗಿ ರಚಿಸಬೇಕಾಗುತ್ತದೆ. ಆದರೆ, ಮಂತ್ರಿಮಂಡಲವು ನೆರವೇರಿಸಬೇಕಾದ ತತ್ತ್ವಗಳನ್ನು ಗಮನಿಸಿ ಅಲ್ಲ. ಆದರೆ, ಅದು ನಿಕಾಯವನ್ನು ವರ್ಗಗಳಾಗಿ ತುಂಡು ತುಂಡಾಗಿ ಮಾಡಿದಾಗ, ಪ್ರತಿಯೊಬ್ಬರೂ ಎಷ್ಟು ಸಾಧ್ಯವೋ ಅಷ್ಟು ಪ್ರಥಮ ಮತಗಳನ್ನು ಪಡೆಯಲು ಪ್ರಯತ್ನಿಸುತ್ತಾರೆ. ನಾನು ಇದನ್ನು ಒಂದು ತತ್ತ್ವದ ವಿಷಯವಾಗಿ ಹೇಳುತ್ತಿಲ್ಲ. ಒಂದನೇ ವಿಶ್ವ ಯುದ್ಧದ ಸಮಯದ ಕೊನೆಯಲ್ಲಿ ವರ್ಸೈ ಒಪ್ಪಂದದ ತರುವಾಯ, ದಾಮಾಷಾ–ಪ್ರಾತಿನಿಧ್ಯಕ್ಕಾಗಿ ಅಧ್ಯಕ್ಷರಾದ ವಿಲ್ಸನ್ ಅವರಿಂದಾಗಿ, ಕೇಂದ್ರೀಯ ಯೂರೋಪಿನ ಅನೇಕ ದೇಶಗಳಲ್ಲಿ, ದಾಮಾಷಾ–ಪ್ರಾತಿನಿಧ್ಯವನ್ನು ಪ್ರಾರಂಭಿಸಲಾಯಿತು ಮತ್ತು ಅದಕ್ಕಾಗಿ ಪರಿತಪಿಸುತ್ತಾ ಬದುಕುತ್ತಿದ್ದಾರೆ. ರಾಷ್ಟ್ರದ ಒಳಿತನ್ನು ಮುಂದಿಟ್ಟುಕೊಳ್ಳುವುದಕ್ಕೆ ಬದಲಾಗಿ, ಮಂತ್ರಿಗಳು ಅತ್ಯಂತ ಸಂಕುಚಿತ ಘೋಷಣೆಗಳನ್ನು ಮಾಡುತ್ತಾ ಸಣ್ಣ ಸಣ್ಣ ಗುಂಪುಗಳ ಮತಗಳನ್ನು ಪಡೆದುಕೊಳ್ಳುವಲ್ಲಿಯೇ ನಿರತರಾಗಿದ್ದರು. ಆದ್ದರಿಂದ ದಾಮಾಷಾ–ಪ್ರಾತಿನಿಧ್ಯದ ಒಟ್ಟಾರೆ ಫಲಿತಾಂಶವು, ಸಾಮಾನ್ಯ ತತ್ತ್ವಗಳನ್ನು ಆಧರಿಸಿದ ವೈಶಾಲ್ಯತೆಯಿಂದ ಇರುವುದಕ್ಕೆ ಬದಲಾಗಿ, ಎಲ್ಲ ಮಂತ್ರಿಗಳು ಒಟ್ಟಾರೆಯಾಗಿ ಸಾಮೂಹಿಕ ಜವಾಬ್ದಾರಿಯಿಂದ ಮತ್ತು ಒಟ್ಟಾರೆ ಪ್ರಾಂತ್ಯಕ್ಕೆ ಒಳಿತನ್ನು ಮಾಡುವಲ್ಲಿ ಆಸಕ್ತಿ ಹೊಂದಿರಬೇಕಾದರೆ, ಅದಕ್ಕೆ ಬೇರೆ ಬೇರೆ ತತ್ತ್ವಗಳನ್ನು ಪ್ರತಿಪಾದಿಸುತ್ತಿರುವ ವಿವಿಧ ಗುಂಪುಗಳ ಪ್ರಾತಿನಿಧ್ಯ ಇರಬೇಕಾಗುತ್ತದೆ. ವಾಸ್ತವಿಕವಾಗಿ ವಿಭಿನ್ನ ಕಾರ್ಯನೀತಿಗಳ ಸಮ್ಮಿಶ್ರಣ ಇರುವಾಗ, ೩೫ ಮತಗಳು, ಹೆಚ್ಚು ಕಡಿಮೆಯಾಗುವುದನ್ನು ತಪ್ಪಿಸಲಾಗದಂಥ

ಫಲಿತಾಂಶವೇ ಪ್ರಾಪ್ತವಾಗುತ್ತದೆ ಮತ್ತು ಸಮ್ಮಿಶ್ರ ಸರ್ಕಾರಗಳು ರಚನೆಯಾದಾಗ ಫಲಿತಾಂಶ ಏನಾಗುತ್ತದೆ ಎಂಬುದು ನಮಗೆ ಗೊತ್ತೆ ಇದೆ. ಆದಾಗ್ಯೂ ಕಳೆದ ೨೫ ವರ್ಷಗಳಿಂದ ಫ್ರಾನ್ಸ್‌ನಲ್ಲಿ ಏನಾಗಿದೆ ಎಂಬುದು ಹಾಗೂ ಏನಾಗುತ್ತಿದೆ ಎಂಬುದು ಸದಸ್ಯರಿಗೆ ತಿಳಿದೇ ಇದೆ. ಫ್ರಾನ್ಸ್‌ನಲ್ಲಿ, ಸಮ್ಮಿಶ್ರ ಮಂತ್ರಿಮಂಡಲಗಳು ಇರುವುದು ಬಹುತೇಕ ಫ್ಯಾಷನ್ (ರೂಢಿ) ಆಗಿದೆ ಹಾಗೂ ಇದರ ಪರಿಣಾಮವಾಗಿ ಮಂತ್ರಿಮಂಡಲಗಳು ರಟ್ಟಿನ ಕೋಟೆಯಂತೆ ಬೀಳುತ್ತಿವೆ. ಕಳೆದ ಎಂಟು ಹತ್ತು ವರ್ಷಗಳ ಅವಧಿಯಲ್ಲಿ, ಇಪ್ಪತ್ತೆರಡಕ್ಕೂ ಹೆಚ್ಚು ಮಂತ್ರಿಮಂಡಲಗಳು ಆಗಿಹೋದವು. ಕೆಲವು ಮಂತ್ರಿಮಂಡಲಗಳು ಎಂಟು ದಿನಗಳಲ್ಲೇ ಬಿದ್ದು ಹೋದರೆ ಇನ್ನು ಕೆಲವು ಒಂದು ದಿನವೂ ಆಡಳಿತ ನಡೆಸಲಿಲ್ಲ. ಹಿಟ್ಲರ್‌ನು ಆಸ್ಟ್ರಿಯಾವನ್ನು ಪ್ರವೇಶಿಸಿದಾಗ, ಫ್ರಾನ್ಸ್‌ನಲ್ಲಿ ಯಾವುದೇ ಮಂತ್ರಿಮಂಡಲ ಇರಲಿಲ್ಲ. ಅವನು ರೈನ್‌ಲ್ಯಾಂಡ್ ಪ್ರವೇಶಿಸಿದಾಗ, ಫ್ರಾನ್ಸ್‌ನಲ್ಲಿ ಉಸ್ತುವಾರಿ ಮಂತ್ರಿಮಂಡಲವು ಇತ್ತು. ಆದರೆ, ಯಾರೊಬ್ಬರು ಪ್ರಧಾನಮಂತ್ರಿ ಆಗಿರಲಿಲ್ಲ. ಸಮ್ಮಿಶ್ರ ಮಂತ್ರಿಮಂಡಲಗಳು ಇದ್ದಾಗಿನ ಪರಿಸ್ಥಿತಿ ಇದಾಗಿತ್ತು. ಇಂಥ ಪರಿಸ್ಥಿತಿ ಅತ್ಯಂತ ಅಪಾಯಕಾರಿಯಾಗಿದ್ದು, ಇದರಿಂದಾಗಿ ಸಮ್ಮಿಶ್ರ ಮಂತ್ರಿಮಂಡಲಗಳು ಇರುವುದು ಪ್ರಜಾಪ್ರಭುತ್ವಕ್ಕೆ ಅಪಾಯ ಉಂಟುಮಾಡಬಹುದಾದ ಸಂಭವ ಇರುತ್ತದೆ. ಪ್ರಜಾಪ್ರಭುತ್ವವನ್ನು ಅತ್ಯಂತ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಇರುವುದೊಂದೇ ಮಾರ್ಗವೆಂದರೆ, ಬಹುಮತವುಳ್ಳ ಮಂತ್ರಿಮಂಡಲ. ಬಹುಮತ ಪಕ್ಷ ಇದ್ದದ್ದಾದರೆ, ಮೊಟ್ಟಮೊದಲಿಗೆ ಮಾಡಬೇಕಾದ ಏಕೈಕ ಕಾರ್ಯವೆಂದರೆ, ಮಂತ್ರಿಗಳ ಒಂದು ಸಮೂಹವನ್ನು ರಚಿಸಿಕೊಳ್ಳುವುದೇ ಆಗಿದೆ, ಎರಡನೆಯದು, ಸಾಮೂಹಿಕ ಜವಾಬ್ದಾರಿ. ಕೊನೆಯದಾಗಿ ಪ್ರಧಾನಮಂತ್ರಿಯ ಆ ಸಾಮರಸ್ಯದಿಂದ ಕೂಡಿದ ಮಂತ್ರಿಮಂಡಲದ ಮೇಲೆ ತನ್ನ ನಿಯಂತ್ರಣವನ್ನು ಇಟ್ಟುಕೊಂಡಿರುತ್ತಾನೆ. ಮಾನ್ಯರೆ, ಇಂಗ್ಲೆಂಡಿನಲ್ಲಿ ಪ್ರಧಾನಮಂತ್ರಿಗಳ ಅಧಿಕಾರವು ಅಪರಿಮಿತವಾದುದು ಎಂಬುದು ಸದನಕ್ಕೆ ಚೆನ್ನಾಗಿ ತಿಳಿಸಿದೆ ಮತ್ತು ಅಂಥ ಅಧಿಕಾರವು ಬ್ರಿಟಿಷ್ ಸರ್ಕಾರವನ್ನು ಅತ್ಯಂತ ಬಲಯುತವನ್ನಾಗಿ ಮಾಡಿದೆ. ಯಾರು ಮಂತ್ರಿಗಳಾಗತಕ್ಕದ್ದೆಂಬುದನ್ನು ಪ್ರಧಾನಮಂತ್ರಿಗಳೇ ನಿರ್ಧರಿಸುತ್ತಾರೆ ಮತ್ತು ಅವರು ಮಂತ್ರಿಯೊಬ್ಬರನ್ನು ವಜಾಮಾಡಬಹುದಾಗಿದೆ ಮತ್ತು "ಪಕ್ಷವು ನನ್ನನ್ನು ಬೆಂಬಲಿಸದಿದ್ದರೆ ನಾನು ಸದನವನ್ನು ವಿಸರ್ಜಿಸಿ ಜನರ ಮುಂದೆ ಹೋಗಿ ನಿಲ್ಲುತ್ತೇನೆ." ಎಂದು ಹೇಳಿ ತನ್ನ ಪಕ್ಷವನ್ನು ನಿಯಂತ್ರಿಸಬಹುದು. ಆದ್ದರಿಂದ, ನಾವು ದೇಶದಲ್ಲಿ ಅತ್ಯಂತ ಬಹುದೊಡ್ಡ ಪ್ರಮಾಣದಲ್ಲಿ ಮಾಡಿಕೊಂಡಿರುವ ಜವಾಬ್ದಾರಿಯುಳ್ಳ ಸರ್ಕಾರದ ವ್ಯವಸ್ಥೆ ಬ್ರಿಟಿಷ್ ಸರ್ಕಾರದ ಮಾದರಿಯದ್ದಾಗಿದೆ ಮತ್ತು ಈ ಮಾದರಿಯ ವ್ಯವಸ್ಥೆಯನ್ನು ಬಿಟ್ಟುಬಿಟ್ಟರೆ ಅದು ಬಹಳಷ್ಟು ಮಟ್ಟಿಗೆ ಮಂತ್ರಿಮಂಡಲವನ್ನು ದುರ್ಬಲಗೊಳಿಸುತ್ತದೆ ಮತ್ತು ಪ್ರಾಂತೀಯ ವಿಧಾನಮಂಡಲಕ್ಕೆ ಅಸ್ತಿತ್ವವೇ ಇರುವುದಿಲ್ಲ ಹಾಗೂ ಸದನವು ಪ್ರಾಂತ್ಯದ ಒಳಿತಿಗಾಗಿ ಶ್ರದ್ಧೆಯಿಂದ ಏನನ್ನು ಮಾಡಲಾಗುವುದಿಲ್ಲ. ಆದ್ದರಿಂದ ದಾಮಾಷಾ ಪ್ರಾತಿನಿಧ್ಯದ ವಿಷಯವು ಎಷ್ಟು ಮುಗ್ಧವಾಗಿರುವಂತೆ ಕಂಡುಬರುತ್ತದೆ ಎಂದರೆ, ಜನರು ಇದರಿಂದ ಕೂಡಲೇ ಆಕರ್ಷಿತರಾಗುತ್ತಾರೆ. ಇದು ಜಗತ್ತಿನ ಒಂದಾದರೂ ದೇಶದಲ್ಲಿ ಪ್ರಜಾಪ್ರಭುತ್ವ ಸಂಸ್ಥೆಗಳು ರೂಪುಗೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಿಲ್ಲ. ನಿಜವಾಗಿ ಹೇಳಬೇಕೆಂದರೆ, ಶ್ರೀ ಅಜೀಜ್ ಅಹ್ಮದ್ ಅವರು ಸೂಚಿಸಿರುವ ತಿದ್ದುಪಡಿಯು ಪ್ರಜಾಪ್ರಭುತ್ವಕ್ಕೆ ಮಾರಕವಾಗಿದೆ. ನಿಮ್ಮ ದೇಶದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಇರಬೇಕಾದರೆ, ಸದನವು ಮಂತ್ರಿಮಂಡಲದ ವಿರುದ್ಧ ವಾಗ್ದಂಡನೆ ವಿಧಿಸಿದರೆ, ಮಂತ್ರಿಮಂಡಲವು ರಾಜೀನಾಮೆ ಕೊಡಲು ಸಿದ್ಧವಿರಬೇಕು. ಇದು ಮುಂದುವರಿದದ್ದಾದರೆ, ಮಂತ್ರಿಮಂಡಲವು, ಜನಾಭಿಪ್ರಾಯದ ಏರಿಳಿತಗಳಿಗೆ ಸಹಜವಾಗಿ ಜವಾಬ್ದಾರಿಯಾಗಿರುವುದಿಲ್ಲ.

ನನ್ನ ಸ್ನೇಹಿತರಾದ ಶ್ರೀ ಖಲಿಖುಜ್ಜಮಾನ್ ಅವರು ಸದನದ ಮುಂದೆ ಮಂಡಿಸಿರುವ ಒಂದೇ ಒಂದು ವಾದವನ್ನು ನಾನು ಉಲ್ಲೇಖಿಸಬಯಸುತ್ತೇನೆ. "ರಾಜ್ಯಪಾಲರಿಗೆ ಬಹಳ ದೊಡ್ಡ ಅಧಿಕಾರಗಳನ್ನು ಕೊಡುವುದಕ್ಕೆ ಹೋಗುವುದಾದರೆ, ಅದಕ್ಕಿಂತ ಹೆಚ್ಚಿನ ಅಧಿಕಾರಗಳನ್ನು ಮಂತ್ರಿಗಳಿಗೆ ಕೊಡಬೇಕು"

ಎಂದು ಹೇಳಿದ್ದಾರೆ. ಸದನವು ಅಂಗೀಕರಿಸಿದ, ೯ನೇ ಖಂಡದ ಅಡಿಯಲ್ಲಿ ರಾಜ್ಯಪಾಲರಿಗೆ ಕೆಲವು ವಿವೇಚನಾಧಿಕಾರಗಳನ್ನು ಕೊಡಲಾಗಿದೆ. ಇದಕ್ಕೆ ಮೊದಲು ಸದನದಲ್ಲಿ ಈವರೆಗೂ ಈ ವಿವೇಚನಾಧಿಕಾರಗಳ ಪೂರ್ಣ ವ್ಯಾಪ್ತಿ ಮತ್ತು ಅವಕಾಶದ ಬಗ್ಗೆ ಏನನ್ನೂ ಹೇಳಿಲ್ಲ. ಇನ್ನೂ ಶೈಶವಾವಸ್ಥೆಯಲ್ಲಿ ಇರುವ ಪ್ರಜಾಪ್ರಭುತ್ವ ವ್ಯವಸ್ಥೆಗಳಲ್ಲಿ, ಇನ್ನೂ ಅನುಭವ ಪಡೆಯಬೇಕಾಗಿರುವ ಪ್ರಜಾಪ್ರಭುತ್ವ ವ್ಯವಸ್ಥೆಗಳಲ್ಲಿ, ಸಾರ್ವಜನಿಕ ನೆಮ್ಮದಿಗೆ ತೀವ್ರ ಭಯ ಆವರಿಸಿದ್ದಂಥ ಕಾಲದಲ್ಲಿ, ಇದನ್ನು ಮನಗಾಣಬೇಕಾಗುತ್ತದೆ. ಇದಕ್ಕಾಗಿ ಕೇವಲ ಸ್ಥಿರಗೊಳಿಸುವ ಅಗತ್ಯವಷ್ಟೇ ಅಲ್ಲದೇ ಬಲವಾದ ಸ್ಥಿರಗೊಳಿಸುವಿಕೆ ಅಗತ್ಯ. ಆದ್ದರಿಂದ ರಾಜ್ಯಪಾಲರಿಗೆ ಕೊಡಬೇಕೆಂದು ಕೋರಿರುವ ವಿವೇಚನಾಧಿಕಾರಗಳನ್ನು, ಸಾರ್ವಜನಿಕರ ನೆಮ್ಮದಿಗೆ ಗಂಭೀರ ಅಪಾಯವಿರುವ ಸಂದರ್ಭಗಳಲ್ಲಿ ಮಾತ್ರ ಕೊಡಬೇಕೆಂಬುದನ್ನು ಮನಗಾಣಬೇಕು. ಪ್ರಜಾಸತ್ತಾತ್ಮಕ ಸಂಸ್ಥೆಗಳು, ತಮ್ಮ ತಮ್ಮ ಸಾಮಾನ್ಯ ಕೆಲಸಕಾರ್ಯಗಳನ್ನು ನಡೆಸಬೇಕಾದಾಗ ಸಾರ್ವಜನಿಕ ನೆಮ್ಮದಿಗೆ ಅತ್ಯಂತ ಗಂಭೀರ ಸ್ವರೂಪದ ಅಡ್ಡಿ ಆಂತಕಗಳಿಲ್ಲದಿದ್ದರೆ, ಅಂಥ ವ್ಯವಸ್ಥೆ ಸುಗಮವಾಗಿರುತ್ತದೆ. ಮಂತ್ರಿಮ್ಮಂಡಲವು ಎಂದಿನಂತೆ ಕಾರ್ಯಗಳನ್ನು ನಿರ್ವಹಿಸುವವು. ಸಾರ್ವಜನಿಕ ನೆಮ್ಮದಿಗೆ ಗಂಭೀರ ಅಪಾಯ ಉಂಟಾಗುವ ಸಂಭವ ಇದ್ದರೆ ಮಾತ್ರ, ರಾಜ್ಯಪಾಲರು ಮಧ್ಯೆ ಪ್ರವೇಶಿಸುತ್ತಾರೆ. ಆಗ ಪ್ರಾಂತ್ಯದಲ್ಲಿ ಸಾರ್ವಜನಿಕ ನೆಮ್ಮದಿಗೆ ಅತ್ಯಂತ ಹೆಚ್ಚಿನ ಅಗತ್ಯ ನೀಡುವಾಗ, ಪ್ರತಿಯೊಂದು ವಿಷಯವೂ ಗೌಣವಾಗಬೇಕಾಗುತ್ತದೆ. ಆ ಹಂತದಲ್ಲಿ, ವಯಸ್ಕಮತದಾನದ ಮೂಲಕ ಚುನಾಯಿತರಾದ ರಾಜ್ಯಪಾಲರಿಗೆ ಇನ್ನೂ ಹೆಚ್ಚಿನ ಅಧಿಕಾರಗಳು ಸೇರಿಕೊಂಡು "ನನ್ನ ಪ್ರಪ್ರಥಮ ಹಾಗೂ ಅಂತಿಮ ಕರ್ತವ್ಯ, ಶಾಂತಿ ಮತ್ತು ನೆಮ್ಮದಿಯನ್ನು ಪುನರ್‌ಸ್ಥಾಪಿಸುವುದೇ ಆಗಿದೆ" ಎಂದು ಸಾರ್ವಜನಿಕ ನೆಮ್ಮದಿಗೆ ಅಪಾಯ ಉಂಟಾಗುವ ಸಂಭವವಿದ್ದಾಗಷ್ಟೇ ಅಲ್ಲದೆ, ವ್ಯವಸ್ಥೆಯೇ ನಾಶವಾಗಿದ್ದಾಗಲೂ ಕೆಲವು ಪ್ರಾಂತ್ಯಗಳಲ್ಲಿ ಸರ್ವೋನ್ನತ ಅಧಿಕಾರ ಹೊಂದಿದ್ದರೂ ದೇಶವು ತೀವ್ರ ತೊಂದರೆ ಅನುಭವಿಸಿತು. ವಿವೇಚನಾಧಿಕಾರ ಕೊಟ್ಟಿದ್ದರಿಂದಾಗಿಯೇ ಇಂಥ ಸಂದರ್ಭವನ್ನು ಎದುರಿಸಬೇಕಾಯಿತು. ಅಂಥ ಸಂದರ್ಭ ಉಂಟಾಗುವುದು ಬಹಳ ಕಡಿಮೆ ಆಗಿದ್ದರೂ, ಅಂಥ ಸಂದರ್ಭ ಇನ್ನೆಂದೂ ಬರದಿರಲೆಂದು ಹಾರೈಸೋಣ, ಮಂತ್ರಿಮಂಡಲವು ಜವಾಬ್ದಾರಿಯುತ ಮಂತ್ರಿಮಂಡಲವಾಗಿ ಕಾರ್ಯನಿರ್ವಹಿಸುವಂತಾಗಲಿ ಮತ್ತು ಈ ತಿದ್ದುಪಡಿಗಳನ್ನು ಈ ಸದನವು ಏಕೆ ಒಪ್ಪಿಕೊಳ್ಳಬೇಕು ಎಂಬುದಕ್ಕೆ ಕಾರಣಗಳು ಇಲ್ಲ.

**ಶ್ರೀ ಫೂಲ್ ಸಿಂಗ್** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ) :*[ ಮಾನ್ಯ ಅಧ್ಯಕ್ಷರೆ, ಶ್ರೀ ಮುನ್ಷಿ ಅವರ ಭಾಷಣದ ತರುವಾಯ ಈ ತಿದ್ದುಪಡಿಗಳನ್ನು ವಿರೋಧಿಸಿ ನಾನು ಹೆಚ್ಚಿಗೆ ಏನನ್ನೂ ಹೇಳದಿದ್ದರೂ, ದಾಮಾಷಾ ಪ್ರಾತಿನಿಧ್ಯದ ಮೂಲಕ ಚುನಾವಣೆಗಳನ್ನು ನಡೆಸಬಾರದು ಎಂಬುದನ್ನು ಹೇಳಬೇಕಾಗುತ್ತದೆ. ಅಂಥ ಮಂತ್ರಿಮಂಡಲವನ್ನು ಸಮ್ಮಿಶ್ರ ಸರ್ಕಾರವಾಗಿ ಮಾರ್ಪಡಿಸಲು ಎಂದೂ ಸಾಧ್ಯವಿಲ್ಲ. ಏಕೆಂದರೆ, ಅದು ಯಾವಾಗಲೂ ಬೇರೆ ಬೇರೆ ಪಕ್ಷಗಳು ಒಪ್ಪಂದ ಮಾಡಿಕೊಳ್ಳುವುದರ ಆಧಾರದ ಮೇಲೆ ನಿಂತಿದೆ. ಆದರೆ, ಮಂತ್ರಿಮಂಡಲವನ್ನು ಆ ಪಕ್ಷದ ಸದಸ್ಯರು ಚಲಾಯಿಸಿದ ಮತಗಳ ಮೂಲಕ ಚುನಾಯಿಸಿದಾಗ ಮಂತ್ರಿಗಳು ಜಂಟಿಯಾಗಿಯೇ ಕಾರ್ಯನಿರ್ವಹಿಸಲಿ ಅಥವಾ ಇಲ್ಲದಿರಲಿ, ಅವರ ಜವಾಬ್ದಾರಿಯ ಮೇಲೆ ಮಂತ್ರಿಮಂಡಲವು ಕಾರ್ಯನಿರ್ವಹಿಸುತ್ತದೆ. ಮೌಲ್ವಿ ಅಜೀಜ್ ಅಹ್ಮದ್ ಸಾಹೇಬ್ ಅವರು ಮಂಡಿಸಿರುವ ತಿದ್ದುಪಡಿಯ ಪ್ರಕಾರ ಯಾವುದೇ ಅಂತರ ಇದ್ದಿದ್ದಾದರೆ ಅದನ್ನು ತುಂಬುತ್ತವೆ. ಎಂದರೆ, ಹಾಗೆ ಚುನಾಯಿತರಾದ ಮಂತ್ರಿಗಳು ತಮ್ಮಲ್ಲೆ ಜಗಳದಲ್ಲಿ ತೊಡಗಿದರೆ, ಒಬ್ಬರು ತೆಗೆದುಕೊಂಡ ಕ್ರಮವನ್ನು ಇನ್ನೊಬ್ಬರು ನಿರಾಕರಿಸುತ್ತಾರೆ. ಆಗ ವಿಧಾನಸಭೆಗೆ ಅಂಥ ಮಂತ್ರಿಮಂಡಲವನ್ನು ತೆಗೆದುಹಾಕುವುದಕ್ಕೂ ಸಹ ಅಧಿಕಾರ ಇಲ್ಲದಂತಾಗುತ್ತದೆ. ಇದನ್ನೇ ಬೇರೆ ರೀತಿ ಹೇಳುವುದಾದರೆ, ಮಂತ್ರಿಗಳು ಒಳ್ಳೆಯದನ್ನೇ ಮಾಡಲಿ ಅಥವಾ ಕೆಟ್ಟದ್ದನ್ನೇ ಮಾಡಲಿ, ಅವರು ವಿಧಾನಮಂಡಲದ ಅವಧಿಯವರೆಗೂ ಮುಂದುವರಿಯುತ್ತಾರೆ. ಇದು ಊಹೆಗೂ ಮೀರಿದ ವಿಷಯ. ನಾನು ಈಗಾಗಲೇ ಹೇಳಿರುವಂತೆ, ಸದನದ ವೇಳೆಯನ್ನು ವ್ಯರ್ಥಮಾಡಲು ಇಚ್ಛಿಸುವುದಿಲ್ಲ. ಪಕ್ಷಾಧಾರಿತ

ಸರ್ಕಾರವು ಪ್ರಗತಿಪರ ಸರ್ಕಾರ ಆಗಿರುತ್ತದೆ. ಸಮ್ಮಿಶ್ರ ಸರ್ಕಾರವು ಒಂದು ನಿರ್ದಿಷ್ಟ ಉದ್ದೇಶಕ್ಕೆ ಸೂಕ್ತವಾಗಬಹುದಷ್ಟೇ, ಆದರೆ ಪಕ್ಷಾಧಾರಿತ ಸರ್ಕಾರವೂ ಅಥವಾ ಸಮ್ಮಿಶ್ರ ಸರ್ಕಾರವೂ ಆಗಿರದ ಸರ್ಕಾರವು ಯಾವುದೇ ಉದ್ದೇಶವನ್ನು ಈಡೇರದೇ ಅದನ್ನು ಕಡೆಗಣಿಸಬಹುದಷ್ಟೇ. ಅಂಥದೊಂದು ಸರ್ಕಾರದಿಂದ ದೇಶಕ್ಕೆ ಯಾವುದೇ ಉಪಯೋಗ ಇಲ್ಲ ಎಂದು ಹೇಳಲು ನಾನು ಹಿಂಜರಿಯುವುದಿಲ್ಲ. ಈ ತಿದ್ದುಪಡಿಗಳನ್ನು ಮಂಡಿಸಿದವರಿಗೆ, ಈಗಿರುವ ಮಧ್ಯಾಂತರ ಸರ್ಕಾರದಿಂದ 'ಸೂಚನೆ' ಸಿಕ್ಕದೆ ಎಂದು ನಾನು ಧೈರ್ಯದಿಂದ ಹೇಳುತ್ತೇನೆ.

ಈ ಮಧ್ಯಾಂತರ ಸರ್ಕಾರವು ಯಾವ ತೊಂದರೆಗಳಿಗೆ ಸಿಲುಕಿದೆಯೋ ಅಂಥ ತೊಂದರೆಗಳನ್ನು ಈ ವ್ಯವಸ್ಥೆಯೊಳಗೆ ಅಳವಡಿಸಿ ತೊಡಕನ್ನುಂಟುಮಾಡಲು ನಾನು ಇಚ್ಛಿಸುವುದಿಲ್ಲ. ಆಗ ಈ ತಿದ್ದುಪಡಿಗಳನ್ನು ಆಗ್ರಹಪೂರ್ವಕವಾಗಿ ವಿರೋಧಿಸುವುದು ನಮ್ಮ ಕರ್ತವ್ಯವಾಗುತ್ತದೆ. ಇಂಥ ವಿವೇಚನಾರಹಿತ ಪ್ರಯೋಗಗಳನ್ನು ಮಾಡುತ್ತಾ ಕಾಲ ಕಳೆಯಬೇಕಾಗಿಲ್ಲ. ನಾವು ಸಾಕಷ್ಟು ತ್ಯಾಗಮಾಡಿದ್ದೇವೆ. ಈಗ ದೇಶಕ್ಕೆ ಬೇಕಾಗಿರುವ ಪಕ್ಷಾಧಾರಿತ ಸರ್ಕಾರದ ರಚನೆಯಾಗಬೇಕಾಗಿದೆ. ಇಷ್ಟು ಹೇಳಿ ನಾನು ಈ ತಿದ್ದುಪಡಿಗಳನ್ನು ವಿರೋಧಿಸುತ್ತಿದ್ದೇನೆ.]*

**ಶ್ರೀ ಶಂಕರ್ ದತ್ತಾತ್ರಯ ದೇವ್** (ಮುಂಬೈ : ಸಾಮಾನ್ಯ) : ಚರ್ಚೆಯನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

**ಮಾನ್ಯ ಅಧ್ಯಕ್ಷರು** : ಮಾತನಾಡುವುದಾಗಿ ತಿಳಿಸಿರುವ ಅರ್ಧ ಡಜನ್ ಸದಸ್ಯರ ಹೆಸರುಗಳಿವೆ.

**ಅನೇಕ ಗೌರವಾನ್ವಿತ ಸದಸ್ಯರು** : ಮುಕ್ತಾಯಗೊಳಿಸಿ, ಮುಕ್ತಾಯಗೊಳಿಸಿ.

**ಮಾನ್ಯ ಅಧ್ಯಕ್ಷರು** : ಸದನವು ಚರ್ಚೆಯನ್ನು ಮುಕ್ತಾಯಗೊಳಿಸಬೇಕೆಂದು ಇಚ್ಛಿಸಿದರೆ, ನನ್ನ ಆಕ್ಷೇಪಣೆ ಏನೂ ಇಲ್ಲ. ಮುಕ್ತಾಯಗೊಳಿಸುವ ಪ್ರಸ್ತಾವ ಇದಾಗಿದೆ. ಇನ್ನೂ ಯಾರಿಗೂ ಅವಕಾಶ ಇಲ್ಲ. ಈಗಾಗಲೇ ಚರ್ಚೆಯನ್ನು ಮುಕ್ತಾಯಗೊಳಿಸಲು ಸೂಚನೆಯನ್ನು ಮಂಡಿಸಲಾಗಿದೆ. ಮುಕ್ತಾಯಗೊಳಿಸುವ ಪ್ರಸ್ತಾವವನ್ನು ನಿಮ್ಮ ಮುಂದಿಟ್ಟಿದ್ದೇನೆ.

ಪ್ರಸ್ತಾವವನ್ನು ಅಂಗೀಕರಿಸಲಾಯಿತು.

**ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಜೆ. ಪಟೇಲ್** : ಮಾನ್ಯರೆ, ಈ ಒಂದು ಖಂಡವನ್ನು ವಿರೋಧಿಸಿ ಸಾಕಷ್ಟು ಸುದೀರ್ಘವಾದ ಚರ್ಚೆ ನಡೆದಿದೆ. ಆದಾಗ್ಯೂ, ಕೆಲವರಿಗೆ ಇದರಿಂದ ಇನ್ನೂ ತೃಪ್ತಿಯಾಗಿಲ್ಲ. ಇದನ್ನು ಚರ್ಚೆ ಇಲ್ಲದೆ ಅಂಗೀಕರಿಸಬಹುದಿತ್ತು ಎಂದು ನಾನು ಭಾವಿಸಿದ್ದೆ. ಸೂಚಿಸಿದ್ದ ಮೂಲ ತಿದ್ದುಪಡಿಯನ್ನು ಸಂವಿಧಾನದ ಸಮಗ್ರ ಸಂರಚನೆಯ ಮೂಲದಲ್ಲಿಯೇ ತೆಗೆದುಬಿಡಬಹುದಾಗಿತ್ತು. ನಾವು ಇಂಥ ಮಾದರಿಯ ಪ್ರಾಂತೀಯ ಸಂವಿಧಾನವನ್ನು, ಬ್ರಿಟಿಷ್ ಮಾದರಿಯ ಸಂಸದೀಯ ಮಂತ್ರಿಮಂಡಲದ ವ್ಯವಸ್ಥೆಯಿಂದ ಅಂಗೀಕರಿಸಿದ್ದೇವೆ. ತಿದ್ದುಪಡಿಯನ್ನು ಮಂಡಿಸಿದವರು, ಬೇರೆ ಮಾದರಿಯನ್ನೇ ವಿವರಿಸಿದ್ದು, ಇದನ್ನೇ ಅಂಗೀಕರಿಸಿದ್ದಾದರೆ, ಬಹುಶಃ ಸಮಗ್ರ ಸಂವಿಧಾನವನ್ನೇ ಪುನರ್‌ಪರಿಶೀಲಿಸಬೇಕಾಗುತ್ತದೆ. ಪ್ರಸಕ್ತ ಮಾದರಿಯ ಸಂವಿಧಾನವನ್ನು ಅಂಗೀಕರಿಸಿದ ಕೆಲವು ವರ್ಷಗಳಿಂದ ನಮಗೆ ಸಾಕಷ್ಟು ಅನುಭವವಾಗಿದೆ ಎಂದು ತಿಳಿಸಿದ್ದಾರೆ. ಅದು ವಾಸ್ತವ ಸಂಗತಿಯ ಬಗ್ಗೆ ಸರಿಯಾದ ಹೇಳಿಕೆಯೇ ಎಂಬುದು ನನಗೆ ತಿಳಿಯುತ್ತಿಲ್ಲ; ಏಕೆಂದರೆ, ನಾವು ಯಾವ ಸಂವಿಧಾನದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದೇವೆಯೋ ಅದು ಅತ್ಯಂತ ಸಂಕೀರ್ಣ ಸ್ವರೂಪದ್ದಾಗಿದ್ದು, ಅದರಲ್ಲಿ ಚುನಾವಣಾ ವ್ಯವಸ್ಥೆ, ಸೇವೆಗಳು, ರಾಜ್ಯಪಾಲರ ಅಧಿಕಾರಗಳು, ಸಂವಿಧಾನದಲ್ಲಿ ಉಪಬಂಧಿಸಿರುವ ಇತಿ ಮಿತಿಗಳು ಸಂವಿಧಾನವನ್ನು ಅಂಗೀಕರಿಸಿದ್ದಾಗ ಆ ಸಂವಿಧಾನದ ಅಡಿಯಲ್ಲಿ ಕಾರ್ಯನಿರ್ವಹಿಸಲು ಮನುಷ್ಯ ಸಾಧ್ಯವಲ್ಲದ್ದಂಥವುಗಳೆಂದು ಹಾಗೂ ಮಾಡುವ ಪ್ರಯತ್ನಗಳು ವಿಫಲವಾಗುತ್ತವೆ ಎಂದು ಅದರ ಮೇಲೆ ಚರ್ಚೆ ನಡೆದಾಗ ಸಲಹೆ ಮಾಡಲಾಗಿತ್ತು. ಹಾಗಿದ್ದಾಗ್ಯೂ ಅವರು ಕಾರ್ಯನಿರ್ವಹಿಸಿದರು.

ಆ ಸಂವಿಧಾನದ ಅಡಿಯಲ್ಲಿ ಕಾರ್ಯನಿರ್ವಹಿಸುವಾಗ ಅನುಭವಿಸಿದ ತೊಂದರೆಗಳು ಮತ್ತು ನಮ್ಮಲ್ಲಿ ಕೆಲವರಿಗೆ ಆದ ಕಹಿ ಅನುಭವಗಳು ಇವುಗಳಿಗೆ ಕಾರಣ, ಮಂತ್ರಿಗಳ ಆಯ್ಕೆಯ ವಿಶಿಷ್ಟ ವ್ಯವಸ್ಥೆಯಾಗಲೀ ಅಥವಾ ಪ್ರಧಾನಮಂತ್ರಿಗಳು ತಮ್ಮ ಮಂತ್ರಿಗಳನ್ನು ಆಯ್ಕೆ ಮಾಡಿಕೊಳ್ಳಲು ಇರುವ ಅಧಿಕಾರವಾಗಲೀ ಕಾರಣವಲ್ಲ. ಆದರೆ, ಇದಕ್ಕೆ ಇನ್ನೂ ಇತರ ಕಾರಣಗಳಿವೆ. ಅವುಗಳನ್ನು ನಾವು ತಡೆಯಬೇಕಾಗಿಲ್ಲ. ಆ ಪ್ರಶ್ನೆಗಳನ್ನು ಇಲ್ಲಿ ಪ್ರಸ್ತಾವಿಸುವ ಉದ್ದೇಶ ನನಗೆ ಇಲ್ಲ. ಅದೇನೇ ಇರಲಿ, ಕೆಲವು ಭಾಷಣಕಾರರು ಕೆಲವು ಪ್ರಶ್ನೆಗಳಿಗೆ ಸಂಬಂಧಿಸಿದಂತೆ ಪ್ರಸ್ತಾವಿಸಿದ್ದಾರೆ. ಆದರೆ ನಾನು, ಈ ಬಗ್ಗೆ ವಿರೋಧಿಸಿ ಮಾತನಾಡಲು ಉದ್ದೇಶಿಸಿಲ್ಲ. ದಾಮಾಷಾ ಪ್ರಾತಿನಿಧ್ಯದ ಮೂಲಕ ಮಂತ್ರಿಗಳ ಚುನಾವಣೆ ನಡೆಸುವ ವ್ಯವಸ್ಥೆಯು, ಸಂವಿಧಾನದ ಸಮಗ್ರ ರಚನೆಗೆ ವಿರೋಧವಾದುದು, ಅದು ಪ್ರಜಾಪ್ರಭುತ್ವದ ಬುಡವನ್ನೇ ಕತ್ತರಿಸುತ್ತದೆ. ಆದ್ದರಿಂದ ಅದು ಇಲ್ಲಿ ಹೊಂದಿಕೆಯಾಗುವುದಿಲ್ಲ. ಅಂಥ ಸಂವಿಧಾನದ ಅಡಿಯಲ್ಲಿ ನಮಗೆ ಆಗುವ ಅನುಭವವು, ಪ್ರಸಕ್ತ ಸಂವಿಧಾನದ ಅಡಿಯಲ್ಲಿ ಕಾರ್ಯನಿರ್ವಹಿಸುವಾಗ ಆಗಿರುವ ಅನುಭವಕ್ಕಿಂತ ಅತ್ಯಂತ ಕೆಟ್ಟ ಅನುಭವ ಆಗುವುದು. ಆದ್ದರಿಂದ, ಈ ಸಂವಿಧಾನದಲ್ಲಿ ಅಂಥ ಅನ್ವೇಷಣೆಯನ್ನು ಅಳವಡಿಸುವುದು ಅತ್ಯಂತ ಅಪಾಯಕಾರಿಯಾಗಿದೆ. ಅದು ನಮಗೆ ಬೇಕಾಗಿಲ್ಲ.

ಈಗ, ಚುನಾವಣಾ ಕ್ಷೇತ್ರದ ಪ್ರಶ್ನೆಯನ್ನು ಪರಿಶೀಲಿಸಬೇಕು. ಅದು ಪ್ರತ್ಯೇಕವಾಗಿರಬೇಕೆ ಅಥವಾ ಜಂಟಿ ಆಗಿರಬೇಕೇ ಮತ್ತು ಇಂಥ ಇತರ ಪ್ರಶ್ನೆಗಳು ಪ್ರತ್ಯೇಕ ಸಮಿತಿಯ ಮೂಲಕ ಪರಿಗಣಿಸಬೇಕಾದವು ಆಗಿವೆ. ನಾನು ಇವುಗಳನ್ನು ಈಗಾಗಲೇ ಪ್ರಾಸ್ತಾವಿಕ ಭಾಷಣದಲ್ಲಿ ವಿವರಿಸಿದ್ದೇನೆ. ಆದ್ದರಿಂದ ಆ ಪ್ರಶ್ನೆಗಳನ್ನು ಪುನಃ ಪ್ರಸ್ತಾವಿಸುವುದಿಲ್ಲ.

ರಾಜ್ಯಪಾಲರಿಗೆ ಬಹಳಷ್ಟು ವ್ಯಾಪಕ ಅಧಿಕಾರಗಳಿವೆ ಎಂದು ತಿಳಿಸಲಾಗಿದೆ. ಪ್ರಸಕ್ತ ಸಂವಿಧಾನದಲ್ಲಿ ಇರುವಂಥವೇ ವ್ಯಾಪಕ ಅಧಿಕಾರಗಳನ್ನು ಈ ಸಂವಿಧಾನದಲ್ಲಿಯೂ ರಾಜ್ಯಪಾಲರು ಹೊಂದಿದ್ದಾರೆ. ವಿದೇಶಗಳಲ್ಲಿಯ ರಾಜ್ಯಪಾಲರಿಗೆ, ಪ್ರಸಕ್ತ ಸಂವಿಧಾನದ ಮೇರೆಗೆ ಜನರ ಆಶೋತ್ತರಗಳನ್ನು ಪ್ರತಿನಿಧಿಸುವುದಕ್ಕಾಗಿ ವಯಸ್ಕ ಮತದಾನದ ಮೂಲಕ ಚುನಾಯಿತ ರಾಜ್ಯಪಾಲರು ನಮ್ಮಲ್ಲಿ ಇರುವುದಿಲ್ಲ, ಅಷ್ಟೇ ಅಲ್ಲದೇ ವಿದೇಶಿ ರಾಜ್ಯಪಾಲರನ್ನು ಇತರ ಹಿತಾಸಕ್ತಿಗಳನ್ನು ರಕ್ಷಿಸುವುದಕ್ಕಾಗಿ ಆದೇಶ ಪತ್ರದ ಮೂಲಕ ಪದಾಂಕಿತಗೊಳಿಸಿ ನೇಮಕಮಾಡಲಾಗಿರುತ್ತದೆ. ಆ ಸಂವಿಧಾನದ ಅಡಿಯಲ್ಲಿ ಕಾರ್ಯನಿರ್ವಹಿಸುವಾಗ ಆಗಿರುವ ಅನುಭವವನ್ನು, ನಾವು ಇಲ್ಲಿ ಪ್ರಸ್ತಾವಿಸಿರುವ ಸಂವಿಧಾನದೊಡನೆ ಹೋಲಿಸುವಂತಿಲ್ಲ. ನಾವು ಈಗ ಪ್ರಸ್ತಾವಿಸಿರುವ ಈ ಸಂವಿಧಾನದ ನಿರ್ವಹಣೆಯಿಂದ ಆಗಿರುವ ಅನುಭವ ಹಿತಕರವಾದುದು ಹಾಗೂ ಸುಗಮವಾದುದು ಆಗಿರುತ್ತದೆಯೇ ಅಥವಾ ಇಲ್ಲವೇ ಎಂಬುದು, ನಾವು ಸಂವಿಧಾನವನ್ನು ಹೇಗೆ ರಚಿಸುತ್ತೇವೆ ಎಂಬುದನ್ನು ಅವಲಂಬಿಸುತ್ತದೆ. ತಮ್ಮ ಇಷ್ಟದಂತೆ ಕಾರ್ಯನಿರ್ವಹಿಸಲು ಅಪೇಕ್ಷಿಸುವ ಅಥವಾ ತಮ್ಮ ಇಚ್ಛೆಯಂತೆ ಕಾರ್ಯನಿರ್ವಹಿಸುವ ಜನರಿಂದ ಯಾವಾಗಲೂ ಸಂವಿಧಾನದ ಉಲ್ಲಂಘನೆಯಾಗುತ್ತದೆ. ಪ್ರಧಾನ ಮಂತ್ರಿಗಳನ್ನಾಗಲೀ ಅಥವಾ ಮಂತ್ರಿಯವರನ್ನಾಗಲೀ, ಸದನದ ಮತದ ಮೂಲಕ ತೆಗೆದುಹಾಕಲಾಗದಿದ್ದರೆ, ಬುಲೆಟ್‌ನಿಂದ ತೆಗೆದುಹಾಕಬಹುದಾದ ಸಂದರ್ಭ ನಮಗೆ ಬೇಕಾಗಿಲ್ಲ. ಆದ್ದರಿಂದ, ಪದದಿಂದ ತೆಗೆದುಹಾಕಲಾಗದಂಥ ವ್ಯವಸ್ಥೆ ಇರುವ ಕಾರ್ಯಾಂಗವು ಸುರಕ್ಷಿತವಾಗಿರುವುದು ಎಂದು ಹೇಳುವುದರಿಂದ ಯಾವುದೇ ಉಪಯೋಗ ಇಲ್ಲ. ತೆಗೆದು ಹಾಕಲಾಗದಂಥ ವ್ಯವಸ್ಥೆ ಇರುವ ಕಾರ್ಯಾಂಗಕ್ಕೆ ಇರಬೇಕಾದ ರೀತಿ, ಕಾರ್ಯನಿರ್ವಹಿಸಲು ಇರಬೇಕಾದ ನಿಜವಾದ ಒಳ್ಳೆಯ ಮನಸ್ಸು, ಹಾಗೂ ಕಾರ್ಯಸ್ಫೂರ್ತಿ ಇರುವ ಸಂವಿಧಾನವು ನಿಮ್ಮದಾಗಿದ್ದರೆ, ಅದು ಒಳ್ಳೆಯ ಸಂವಿಧಾನ.

ನಾವು ಇಲ್ಲಿ ಸಾಮೂಹಿಕ ಜವಾಬ್ದಾರಿಯನ್ನು, ಜಂಟಿ ಜವಾಬ್ದಾರಿಯನ್ನು ವಿವರಿಸಿದ್ದೇವೆ. ತಿದ್ದುಪಡಿಯನ್ನು ಮಂಡಿಸಿದವರು ಸಲಹೆ ಮಾಡಿದ ವಿಧಾನದ ಮೂಲಕ, ಮಂತ್ರಿಗಳ ಪದಕ್ಕಾಗಿ ನಡೆಸುವ ಯಾವುದೇ

ಚುನಾವಣೆ ಎಂದರೆ, ವೈಯಕ್ತಿಕ ಜವಾಬ್ದಾರಿ ಹಾಗೂ ಪ್ರತಿಯೊಬ್ಬ ಮಂತ್ರಿಯು ತನ್ನದೇ ಆದ ಮಾರ್ಗದಲ್ಲಿ ಮುಂದುವರಿಯುತ್ತಾರೆ ಎಂಬುದನ್ನು ಪರಾಮರ್ಶಿಸುವುದಾಗಿದೆ. ಪ್ರತಿಯೊಬ್ಬ ಮಂತ್ರಿಯೂ, ಐದು, ಏಳು ಅಥವಾ ಹತ್ತು ಮತಗಳನ್ನು ಗಳಿಸಲು ಮಾತ್ರ ಕಾರ್ಯ ನಿರ್ವಹಿಸಿದರೆ ಆಯಿತು, ಅವರು ಮತಗಳನ್ನು, ಅಪೇಕ್ಷಣೀಯವಲ್ಲದ ವಿಧಾನದ ಮೂಲಕ ಬಹುಶಃ ಪಡೆಯಬಹುದು. ಹೀಗಾದರೆ ಇಡೀ ವ್ಯವಸ್ಥೆಯೇ ಸಂಪೂರ್ಣವಾಗಿ ಭ್ರಷ್ಟವಾಗುತ್ತದೆ. ಆದ್ದರಿಂದ ಮಂಡಿಸಿರುವ ಸೂಚನೆಯನ್ನು ಅಂಗೀಕರಿಸತಕ್ಕದ್ದೆಂಬುದು ನನ್ನ ಉದ್ದೇಶ.

ಇತರ ತಿದ್ದುಪಡಿಗಳು, ಮುಖ್ಯ ತಿದ್ದುಪಡಿಗೆ ವಿರುದ್ಧವಾಗಿವೆ ಹಾಗೂ ಈಗಾಗಲೇ ಕೆಲವು ಭಾಷಣಕಾರರು ಅವುಗಳ ಬಗ್ಗೆ ವಿವರಿಸಿರುವುದರಿಂದ ನಾನು ಮತ್ತೆ ಚರ್ಚಿಸಲು ಇಚ್ಛಿಸುವುದಿಲ್ಲ. ಅವುಗಳನ್ನು ನಿರಾಕರಿಸತಕ್ಕದ್ದು ಮತ್ತು ನಾನು ಮಂಡಿಸಿರುವ ಹೇಳಿಕೆಯನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸನ್ಮಾನ್ಯ ಅಧ್ಯಕ್ಷರು** : ಅದನ್ನು ಮಂಡಿಸಲಾಗಿದೆ.

"ರಾಜ್ಯಪಾಲರ ಮಂತ್ರಿಗಳನ್ನು ಆಯ್ಕೆ ಮಾಡತಕ್ಕದ್ದು ಮತ್ತು ಅವರನ್ನು ಕರೆಯತಕ್ಕದ್ದು ಮತ್ತು ರಾಜ್ಯಪಾಲರ ಇಷ್ಟ ಪರ್ಯಂತ ಪದಧಾರಣ ಮಾಡತಕ್ಕದ್ದು."

ಇದಕ್ಕೆ ತಿದ್ದುಪಡಿಯೊಂದನ್ನು ಮಂಡಿಸಲಾಗಿದ್ದು, ೧೨ನೇ ಖಂಡಕ್ಕೆ ಬದಲಾಗಿ ಈ ಮುಂದಿನ ಖಂಡವನ್ನು ಪ್ರತಿಯೋಜಿಸತಕ್ಕದ್ದು.

"ರಾಜ್ಯಪಾಲರ ಮಂತ್ರಿಗಳನ್ನು, ಪ್ರಾಂತೀಯ ವಿಧಾನಸಭಾ ಸದಸ್ಯರು, ವರ್ಗಾಯಿಸಲಾಗದ ಏಕಮತದ ಮೂಲಕ ದಾಮಾಷಾ ಪ್ರಾತಿನಿಧ್ಯ ವ್ಯವಸ್ಥೆಯ ಮೂಲಕ ಆಯ್ಕೆ ಮಾಡತಕ್ಕದ್ದು."

ಈ ತಿದ್ದುಪಡಿಗೆ ಎರಡು ತಿದ್ದುಪಡಿಗಳಿವೆ, ಮೊದಲನೇ ತಿದ್ದುಪಡಿಯನ್ನು ೧೨ನೇ ಖಂಡಕ್ಕೆ ಮಾಡಿದ ತಿದ್ದುಪಡಿಯ ಕೊನೆಯಲ್ಲಿ ಸೇರಿಸುವುದಾಗಿದೆ, ಇದನ್ನು ಶ್ರೀ ಅಜೀಜ್ ಅಹ್ಮದ್ ಖಾನ್ (ಬಾಬು ಸಂಖ್ಯೆ ೫೭) ಅವರು ಮಂಡಿಸಿದ್ದಾರೆ, ಅದು ಹೀಗಿದೆ:

ಮತ್ತು ಪ್ರಾಂತೀಯ ವಿಧಾನಮಂಡಲಕ್ಕೆ ಹೊಣೆಗಾರರಾಗಿರತಕ್ಕದ್ದು.

ಎರಡನೇ ತಿದ್ದುಪಡಿಯನ್ನು, ೧೨ನೇ ಖಂಡಕ್ಕೆ ಶ್ರೀ ಅಜೀಜ್ ಅಹ್ಮದ್ ಖಾನ್ ಅವರು ಮಂಡಿಸಿದ ತಿದ್ದುಪಡಿಯ ಕೊನೆಯಲ್ಲಿ ಸೇರಿಸಲಾಗಿದೆ.

"ಮತ್ತು ವಿಧಾನಸಭೆಯ ನಿಗದಿತ ಅವಧಿಯವರೆಗೆ ಪದಧಾರಣ ಮಾಡತಕ್ಕದ್ದು."

ನಾನು ಅನುಸರಿಸಲು ಉದ್ದೇಶಿಸಿದ ಕಾರ್ಯವಿಧಾನ ಏನೆಂದರೆ, ತಿದ್ದುಪಡಿಗಾಗಿ ಮಂಡಿಸಿದ ತಿದ್ದುಪಡಿಗಳನ್ನು ಮತಕ್ಕೆ ಹಾಕುವುದು. ಈ ಎರಡು ತಿದ್ದುಪಡಿಗಳ ಪೈಕಿ ಯಾವುದೇ ತಿದ್ದುಪಡಿಯನ್ನು ಅಂಗೀಕರಿಸಿದ್ದಾದರೆ, ಅದು ಮುಖ್ಯ ತಿದ್ದುಪಡಿಯಾಗುತ್ತದೆ. ಆಮೇಲೆ, ತಿದ್ದುಪಡಿಯಾದ ತಿದ್ದುಪಡಿಯನ್ನು ನಾನು ಮತಕ್ಕೆ ಹಾಕುತ್ತೇನೆ ಹಾಗೂ ಅದನ್ನು ಅಂಗೀಕರಿಸಿದರೆ, ಅದು ಖಂಡದ ಭಾಗವಾಗುತ್ತದೆ. ಆಮೇಲೆ, ತಿದ್ದುಪಡಿಯಾದ ಖಂಡವನ್ನು ಸದನದ ಮುಂದಿಡುತ್ತೇನೆ.

ನಾನು ಈಗ ತಿದ್ದುಪಡಿ ಮಾಡಿದ ತಿದ್ದುಪಡಿಯನ್ನು ಮತಕ್ಕೆ ಹಾಕುತ್ತಿದ್ದೇನೆ. ಎಂದರೆ, ಈ ಮುಂದಿನ ಪದಗಳನ್ನು ತಿದ್ದುಪಡಿಯ ಕೊನೆಯಲ್ಲಿ ಸೇರಿಸತಕ್ಕದ್ದು:

"ಮತ್ತು ಪ್ರಾಂತೀಯ ವಿಧಾನಮಂಡಲಕ್ಕೆ ಹೊಣೆಗಾರರಾಗಿರತಕ್ಕದ್ದು."

– ತಿದ್ದುಪಡಿಯನ್ನು ತಳ್ಳಿ ಹಾಕಲಾಯಿತು.

**ಮಾನ್ಯ ಅಧ್ಯಕ್ಷರು** : ತಿದ್ದುಪಡಿಗೆ ಮಾಡಿದ ಎರಡನೇ ತಿದ್ದುಪಡಿಯನ್ನು ಈಗ ಮತಕ್ಕೆ ಹಾಕುತ್ತಿದ್ದೇನೆ, ಎಂದರೆ ತಿದ್ದುಪಡಿಯ ಕೊನೆಯಲ್ಲಿ ಈ ಮುಂದಿನ ಪದಗಳನ್ನು ಸೇರಿಸತಕ್ಕದು:

"ಮತ್ತು ವಿಧಾನಸಭೆಯ ನಿಗದಿತ ಅವಧಿಯವರೆಗೆ ಪದಧಾರಣ ಮಾಡತಕ್ಕದ್ದು."

–ತಿದ್ದುಪಡಿಯನ್ನು ತಳ್ಳಿಹಾಕಲಾಯಿತು.

**ಮಾನ್ಯ ಅಧ್ಯಕ್ಷರು :** ಶ್ರೀ ಅಜೀಜ್ ಅಹ್ಮದ್ ಖಾನ್ ಅವರು ಮಂಡಿಸಿದ ಮೂಲ ತಿದ್ದುಪಡಿಯನ್ನು ನಾನು ಈಗ ಮತಕ್ಕೆ ಹಾಕುತ್ತಿದ್ದೇನೆ.

ಪ್ರಸ್ತಾವವನ್ನು ತಳ್ಳಿಹಾಕಲಾಯಿತು.

**ಮಾನ್ಯ ಅಧ್ಯಕ್ಷರು :** ನಾನು ಈಗ ಮೂಲಖಂಡವನ್ನು ಮತಕ್ಕೆ ಹಾಕುತ್ತಿದ್ದೇನೆ.

ಪ್ರಸ್ತಾವವನ್ನು ಅಂಗೀಕರಿಸಲಾಯಿತು.

**ಮಾನ್ಯ ಅಧ್ಯಕ್ಷರು :** ನಾವು ಈಗ ೧೩ನೇ ಖಂಡವನ್ನು ಪರಿಶೀಲಿಸೋಣ.

## ಖಂಡ–೧೩

**ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಜೆ. ಪಟೇಲ್ :** ನಾನು ೧೩ನೇ ಖಂಡವನ್ನು ಮಂಡಿಸುತ್ತಿದ್ದೇನೆ.

"೧೩. (೧) ಯಾರೇ ಮಂತ್ರಿಯು ನಿರಂತರವಾಗಿ ಆರು ತಿಂಗಳ ಅವಧಿಯವರೆಗೆ ಪ್ರಾಂತೀಯ ವಿಧಾನಮಂಡಲದ ಸದಸ್ಯನಾಗಿರದಿದ್ದರೆ, ಆ ಅವಧಿಯು ಮುಕ್ತಾಯವಾದ ಮೇಲೆ ಅವನು ಮಂತ್ರಿಯಾಗಿರುವುದು ನಿಂತುಹೋಗತಕ್ಕದ್ದು.

(೨) ಮಂತ್ರಿಗಳ ಸಂಬಳಗಳು, ಕಾಲಕಾಲಕ್ಕೆ ಅಧಿನಿಯಮದ ಮೂಲಕ ಪ್ರಾಂತೀಯ ವಿಧಾನಮಂಡಲವು ನಿರ್ಧರಿಸಬಹುದಾದಂತೆ ಇರತಕ್ಕದ್ದು ಮತ್ತು ಪ್ರಾಂತೀಯ ವಿಧಾನಮಂಡಲವು ಹಾಗೆ ನಿರ್ಧರಿಸುವವರೆಗೆ ರಾಜ್ಯಪಾಲರು ನಿರ್ಧರಿಸತಕ್ಕದ್ದು:

ಪರಂತು, ಮಂತ್ರಿಗಳ ಸಂಬಳಗಳು, ಆತನ ಪದಾವಧಿಯಲ್ಲಿ ವ್ಯತ್ಯಾಸವಾಗತಕ್ಕದ್ದಲ್ಲ."

ಈ ಪ್ರಸ್ತಾವಕ್ಕೆ ವಿರೋಧವಿಲ್ಲವೆಂದು ಹಾಗೂ ಇದರ ಬಗ್ಗೆ ಚರ್ಚೆ ಇರಲಿಕ್ಕಿಲ್ಲವೆಂದು ಭಾವಿಸಿದ್ದೇನೆ. ನಾನು ಈ ಪ್ರಸ್ತಾವವನ್ನು ಸದನದ ಒಪ್ಪಿಗೆಗಾಗಿ ಮಂಡಿಸಿದ್ದೇನೆ.

**ಮಾನ್ಯ ಅಧ್ಯಕ್ಷರು :** ಅನೇಕ ತಿದ್ದುಪಡಿಗಳ ಬಗ್ಗೆ ಸೂಚನೆಗಳು ನನಗೆ ಬಂದಿವೆ. ತಮ್ಮ ತಮ್ಮ ತಿದ್ದುಪಡಿಗಳಿಗೆ ಸೂಚನೆಗಳನ್ನು ಮಂಡಿಸಿರುವವರನ್ನು ಅವುಗಳನ್ನು ಮಂಡಿಸಲು ಕರೆಯುತ್ತೇನೆ.

(ಶ್ರೀಯುತರಾದ, ಆರ್.ಕೆ. ಸಿಧ್ವಾ, ವಿ.ಸಿ. ಕೇಶವರಾವ್ ಮತ್ತು ಎಚ್.ಸಿ. ಪಾಟಸ್ಕರ್, ಇವರು ತಮ್ಮ ತಿದ್ದುಪಡಿ ಸಂಖ್ಯೆ ೫೯, ೬೦ ಮತ್ತು ೬೧ನ್ನು ಮಂಡಿಸಲಿಲ್ಲ)

**ಶ್ರೀ ಆರ್.ಕೆ. ಸಿಧ್ವಾ** (ಸಿ.ಪಿ. ಮತ್ತು ಬೇರಾರ್ : ಸಾಮಾನ್ಯ) : ನಾನು ಮಂಡಿಸಿದ ತಿದ್ದುಪಡಿ ಸಂಖ್ಯೆ ೬೨ರಲ್ಲಿ, ಮಂತ್ರಿಯೊಬ್ಬರ ಸಂಬಳವು ರಾಜ್ಯಪಾಲರ ಸಂಬಳಕ್ಕಿಂತ ಹೆಚ್ಚಿಗೆ ಅಥವಾ ರಾಜ್ಯಪಾಲರ ಸಂಬಳದಷ್ಟೇ ಇರತಕ್ಕದ್ದಲ್ಲ ಎಂಬುದನ್ನು ತಿಳಿಸಲಾಗಿದೆ. ರಾಜ್ಯಪಾಲರನ್ನು ವಯಸ್ಕ ಮತದಾನದ ಮೂಲಕ ಆಯ್ಕೆ ಮಾಡತಕ್ಕದ್ದೆಂಬುದನ್ನು ನಾವು ಅಂಗೀಕರಿಸಿದ್ದೇವೆ ಮತ್ತು ಅವರಿಗೆ ಇನ್ನೂ ಕೆಲವು ಅಧಿಕಾರಗಳನ್ನು ನೀಡಬೇಕೆಂಬ ನಿರ್ಣಯವನ್ನು ನಿನ್ನೆ ಅಂಗೀಕರಿಸಿದ್ದೆವು. ಅದು ಸೂಕ್ತವಾದುದೂ ಆಗಿದೆ. ಆದ್ದರಿಂದ, ಅವರು ಪ್ರಾಂತ್ಯದ ಪ್ರಥಮ ಪ್ರಜೆಯಾಗಿರುತ್ತಾರೆ ಮತ್ತು ಅವರ ಘನತೆ ಖಂಡಿತವಾಗಿ ಉನ್ನತವಾದುದೆಂದು ಪರಿಗಣಿಸಬೇಕು. ಆದ್ದರಿಂದ, ರಾಜ್ಯಪಾಲರ ಸಂಬಳಕ್ಕಿಂತ ಮಂತ್ರಿಗಳ ಸಂಬಳವು ಕಡಿಮೆ ಇರಬೇಕೆಂಬುದು ಅಪೇಕ್ಷಣೀಯ. ಇದು ಅತ್ಯಂತ ಆರೋಗ್ಯಕರ ತಿದ್ದುಪಡಿ ಎಂದು ನಾನು ಹೇಳಿದರೂ, ಇದನ್ನು ಸಂವಿಧಾನದಲ್ಲಿ ಸೇರಿಸಲಾಗುವುದಿಲ್ಲ. ಆದ್ದರಿಂದ ಮಾನ್ಯರೇ ನಾನು ಇದನ್ನು ಮಂಡಿಸುತ್ತಿಲ್ಲ.

(ಶ್ರೀ ಬಿಶ್ವನಾಥ್ ದಾಸ್ ಅವರು ತಿದ್ದುಪಡಿಯನ್ನು ಮಂಡಿಸಲಿಲ್ಲ.)

**ಮಾನ್ಯ ಅಧ್ಯಕ್ಷರು :** ಈ ಎಲ್ಲ ತಿದ್ದುಪಡಿಗಳ ಬಗ್ಗೆ ಸೂಚನೆಗಳು ನನಗೆ ಬಂದಿವೆ. ಮೂಲ ಪ್ರಸ್ತಾವವು ಈಗ ಚರ್ಚೆಗೆ ಮುಕ್ತವಾಗಿದೆ. ಅದರ ಬಗ್ಗೆ ಯಾರಾದರೂ ಮಾತನಾಡಬಯಸಿದರೆ, ಮಾತನಾಡಬಹುದು.

ಯಾರೊಬ್ಬರೂ ಮಾತನಾಡಲು ಇಚ್ಛಿಸುತ್ತಿಲ್ಲ. ನಾನು ಇದನ್ನು ಮತಕ್ಕೆ ಹಾಕಿದ್ದೇನೆ.

ಖಂಡ–೧೩ನ್ನು ಅಂಗೀಕರಿಸಲಾಗಿದೆ.

**ಮಾನ್ಯ ಅಧ್ಯಕ್ಷರು :** ನಾವು ಈಗ ೧೪ನೇ ಖಂಡದ ಬಗ್ಗೆ ಪರಿಶೀಲಿಸೋಣ.

**ಖಂಡ–೧೪**

**ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಜೆ. ಪಟೇಲ್ :** ಮಾನ್ಯರೆ, ನಾನು ಮುಂದಿನ ಪ್ರಸ್ತಾವವನ್ನು ಮಂಡಿಸುತ್ತಿದ್ದೇನೆ:

"ರಾಜ್ಯಪಾಲರು ತಮ್ಮ ಮಂತ್ರಿಗಳ ನೇಮಕದಲ್ಲಿ ಮತ್ತು ಅವರೊಂದಿಗೆ ಸಂಬಂಧ ಇವುಗಳ ಬಗ್ಗೆ– ಅನುಸೂಚಿಯಲ್ಲಿ ವಿವರಿಸಿದಂತೆ ಜವಾಬ್ದಾರಿಯುತ ಸರ್ಕಾರದ ನೀತಿ ನಿಯಮಗಳಿಂದ ಮಾರ್ಗದರ್ಶನ ಪಡೆಯತಕ್ಕದ್ದು. ಆದರೆ, ರಾಜ್ಯಪಾಲರು ಮಾಡಿದ ಯಾವುದೇ ಕಾರ್ಯದ ಸಿಂಧುತ್ವವನ್ನು, ಈ ನೀತಿ ನಿಯಮಗಳಿಗೆ ಅನುಸಾರವಾಗಿ ಅಲ್ಲದೇ ಮಾಡಲಾಗಿದೆ ಎಂಬ ಆಧಾರದ ಮೇಲೆ ಪ್ರಶ್ನಿಸತಕ್ಕದ್ದಲ್ಲ."

ಜವಾಬ್ದಾರಿಯುತ ಸರ್ಕಾರದ ರೂಢಿಗಳಿಗೆ ಅನುಸಾರವಾಗಿ ಈ ಅನುಸೂಚಿಯನ್ನು ಸಿದ್ಧಪಡಿಸಿ ಸೇರಿಸಲಾಗುವುದು. ಈ ವಿಷಯದ ಬಗ್ಗೆ ಕೂಡ ಯಾವುದೇ ವಿರೋಧ ಇಲ್ಲ. ಆದ್ದರಿಂದ ನಾನು ಈ ಪ್ರಸ್ತಾವವನ್ನು ಅಂಗೀಕರಿಸುವುದಕ್ಕಾಗಿ ಸದನದ ಮುಂದೆ ಮಂಡಿಸಿದ್ದೇನೆ.

**ಮಾನ್ಯ ಅಧ್ಯಕ್ಷರು :** ಈ ಖಂಡಕ್ಕೆ ತಿದ್ದುಪಡಿಯ ಯಾವುದೇ ಸೂಚನೆ ನನಗೆ ಬಂದಿಲ್ಲ. ಯಾರೇ ಸದಸ್ಯರು ಮಾತನಾಡುವುದಿದ್ದರೆ, ಮಾತನಾಡಬಹುದು, ಆಮೇಲೆ ಮತಕ್ಕೆ ಹಾಕಲಾಗುತ್ತದೆ.

**ಬಿ. ಪಾಕರ್ ಸಾಹೇಬ್ ಬಹಾದ್ದೂರ್ :** ಕ್ರಿಯಾಲೋಪ ಕುರಿತು ಹೇಳುವುದಾದರೆ, ಈ ಖಂಡವನ್ನು ಅಂಗೀಕರಿಸುವ ಮೊದಲು, ಸದನದ ಮುಂದೆ ಅನುಸೂಚಿಯನ್ನು ಮಂಡಿಸುವ ಅಗತ್ಯವಿಲ್ಲವೇ?

**ಮಾನ್ಯ ಅಧ್ಯಕ್ಷರು :** ಪ್ರಾರೂಪಣಾ ಸಮಿತಿಯು ಅನುಸೂಚಿಯನ್ನು ಸಿದ್ಧಪಡಿಸಿದ ಮೇಲೆ ಅದನ್ನು ಸದನದ ಮುಂದಿಡಲಾಗುವುದು. ಈಗ ತತ್ತ್ವವನ್ನು ಮಾತ್ರ ಇಲ್ಲಿ ಮಂಡಿಸಲಾಗಿದೆ.

**ಶ್ರೀ ಬಿ. ಪಾಕರ್ ಸಾಹೇಬ್ ಬಹಾದ್ದೂರ್ :** ಈ ಖಂಡವು ಅನುಸೂಚಿಗೆ ಸಂಬಂಧಿಸಿರುವುದರಿಂದ, ಅನುಸೂಚಿಯು ಇಲ್ಲದಿರುವುದರಿಂದ, ನಾವು ನೋಡದೇ ಇರುವ ಅನುಸೂಚಿಗೆ ಸಂಬಂಧಿಸಿದ ಖಂಡವನ್ನು ಅಂಗೀಕರಿಸುವ ಸ್ಥಿತಿಯಲ್ಲಿದ್ದೇವೆಯೇ?

**ಶ್ರೀ ಎಮ್. ಅನಂತಶಯನಮ್ ಅಯ್ಯಂಗಾರ್ :** ಮಾನ್ಯರೆ, ನಾವು ಈ ಖಂಡವನ್ನು ಅಂಗೀಕರಿಸುವಾಗ, ನಾವು ಸಂವಿಧಾನದ ಮೂಲಕ ವಿನಿಯಮಿಸಬಹುದಾದ ಅನೇಕ ವಿಷಯಗಳ ತತ್ತ್ವಗಳನ್ನು ಮಾತ್ರ ಅನುಮೋದಿಸಿರುತ್ತೇವೆ. ಅವೆಲ್ಲವನ್ನು ಸಭೆಯ ಮುಂದೆ ಮಂಡಿಸಲಾಗಿದೆ. ಅನುಸೂಚಿಯು ಸಂಬಂಧ ಪಡುವಷ್ಟರ ಮಟ್ಟಿಗೆ ಹೇಳುವುದಾದರೆ, ಹಾಗೆ ಅಂಗೀಕರಿಸಲು ಯಾವುದೇ ರೀತಿಯ ಒಡಂಬಡಿಕೆ ಇಲ್ಲವೆಂದು ಕೆಲವು ಸದಸ್ಯರು ಆಕ್ಷೇಪಣೆ ಮಾಡಲು ಅವಕಾಶ ಇದೆ. ಆದರೆ, ಆವಶ್ಯಕತೆಗಳಿಗೆ ಅನುಸಾರವಾಗಿ ಮತ್ತು ಅನುಭವದ ಹಿನ್ನೆಲೆಯಲ್ಲಿ, ರೂಢಿಗಳು ಕಾಲಕಾಲಕ್ಕೆ ಬದಲಾಗುತ್ತವೆ ಎಂದರೆ ಇಲ್ಲಿ ತಪ್ಪಾಗುತ್ತದೆ; ಅನ್ಯಥಾ, ಇದು ಕಷ್ಟಕರವಾದ ಹಾಗೂ ಸುದೀರ್ಘವಾದ ಪ್ರಕ್ರಿಯೆ ಆಗುತ್ತದೆ ಎಂದು ನಾವು ಹೇಳಬಹುದು ಮತ್ತು ಸಮಗ್ರ ಸಂವಿಧಾನವನ್ನೇ ಮಾರ್ಪಡಿಸಬಹುದು. ಸಂವಿಧಾನವನ್ನು ಮಾರ್ಪಾಡು ಮಾಡದೇ ಅನುಸೂಚಿಯನ್ನು ಮಾರ್ಪಾಡು ಮಾಡಬಹುದು. ಒಡಂಬಡಿಕೆಯು ಸಂಬಂಧಪಡುವಷ್ಟರ ಮಟ್ಟಿಗೆ ಹೇಳುವುದಾದರೆ, ಅನುಸೂಚಿಯನ್ನು ಖಂಡಿತವಾಗಿಯೂ ಸಭೆಯ ಮುಂದಿಡಲಾಗುವುದು ಹಾಗೂ ಅದನ್ನು ತಳ್ಳಿಹಾಕುವುದಕ್ಕೂ ಅಥವಾ ಅದಕ್ಕೆ ಸೇರಿಸುವುದಕ್ಕೂ ಸದಸ್ಯರಿಗೆ ಅವಕಾಶ ಇದ್ದೇ ಇದೆ. ಈ ಹಂತದಲ್ಲಿ, ಅನುಭವದ ಹಿನ್ನೆಲೆಯಲ್ಲಿ ಮಾರ್ಪಾಡು ಮಾಡಬಹುದಾದ ಅನುಸೂಚಿಯ ನಮೂನೆಯಲ್ಲಿ ಕೆಲವು ಒಡಂಬಡಿಕೆಗಳನ್ನು ಮಂಡಿಸಿರುವುದು ಸದನದ ತಾತ್ತ್ವಿಕ ಒಪ್ಪಿಗೆ ಪಡೆಯುವ ಉದ್ದೇಶಕ್ಕಾಗಿ ಎಂದು ಕೇಳಲಾಗಿದೆ. ಸಭೆಯ ಗಮನಕ್ಕೆ ತರದೇ ಅನುಸೂಚಿಯನ್ನು ಅಂಗೀಕರಿಸುವುದಿಲ್ಲ.

**ಶ್ರೀ ಹಾಜಿ ಅಬ್ದುಲ್ ಸತ್ತಾರ್ ಹಾಜಿ ಇಷಾಖ್ ಸೇಠ್** (ಮದ್ರಾಸ್ : ಮುಸ್ಲಿಮ್): ನನ್ನ ಸ್ನೇಹಿತರು ಎತ್ತಿದ ವಾದವನ್ನು ಒಪ್ಪಿಕೊಳ್ಳಬಹುದೆಂದು ನಾನು ಹೇಳಲಾರೆ, ಈ ಖಂಡವನ್ನು, ಅದು ಈಗ ಇರುವಂತೆಯೇ ಒಪ್ಪಿಕೊಂಡರೆ, ನಾವು ಅನುಸೂಚಿಯನ್ನು ಅಂಗೀಕರಿಸಿದಂತೆಯೇ. ಅದರಲ್ಲಿ ಅನುಸೂಚಿಯನ್ನು ಉಲ್ಲೇಖಿಸಲಾಗಿದೆ. ಅನುಸೂಚಿಯನ್ನು ನಮೂದಿಸಿ ಅದನ್ನು ಅದಕ್ಕೆ ಲಗತ್ತಿಸುವಂತೆ ಯಾರಾದರೂ ಹೇಳಿದರೆ, ಅನುಸೂಚಿಯನ್ನು ಅಂಗೀಕರಿಸಿದಂತೆಯೇ ಆಗುತ್ತದೆ. ಅದನ್ನು ಇಲ್ಲಿಯೂ ತರಲಾಗುತ್ತಿದೆ ಎಂದು ಅವರು ಹೇಳಿರುವುದು ಸರಿಯಾಗಿದೆ. ಒಂದು ಅನುಸೂಚಿಯನ್ನು ಬರೆದು ಅದನ್ನು ಲಗತ್ತಿಸಿರುವುದನ್ನು ಯಾರೂ ಅಡ್ಡಿ ಪಡಿಸಲಾರರು. ಆದ್ದರಿಂದ, ಅನುಸೂಚಿಯನ್ನು ನಮೂದಿಸುವ ಅಗತ್ಯ ಇಲ್ಲ ಎಂದು ಸೂಚಿಸುತ್ತೇನೆ. ಆ ವಾಕ್ಯ ಈ ರೀತಿಯಾಗಿದೆ, ಎಂದರೆ:

"ರಾಜ್ಯಪಾಲರು, ತಮ್ಮ ಮಂತ್ರಿಗಳ ನೇಮಕ ಮತ್ತು ಅವರೊಂದಿಗಿನ ಸಂಬಂಧ ಈ ವಿಷಯಗಳ ಬಗ್ಗೆ ಜವಾಬ್ದಾರಿಯುತ ಸರ್ಕಾರದ ಒಡಂಬಡಿಕೆಗಳ ಮೂಲಕ ಸಾಮಾನ್ಯವಾಗಿ ಮಾರ್ಗದರ್ಶನ ಪಡೆಯತಕ್ಕದ್ದು."

ಅಷ್ಟಕ್ಕೆ ವಾಕ್ಯವನ್ನು ನಿಲ್ಲಿಸಿ, "ಅನುಸೂಚಿಯಲ್ಲಿ ವಿವರಿಸಿದಂತೆ" ಎಂಬುದನ್ನು ನಮೂದಿಸುವುದು ಬೇಡ. ಆಮೇಲೆ ಈ ಮುಂದಿನ ವಿಷಯವನ್ನು ನಮೂದಿಸಿ.

"ಆದರೆ, ರಾಜ್ಯಪಾಲರು ಮಾಡಿದ ಪ್ರತಿಯೊಂದು ಕಾರ್ಯದ ಸಿಂಧುತ್ವವನ್ನು, ಈ ಒಡಂಬಡಿಕೆಗಳಿಗೆ ಅನುಸಾರವಾಗಿ ಅಲ್ಲದೇ ಅಂಥ ಕಾರ್ಯವನ್ನು ಮಾಡಲಾಗಿದೆ ಎಂದು ಪ್ರಶ್ನಿಸತಕ್ಕದ್ದಲ್ಲ."

ಅನುಸೂಚಿಯನ್ನು ನಮೂದಿಸುವ ಅಗತ್ಯವೇ ಇಲ್ಲ. ಅದನ್ನು ಸಿದ್ಧಪಡಿಸಿದ ಮೇಲೆ ಸದನದ ಮುಂದೆ ಮಂಡಿಸುವುದರಿಂದ ಅದು ಈ ತೊಂದರೆಯನ್ನು ನಿವಾರಿಸುತ್ತದೆ. ಹೀಗಾಗಿ ನಾನು ಇದನ್ನು ಒಪ್ಪಿಕೊಳ್ಳಬೇಕೆಂದು ತಿಳಿಸುತ್ತೇನೆ.

**ಶ್ರೀ ಎಮ್.ಎಸ್. ಅನೆ** (ದಕ್ಷಿಣ ರಾಜ್ಯಗಳು) : ಸನ್ಮಾನ್ಯ ಅಧ್ಯಕ್ಷರೆ, ನಮ್ಮ ಮುಂದಿರುವ ಪ್ರಸ್ತಾವವನ್ನು, ಅದು ಈಗ ಇರುವಂತೆ ಒಪ್ಪಿಕೊಳ್ಳುವುದಕ್ಕೆ ಸ್ವಲ್ಪ ಮಟ್ಟಿಗೆ ತೊಂದರೆ ಇದೆ. ಯಾವುದೇ ಪ್ರಸ್ತಾವವನ್ನು ಸದನದ ಮುಂದೆ ಪರಿಗಣನೆಗಾಗಿ ಮಂಡಿಸಿದಾಗ, ಅದು ಸ್ವಯಂ ಪೂರ್ಣವಾಗಿರಬೇಕು ಹಾಗೂ ಸ್ವಯಂ ವಿವರಣಾತ್ಮಕವಾಗಿರಬೇಕೆಂಬುದು ಎಲ್ಲರೂ ಒಪ್ಪಿಕೊಂಡಿರುವ ನಿಯಮ. ಅದು ಏನೆಂಬುದನ್ನು ಅದು ವಿವರಿಸುವಂತಿರಬೇಕು ಮತ್ತು ಎಲ್ಲಿಯೋ ಇರುವುದನ್ನು, ಹೇಗೋ ತಿಳಿದುಕೊಳ್ಳುವ ಆವಶ್ಯಕತೆ ಇರಬಾರದು. ಏನು ಇರಬೇಕಾಗಿದೆ ಎಂದರೆ, ಕೆಲವು ರೀತಿ ನಿಯಮಗಳನ್ನು ಪಾಲಿಸಬೇಕೆಂಬ ತತ್ತ್ವಕ್ಕೆ ಮಾನ್ಯತೆ ನೀಡಬೇಕೆಂದು, ಆದರೆ ಆ ಪ್ರಸ್ತಾವವನ್ನು ಸದನದ ಮುಂದೆ ಮಂಡಿಸಲಾಗುತ್ತಿಲ್ಲವೆಂದು ಮತ್ತು ಮಂತ್ರಿಗಳ ಮತ್ತು ರಾಜ್ಯಪಾಲರ ಮುಂತಾದವರ ನಡುವಿನ ಸಂಬಂಧ ಇವುಗಳಿಗೆ ಸಂಬಂಧಿಸಿದಂತೆ ಪಾಲಿಸಬೇಕಾದ ಕೆಲವು ರೀತಿ ನಿಯಮಗಳಿಗೆ ಒಪ್ಪಿಗೆ ನೀಡಬೇಕೆಂದು ನಾನು ಹೇಳುತ್ತೇನೆ. ಆಗ "ಕೆಲವು ವಿಷಯಗಳು ಎಲ್ಲವನ್ನೂ ಅಸ್ಪಷ್ಟವಾಗುವಂತೆ ಮಾಡುತ್ತವೆ ಮತ್ತು ಅಸ್ಪಷ್ಟ ಪ್ರಸ್ತಾವಗಳನ್ನು ಸದನದ ಮುಂದೆ ಮಂಡಿಸುವಂತಿಲ್ಲ" ಎಂದು ಹೇಳಬೇಕಾಗುತ್ತದೆ. ಇದೇ ನಮಗಿರುವ ತೊಂದರೆ. ಆದ್ದರಿಂದ ಈ ಅನುಸೂಚಿಯನ್ನು ಸಿದ್ಧ ಪಡಿಸಿದ ಮೇಲೆ ಅದನ್ನು ಇದಕ್ಕೆ ಲಗತ್ತಿಸಿ, ಆ ತರುವಾಯ ಆ ಪ್ರಸ್ತಾವವನ್ನು ಸದನದ ಮುಂದಿಟ್ಟು ಅಂಗೀಕಾರ ಪಡೆಯುವುದೇ ಅತ್ಯುತ್ತಮ ಮಾರ್ಗ ಹಾಗೂ ಹಾಗೆ ಮಾಡುವುದಕ್ಕೆ ಯಾವುದೇ ತೊಂದರೆಯೂ ಇರಲಾರದು. ಆಗ, ಅದು ಸ್ವಯಂ ಪೂರ್ಣವಾಗಿರುತ್ತದೆ ಹಾಗೂ ಈ ಸದನವು ಆ ಅನುಸೂಚಿಯನ್ನು ಓದಿದ ತರುವಾಯ ತನ್ನ ಒಪ್ಪಿಗೆ ಕೊಡಲು ತೊಂದರೆಯಾಗುತ್ತದೆ ಎಂದು ಯಾರೂ ಹೇಳುವುದಿಲ್ಲ ಎಂದು ನಾನು ತಿಳಿಸಿದ್ದೇನೆ. ಆದರೆ, ಅದು ಈಗ ಇರುವಂತೆ ಮುಂದಿಟ್ಟರೆ "ಖಾಲಿ ಚೆಕ್" ಗೆ ಸಹಿ ಮಾಡಲು ಹೇಳಿದಂತಾಗುತ್ತದೆ. ಅನುಸೂಚಿಯಲ್ಲಿ ಏನಿದೆ ಎಂಬುದು ನಮಗೆ ಗೊತ್ತಿಲ್ಲ. ಪ್ರಸಕ್ತ ಸೂಚನಾದೇಶಗಳು ಅದರಲ್ಲಿ ಇರುತ್ತವೆ ಎಂದು ಹೇಳಲಾಗಿದೆ.

ಅಲ್ಲಿರುವ ಸಮಿತಿಯು, ಪ್ರಸಕ್ತ ಸೂಚನಾದೇಶದಲ್ಲಿರುವ ಎಲ್ಲ ಷರತ್ತುಗಳನ್ನು ಪರಿಗಣಿಸುವುದೇ ಎಂಬುದು ನನಗೆ ಗೊತ್ತಿಲ್ಲ. ಅದನ್ನು ಇನ್ನೂ ಪರಿಶೀಲಿಸಬೇಕಾಗಿದೆ. ಈ ವರದಿಯ ಕರಡನ್ನು ಸಿದ್ಧ ಪಡಿಸುವುದಕ್ಕೆ ಸಮಿತಿಯನ್ನು ನೇಮಕ ಮಾಡಲಾಗಿದೆ ಮತ್ತು ಸಮಿತಿಯು ಸೂಚನಾದೇಶಗಳನ್ನು ಪರಿಗಣಿಸಿದೆ ಎಂದು ಭಾವಿಸುತ್ತೇನೆ. ಅವು, ಅದಕ್ಕೆ ಮನವರಿಕೆ ಆಗಿದ್ದರೆ, ಅದು ಅದನ್ನು ಅನುಸೂಚಿಯಾಗಿ ಸೇರಿಸಿರುತ್ತಿತ್ತು. ವಾಸ್ತವಿಕವಾಗಿ ಹೇಳುವುದಾದರೆ ಅದನ್ನು ಇನ್ನೂ ಸಿದ್ಧ ಪಡಿಸಿಲ್ಲ ಎಂದರೆ ಅದನ್ನು ಇಡಿಯಾಗಿ ಸೇರಿಸುವಾಗ ಅದು ಸೂಕ್ತವಾಗಿದೆ ಎಂದು ಸಮಿತಿ ಭಾವಿಸಿರಲಿಲ್ಲ ಎಂಬುದಾದರೆ, ಸೂಚನಾದೇಶಗಳ ಯಾವ ಭಾಗವನ್ನು ಸೇರಿಸಲಾಗುವುದೆಂಬುದು ನಮಗೆ ಗೊತ್ತಿಲ್ಲ.

ಇಂಥ ಸನ್ನಿವೇಶಗಳಲ್ಲಿ, ಪ್ರಸ್ತುತ ಸೂಚನಾದೇಶ ಲಿಖಿತ ಪತ್ರಗಳಲ್ಲಿ ಒಳಗೊಂಡಿರಬಹುದೆಂದು ಭಾವಿಸಿರುವ ಈ ಒಡಂಬಡಿಕೆಗಳಿಗೆ ಸದನದ ಒಪ್ಪಿಗೆ ಪಡೆದುಕೊಳ್ಳುವುದಕ್ಕಿಂತ ಬೇರೇನೂ ಅಲ್ಲ. ಈಗ ಕರಡನ್ನು ಸಮಿತಿಯು ಸಿದ್ಧಪಡಿಸಬಹುದಾದರೂ ಅದರಲ್ಲಿ ಏನಿದೆ ಎಂಬುದು ಸದನಕ್ಕೆ ತಿಳಿದಿಲ್ಲ. ಆದ್ದರಿಂದ ಪ್ರಸ್ತಾವ ಹೇಗಿದೆಯೋ ಹಾಗೆ ಅದಕ್ಕೆ ಒಪ್ಪಿಗೆ ಕೊಡುವಂತೆ ಸದನವನ್ನು ಕೇಳುವುದು ಉಚಿತವಾಗಲಾರದು. ಆದರಿಂದ ಪ್ರಸ್ತಾವವನ್ನು ಮಂಡಿಸಿದ ಗೌರವಾನ್ವಿತ ಸದಸ್ಯರು, ಸದ್ಯಕ್ಕೆ ತಮ್ಮ ಪ್ರಸ್ತಾವವನ್ನು ಹಿಂತೆಗೆದುಕೊಂಡು, ಅನುಸೂಚಿಯು ಪೂರ್ಣಗೊಂಡಾಗ, ಈ ಪ್ರಸ್ತಾವವನ್ನು ಪರಿಗಣನೆಗಾಗಿ ಮಂಡಿಸುವ ಹಕ್ಕನ್ನು ಕಾಯ್ದಿರಿಸಿಕೊಳ್ಳಬಹುದೆಂದು ನಾನು ವಿನಂತಿಸಿಕೊಳ್ಳುತ್ತೇನೆ.

**ಶ್ರೀ ಮೆಹಬೂಬ್ ಅಲಿ ಬೇಗ್ ಸಾಹಿಬ್ ಬಹಾದೂರ್** : ಮಾನ್ಯರೆ, ಸಭೆಯ ಮುಂದಿರುವ ಈ ೧೪ನೇ ಖಂಡದಲ್ಲಿ, ಅದು ಸಂಬಂಧ ಪಡುವ ಅನುಸೂಚಿಗೆ ಅವಕಾಶ ಕಲ್ಪಿಸಿಲ್ಲ. ಅದರಲ್ಲಿ ಇಷ್ಟೇ ಹೇಳಲಾಗಿದೆ.

"ರಾಜ್ಯಪಾಲರು, ತಮ್ಮ ಮಂತ್ರಿಗಳ ನೇಮಕ ಮತ್ತು ಅವರೊಂದಿಗಿನ ಸಂಬಂಧ, ಈ ವಿಷಯಗಳ ಬಗ್ಗೆ, ಅನುಸೂಚಿಯಲ್ಲಿ ವಿವರಿಸಿರುವಂತೆ ಜವಾಬ್ದಾರಿಯುತ ಸರ್ಕಾರದ ಒಡಂಬಡಿಕೆಗಳ ಮೂಲಕ ಸಾಮಾನ್ಯವಾಗಿ ಮಾರ್ಗದರ್ಶನ ಪಡೆಯತಕ್ಕದ್ದು."

ಆದ್ದರಿಂದ, ಮೊದಲನೆಯದಾಗಿ, ಈ ಅನುಸೂಚಿಯು ನಮ್ಮ ಮುಂದೆ ಬರುವ ಭರವಸೆ ಇಲ್ಲ. ಅಲ್ಲದೆ, ಅಂದಿನ ಶೀರ್ಷಿಕೆಯಲ್ಲಿ ಜವಾಬ್ದಾರಿಯುತ ಸರ್ಕಾರದ ಒಡಂಬಡಿಕೆಗಳನ್ನು ಪಾಲಿಸತಕ್ಕದ್ದು ಎಂದು ಟಿಪ್ಪಣಿ ಬರೆಯಲಾಗಿದೆ. ಆ ಒಡಂಬಡಿಕೆಗಳು ಯಾವುವು ಮತ್ತು ಅವುಗಳ ಪೈಕಿ ಯಾವ ಒಡಂಬಡಿಕೆಗಳನ್ನು ಸರ್ಕಾರವು ಪಾಲಿಸಬೇಕೆಂಬುದಾದರೂ ನಮಗೆ ತಿಳಿದಿರಬೇಕಾಗುತ್ತದೆ. ಈ ಒಡಂಬಡಿಕೆಗಳು ಸ್ವಿಸ್ ಸರ್ಕಾರದ ಅಥವಾ ಬ್ರಿಟಿಷ್ ಸರ್ಕಾರದ ಒಡಂಬಡಿಕೆಗಳೇ ಅಥವಾ ಭಾರತ ಸರ್ಕಾರವು ಜಾರಿಗೊಳಿಸಿದ ಒಡಂಬಡಿಕೆಗಳೇ ಅಥವಾ ಇನ್ನೂ ಮುಂದೆ ಜಾರಿಗೊಳ್ಳಲಿರುವ ಒಡಂಬಡಿಕೆಗಳೇ?

ಅಷ್ಟೇ ಅಲ್ಲದೆ, ಟಿಪ್ಪಣಿಯಲ್ಲಿ ಈ ರೀತಿ ಹೇಳಲಾಗಿದೆ.

"ಅನುಸೂಚಿ ..... ಈಗ ರಾಜ್ಯಪಾಲರಿಗೆ ನೀಡಿರುವ ಸೂಚನಾದೇಶ ಲಿಖಿತಪತ್ರದ ಸ್ಥಾನದಲ್ಲಿರುತ್ತದೆ."

ಇಡೀ ವಿಷಯದ ಬಗ್ಗೆ ಖಚಿತತೆ ಇರುವುದು ಕಂಡುಬರುತ್ತಿಲ್ಲ. ನಮಗೆ ಗೊತ್ತೇ ಇಲ್ಲದ ಅನುಸೂಚಿಯ ಅತ್ಯಂತ ಮುಖ್ಯ ಭಾಗವಾಗಿರುವ ಮತ್ತು ಸುಸಂಗತವಾಗಿರುವ ಭಾಗದ ಮೇಲೆ ಮತ ಚಲಾಯಿಸುವಂತೆ ಅಥವಾ ಪ್ರಶ್ನೆಯನ್ನು ಪರಿಗಣಿಸುವುದಕ್ಕೆ ನಮ್ಮನ್ನು ಕೇಳಲಾಗಿದೆ. ಅಲ್ಲದೇ ಈ ಅನುಸೂಚಿಯು, ನಮ್ಮ ಮುಂದೆ ಪರಿಗಣನೆಗೆ ಬರುತ್ತದೆಯೇ ಎಂಬ ಭರವಸೆಯೂ ಇಲ್ಲ. ಮಾನ್ಯರೆ, ಈ ಹಂತದಲ್ಲಿ ಅಂಥ ಪ್ರಶ್ನೆಯನ್ನು ಪರಿಗಣಿಸುವುದಕ್ಕೆ ನಮ್ಮನ್ನು ಕೇಳುವುದು ಉಚಿತವಾಗಲಾರದು. ಅನುಸೂಚಿಯನ್ನು ಸಿದ್ಧ ಪಡಿಸಿದ ಅನಂತರ ಈ ಖಂಡವನ್ನು ಪರಿಗಣನೆಗೆ ತೆಗೆದುಕೊಳ್ಳಬಹುದು. ಈಗ ಇರುವಂತೆ ಹೇಳುವುದಾದರೆ, ಅನುಸೂಚಿಯು, ಸೂಚನಾದೇಶ ಲಿಖಿತ ಪತ್ರದಂತೆಯೇ ಇದೆಯೇ ಅಥವಾ ಅದೇ ರೀತಿ ಇರುತ್ತದೆಯೇ

ಎಂಬುದನ್ನು ನಮಗೆ ತಿಳಿಸಿಲ್ಲ; ನಮಗೆ ತಿಳಿಸಿದ್ದಿದ್ದರೆ, ನಮಗೆ ಸ್ವಲ್ಪಮಟ್ಟಿಗೆ ಮಾರ್ಗದರ್ಶನವಾಗುತ್ತಿತ್ತು. ಕೊನೇ ಪಕ್ಷ ನಾವು ಸೂಚನಾದೇಶ ಲಿಖಿತ ಪತ್ರವನ್ನು ಪರಾಮರ್ಶಿಸಬಹುದಾಗಿತ್ತು ಮತ್ತು ಪರಿಶೀಲಿಸಲು ಸ್ವಲ್ಪಮಟ್ಟಿಗಾದರೂ ಖಚಿತತೆ ಇರಬಹುದಾಗಿತ್ತು. ಅಗತ್ಯ ತಾಳ್ಮೆ ಇದ್ದ ಸದಸ್ಯರು ಸೂಚನಾದೇಶಗಳ ಲಿಖಿತ ಪತ್ರಗಳನ್ನು ಪರಿಶೀಲಿಸಿದ್ದರೆ ಚರ್ಚೆಯಲ್ಲಿ ಸಹಾಯಕವಾಗುತ್ತಿತ್ತು. ಆದರೆ, ಆ ಪ್ರಸ್ತಾವವು ಖಚಿತವಾಗಿದ್ದುದಾಗಿರುವುದರಿಂದ ಹಾಗೂ ಅಸ್ಪಷ್ಟವಾಗಿರುವುದರಿಂದ ಈಗ ಇರುವಂತೆಯೇ ಮಂಡಿಸಿದ ಪ್ರಸ್ತಾವವು ಉಚಿತವಾದುದಲ್ಲ ಮತ್ತು ನನಗಿಂತ ಮೊದಲು ಮಾತನಾಡಿದ ಭಾಷಣಕಾರರು ಹೇಳುವಂತೆ ಅದು ಸ್ವಯಂ ಪೂರ್ಣವಾಗಿಲ್ಲ ಮತ್ತು ಸ್ವಯಂ ವಿವರಣಾತ್ಮಕವಾಗಿಲ್ಲ.

**ಡಾ. ಪಿ.ಎಸ್. ದೇಶ್‌ಮುಖ್** (ಸಿ.ಪಿ. ಮತ್ತು ಬಿರಾರ್ : ಸಾಮಾನ್ಯ) : ಮಾನ್ಯರೇ, ಈಗ ಇರುವಂತೆ, ಖಂಡದ ವಿರುದ್ಧ ಎತ್ತಿರುವ ಆಕ್ಷೇಪಣೆಗಳಲ್ಲಿ ಗಮನಿಸಬಹುದಾದ ಅಂಶಗಳಿವೆಂದು ನಾನು ಭಾವಿಸಿದ್ದೇನೆ. ನಮ್ಮ ಮುಂದಿಟ್ಟಿರುವ ರೀತಿಯಲ್ಲಿ ಅದನ್ನು ಅಂಗೀಕರಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಅನುಸೂಚಿಯು ಪ್ರಸ್ತಾವದ ಜೊತೆಗೆ ಇರದೇ, ತತ್ತ್ವದ ವಿಷಯವಾಗಿಯೂ ಒಪ್ಪಿಕೊಳ್ಳಲು ನಮಗೆ ಸಾಧ್ಯವಾಗುವುದಿಲ್ಲ. ಆದರೆ, ಇಡೀ ಖಂಡವನ್ನು ಹಿಂತೆಗೆದುಕೊಳ್ಳಬೇಕೆಂದಾಗಲೀ ಅಥವಾ ಶ್ರೀ ಅನೆ ಅವರು ಸಲಹೆ ಮಾಡಿದಂತೆ, ಇತರ ಸಂದರ್ಭದಲ್ಲಿ ಸಭೆಯ ಮುಂದೆ ತರಬಹುದೆಂದು ಅರ್ಥವಲ್ಲ. "ಅನುಸೂಚಿ" ಪದದ ಸಮೀಪದ ಕೆಲವು ಪದಗಳನ್ನು ಬಿಟ್ಟುಬಿಟ್ಟರೆ ಈ ಸಂದರ್ಭದಲ್ಲಿ ಸೂಕ್ತವಾಗುತ್ತದೆಂಬುದು ನನ್ನ ಸಲಹೆ. ಈ ರೀತಿ ಹೇಳಬಹುದಾಗಿದೆ.

"........ಇದರಲ್ಲಿ ಇನ್ನು ಮುಂದೆ ವಿವರಿಸಲಾಗುವಂತೆ ಜವಾಬ್ದಾರಿಯುತ ಸರ್ಕಾರದ ಒಡಂಬಡಿಕೆಗಳು."

ಈ ಸಲಹೆಯನ್ನು ಒಪ್ಪಿಕೊಂಡರೆ, ಕೆಲವೇ ಕೆಲವು ಪದಗಳನ್ನು ಮಾತ್ರ ಬದಲಾಯಿಸಬೇಕಾಗುತ್ತದೆ. ಈ ಸಂದರ್ಭಕ್ಕೆ ಇಷ್ಟು ಸಾಕಾಗುತ್ತದೆಂದು ನಾನು ಭಾವಿಸಿದ್ದೇನೆ ಮತ್ತು ನಮ್ಮ ಮುಂದೆ ಮಂಡಿಸಿಲ್ಲದ ಅನುಸೂಚಿಗೆ ಒಪ್ಪಿಗೆ ನೀಡುವ ಬಗ್ಗೆ ಮಂಡಿಸಿರುವ ಪ್ರಸ್ತಾವವನ್ನು ಒಪ್ಪಿಕೊಳ್ಳುವಂತೆ ನಮ್ಮನ್ನು ಒತ್ತಾಯ ಪಡಿಸಬೇಕಾಗಿಲ್ಲ. ಸೂಚನಾದೇಶ ಲಿಖಿತ ಪತ್ರಗಳ ಯಾವುದೇ ವಿಷಯವನ್ನು ನಾನು ಹೇಳಲು ಇಚ್ಛಿಸಿರಬಹುದು. ಅದು, ಆ ತರುವಾಯ ನಮ್ಮ ಮುಂದೆ ಬರತಕ್ಕದ್ದೆಂಬುದಕ್ಕೆ ಇಲ್ಲಿ ಅವಕಾಶವಿದೆ. ಆಗ, ಅದನ್ನು ಪರಿಗಣಿಸಲು ಸಾಕಷ್ಟು ಅವಕಾಶಗಳಿರುತ್ತವೆ. ಇಲ್ಲಿ ಎತ್ತಿರುವ ಆಕ್ಷೇಪಣೆಗಳಿಗೆ ನಾನು ಸಲಹೆ ಮಾಡಿದ ಈ ಸಣ್ಣದೊಂದು ತಿದ್ದುಪಡಿಯಿಂದ ಉತ್ತರ ಸಿಗುತ್ತದೆ ಎಂದು ನಾನು ಭಾವಿಸಿದ್ದೇನೆ. ಇದು ಇಲ್ಲದಿದ್ದರೆ, ಆಕ್ಷೇಪಣೆ ಎತ್ತಲು ನಮಗೆ ಅವಕಾಶ ಕೊಟ್ಟಂತಾಗುತ್ತದೆ. ಮಾನ್ಯರೇ, ಪ್ರಸಕ್ತ ಪ್ರಸ್ತಾವವನ್ನು ಅಂಗೀಕರಿಸಲು ತಿಳಿಸಿರುವಂತೆ, ಅಸ್ಪಷ್ಟವಾಗಿ ಮತ್ತು ಅನಿಶ್ಚಿತವಾದ ಪ್ರಸ್ತಾವಗಳನ್ನು ಅಂಗೀಕರಿಸಲು ಇನ್ನು ಮುಂದೆ ತಿಳಿಸುವುದಿಲ್ಲವೆಂದು ಭಾವಿಸಿದ್ದೇನೆ.

**ಶ್ರೀ ರಾಯ್ ಬಹಾದೂರ್ ಶ್ಯಾಮನಂದನ ಸಹಾಯ** (ಬಿಹಾರ್ : ಸಾಮಾನ್ಯ) : ಮಾನ್ಯರೆ, ನಾವು ಈಗ ಚರ್ಚಿಸುತ್ತಿರುವ ೧೪ನೇ ಖಂಡದಲ್ಲಿ ಒಳಗೊಂಡಿರುವ ಪ್ರಸ್ತಾವದ ಬಗ್ಗೆ ಅನಿಶ್ಚಿತತೆ ಇದೆ ಎಂದು ನಾನು ಭಾವಿಸಿಲ್ಲ. ಈ ವರದಿಯನ್ನು ಮಂಡಿಸುವಾಗ, ಗೌರವಾನ್ವಿತ ಪ್ರಸ್ತಾವನೆಕಾರರು ಯಾವ ಮುಖ್ಯ ತತ್ತ್ವಗಳ ಆಧಾರದ ಮೇಲೆ ಪ್ರಾಂತೀಯ ಸಂವಿಧಾನವನ್ನು ಸದನವು ಒಪ್ಪಿಕೊಳ್ಳುವುದಕ್ಕೆ ಇರುವ ಸಾಮಾನ್ಯ ಉದ್ದೇಶಗಳನ್ನು ಸ್ಪಷ್ಟವಾಗಿ ತಿಳಿಸಿದ್ದಾರೆ. ಈ ಒಂದು ನಿರ್ದಿಷ್ಟ ಖಂಡವು ಸಂಬಂಧಪಡುವಷ್ಟರ ಮಟ್ಟಿಗೆ ಹೇಳುವುದಾದರೆ, ರಾಜ್ಯಪಾಲರು, ಅನುಸೂಚಿಯಲ್ಲಿ ಹೇಳಿರುವಂತೆ, ಜವಾಬ್ದಾರಿಯುತ ಸರ್ಕಾರದ ಒಡಂಬಡಿಕೆಗಳ ಮೂಲಕ ಸಾಮಾನ್ಯವಾಗಿ ಮಾರ್ಗದರ್ಶನ ಪಡೆಯತಕ್ಕದ್ದು ಎಂಬುದನ್ನು ಸ್ಪಷ್ಟವಾಗಿ ನಿರೂಪಿಸುತ್ತದೆ. ಇದನ್ನು ಮುಂದುವರಿಸಿ, ಈಗ ರಾಜ್ಯಪಾಲರುಗಳಿಗೆ ನೀಡಿರುವ ಸೂಚನಾದೇಶಗಳ ಲಿಖಿತ ಪತ್ರದ ಬದಲಿಗೆ ಇದನ್ನು ಸೇರಿಸಲಾಗಿದೆ ಎಂದೂ ತಿಳಿಸಲಾಗಿದೆ.

ಮಾನ್ಯರೆ, ಈಗ ಸೂಚನಾದೇಶಗಳ ಲಿಖಿತಪತ್ರವು ಈಗಾಗಲೇ ಅಸ್ತಿತ್ವದಲ್ಲಿದೆ ಮತ್ತು ಅದನ್ನು ಪರಿಶೀಲಿಸಿದವರು, ಹೇಗೆ ಮಂತ್ರಿಗಳನ್ನು ಆಯ್ಕೆ ಮಾಡಬೇಕು ಎಂಬ ಬಗ್ಗೆ ಇರುವ ನಿರ್ದೇಶನಗಳನ್ನು ಒಪ್ಪಿಕೊಳ್ಳುತ್ತಾರೆ. ಆ ಎಲ್ಲ ನಿರ್ದೇಶನಗಳು ೧೯೩೫ರ ಅಧಿನಿಯಮದಲ್ಲಿವೆ.

(**ಒಬ್ಬರು ಗೌರವಾನ್ವಿತ ಸದಸ್ಯರು** : ಆ ಅಧಿನಿಯಮವು ಈಗ ಸದನದ ಮುಂದೆ ಇಲ್ಲ.)

ಆ ಅಧಿನಿಯಮವು ಸದನದ ಮುಂದೆ ಇದೆಯೇ ಅಥವಾ ಇಲ್ಲವೇ ಎಂಬುದು ಈಗ ಪ್ರಶ್ನೆಯಲ್ಲ. ಸಾಮಾನ್ಯ ತತ್ತ್ವಗಳನ್ನು ಮಾತ್ರ ನಿರೂಪಿಸುವುದು ಈ ವರದಿಯ ಉದ್ದೇಶ ಮತ್ತು ಅವುಗಳಿಗೆ ಸಂಬಂಧಿಸಿದಂತೆ ಸದನದ ಇಚ್ಛೆಯನ್ನು ಖಚಿತವಾಗಿ ತಿಳಿಯುವುದೇ ಉದ್ದೇಶವಾಗಿದೆ. ಅವು ಅಸ್ತಿತ್ವದಲ್ಲಿ ಇರುವುದನ್ನು ಬಿಟ್ಟು ಬೇರೆ ದಾರಿ ಹಿಡಿದಿವೆಯೇ ಎಂಬ ವಿಷಯವನ್ನು ನಾವು ಅನಂತರ ಎತ್ತಬಹುದು. ಆದರೆ, ನಾವು ಬಹುಮತ ಪಕ್ಷವು ಮಂತ್ರಿಮಂಡಲವನ್ನು ರಚಿಸಬೇಕೆಂದು ಕೇಳಿದಾಗ ಆ ಪ್ರಸ್ತಾವಗಳನ್ನು ಎಲ್ಲಿಯವರೆಗೆ ಒಪ್ಪಿಕೊಳ್ಳುತ್ತೇವೆಯೋ ಅಲ್ಲಿಯವರೆಗೆ, ಈ ೧೪ನೇ ಖಂಡವನ್ನು ನಾವು ಪರಿಗಣಿಸುವುದಕ್ಕೆ ಯಾವುದೇ ಆಕ್ಷೇಪಣೆ ಇರುತ್ತದೆ ಎಂದು ನಾನು ಭಾವಿಸುವುದಿಲ್ಲ.

**ಶ್ರೀ ಬಿ. ಪಾಕರ್ ಸಾಹಿಬ್ ಬಹಾದೂರ್** : ಮಾನ್ಯರೆ, ಅನುಸೂಚಿಯನ್ನು ಆ ತರುವಾಯ ಮಂಡಿಸಲಾಗುವುದೆಂದು ಮತ್ತು ಅದಕ್ಕೆ ಮಂಜೂರಾತಿ ನೀಡಬೇಕೆಂದು ಹೇಳಿದರೆ, ಅದು ಅಷ್ಟೊಂದು ಗಂಭೀರವಾದ ವಿಷಯವಾಗಿಲ್ಲವಾದ್ದರಿಂದ, ಅನುಸೂಚಿಯ ಬಗ್ಗೆ ಆ ತರುವಾಯ ಪರಿಗಣಿಸಲಾಗುವುದೆಂದು ನಾನು ಭಾವಿಸಿದ್ದೇನೆ. ಈ ಸದನವು ಅದನ್ನು ಗಂಭೀರವಾಗಿ ಪರಿಗಣಿಸದಿರುವಂಥ ವಿಷಯಗಳಿರುವುದು ನನಗೆ ತಿಳಿದಿದೆ. ಏಕೆಂದರೆ, ನಮಗೆ ತಿಳಿಯದಿರುವಂಥ ವಿಷಯಗಳ ಭಾಷಣಗಳನ್ನು ಕೇಳಬೇಕೆಂದು ನಮ್ಮನ್ನು ಕೇಳಿ ನಮಗೆ ತಿಳಿಯದಿದ್ದಂಥ ವಿಷಯಗಳಿಗೆ ಅಂಗೀಕಾರ ನೀಡಬೇಕೆಂದು ಕೇಳಲಾಗಿದೆ. ಅದೇ ರೀತಿಯಾಗಿ ಈ ಖಂಡವನ್ನು ಸದನದ ಮುಂದೆ ತರಲಾಗಿದೆ ಮತ್ತು ಅನುಸೂಚಿಯನ್ನು ಆ ತರುವಾಯ ಮುಂದಿಡಲಾಗುವುದೆಂದು ಆದರೆ ಖಂಡವನ್ನು ಅಂಗೀಕರಿಸಬೇಕೆಂದು ಕೇಳಿದ್ದಾರೆ. ಪ್ರಸ್ತಾವವನ್ನು ಮಂಡಿಸಿದವರಿಗೂ ಅನುಸೂಚಿ ಯಾವುದೆಂಬುದು ಗೊತ್ತಿಲ್ಲ. ಇದು ಸಂಪೂರ್ಣವಾಗಿ ಕ್ರಮಬದ್ಧವಾದುದಲ್ಲ. ಆದ್ದರಿಂದ, ಮಾನ್ಯರೆ ಇದನ್ನು ನೀವೇ ತಳ್ಳಿಹಾಕಬಹುದಾಗಿದೆ.

ಈ ಇಬ್ಬರು ಸದಸ್ಯರು ಮಾಡಿದ ಎರಡು ಸಲಹೆಗಳನ್ನು ನಾನು ಉಲ್ಲೇಖಿಸಿದ್ದೇನೆ ಅಷ್ಟೇ. ಒಂದನೇ ಸಲಹೆಯನ್ನು ಶ್ರೀ ಹಾಜಿ ಅಬ್ದುಲ್ ಸತ್ತಾರ್ ಅವರು ಮಾಡಿದ್ದು, ಅದರಲ್ಲಿ ಅನುಸೂಚಿಯನ್ನು ತೆಗೆದುಹಾಕಿ, ರೀತಿನೀತಿಗಳನ್ನು ಎಂಬ ಪದಗಳನ್ನು ಉಳಿಸಬೇಕೆಂದು ಹೇಳಿದ್ದಾರೆ. ಆದರೆ ರೀತಿನೀತಿಗಳು ಯಾವುವು, ಅವುಗಳ ಸ್ವರೂಪವೇನು ಎಂಬುದನ್ನು ತಿಳಿದುಕೊಳ್ಳದೇ ಸದನವು ಆ ಖಂಡವನ್ನು ಅಂಗೀಕರಿಸಬೇಕೆಂದು ಹೇಳುವುದು ನಿಜವಾಗಿಯೂ ಸೂಕ್ತವಾದುದಲ್ಲ ಮತ್ತು ಜವಾಬ್ದಾರಿಯುತವಾದುದೂ ಆಗುವುದಿಲ್ಲ. ಈ ಖಂಡಕ್ಕೆ ಮಾರ್ಪಾಡುಗಳನ್ನು ಮಾಡಲು ಸಲಹೆ ಮಾಡಿ ಇದಕ್ಕೆ ಮೊದಲು ಮಾತನಾಡಿದವರ ಮಾತುಗಳಿಗೆ ಇದೇ ಕ್ರಮ ಅನ್ವಯವಾಗುತ್ತದೆ. ಆದ್ದರಿಂದ ಮಾನ್ಯರೆ, ಈ ಖಂಡದ ಪರಿಗಣನೆಯನ್ನು ಮುಂದೂಡಲು ಹೇಳಿರುವ ಶ್ರೀ ಅನೆ ಅವರ ಮನವಿಗೆ ಒಪ್ಪಿಗೆ ನೀಡಿ ಈ ಸದನದ ಘನತೆ ಹಾಗೂ ಆತ್ಮಗೌರವವನ್ನು ರಕ್ಷಿಸಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ನಜೀರುದ್ದೀನ್ ಅಹ್ಮದ್** (ಪಶ್ಚಿಮ ಬಂಗಾಳ : ಮುಸ್ಲಿಮ್) : ಮಾನ್ಯ ಅಧ್ಯಕ್ಷರೆ, ಅಸ್ತಿತ್ವದಲ್ಲಿಲ್ಲದ ಅನುಸೂಚಿಗೆ ಒಪ್ಪಿಗೆ ನೀಡಬೇಕೆಂದು ಸಂಕ್ಷಿಪ್ತವಾಗಿ ನಮಗೆ ಕೇಳಲಾಗಿದೆ. ಈ ಅನುಸೂಚಿಯು, ಪಾಲಿಸಬೇಕಾದ ಸೂಚನಾದೇಶ ಲಿಖಿತಪತ್ರಗಳಂತೆಯೇ ಇದೆ ಎಂದು ಭಾಷಣಕಾರರ ಪೈಕಿ ಒಬ್ಬರು ಸ್ಪಷ್ಟ ಪಡಿಸಿದ್ದಾರೆ. ಆದರೆ, ಖಂಡಕ್ಕೆ ಲಗತ್ತಿಸಿರುವ ಟಿಪ್ಪಣಿಯನ್ನು ಓದಲು ಅನುಮತಿ ಇದೆ ಎಂದು ಭಾವಿಸಿದ್ದೇನೆ. ಅದರಲ್ಲಿ, ಅನುಸೂಚಿಯು, ಸೂಚನಾದೇಶ ಲಿಖಿತಪತ್ರಗಳ ಬದಲು ಇದೆ ಎಂದಷ್ಟೇ ಹೇಳಲಾಗಿದೆ; ಆದರೆ, ಅನುಸೂಚಿಯು

ಸೂಚನಾದೇಶಗಳ ಲಿಖಿತಪತ್ರದಂತೆಯೇ ಇದೆ ಅಥವಾ ಅದಕ್ಕೆ ಸಮನಾಗಿ ಇರುವುದೇ ಎಂಬುದಕ್ಕೆ ಯಾವುದೇ ಸೂಚನೆ ಇಲ್ಲ. ಮಾನ್ಯರೆ, ಯಾವುದನ್ನು ವಿವರಿಸಿಲ್ಲವೋ ಅಥವಾ ಅದು ತಿಳಿದಿಲ್ಲವೋ ಅದನ್ನು ಸದನವು ಒಪ್ಪಿಕೊಳ್ಳಬೇಕೆಂದು ಕೇಳಿಕೊಳ್ಳಲಾಗಿದೆ. ವಧುವಿನ ಉಪಸ್ಥಿತಿ ಇಲ್ಲದೇ ಅಥವಾ ಆಕೆ ಯಾರೆಂದು ಗೊತ್ತಿಲ್ಲದೇ, ಆಕೆಯನ್ನು ಹುಡುಕಿ ಆ ತರುವಾಯ ಆಯ್ಕೆ ಮಾಡಲಾಗುವುದೆಂಬ ವಾಗ್ದಾನದ ಮೇಲೆ ವಿವಾಹ ಮಾಡಿಕೊಳ್ಳುವುದಕ್ಕೆ ಒಪ್ಪಿಗೆ ಕೊಡುವಂತೆ ವರನನ್ನು ಕೇಳಿದಂತಾಗಿದೆ.

**ಪ್ರೊ. ಶಿಬ್ಬನ್ ಲಾಲ್ ಸಕ್ಸೇನಾ** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ) : ಮಾನ್ಯರೆ, ಸದನವು ಈಗಾಗಲೇ ೬ನೇ ಖಂಡದ (ಇ)ನೇ ಉಪ–ಖಂಡವನ್ನು ಅಂಗೀಕರಿಸಿದೆ, ಅದರಲ್ಲಿ ಅನುಸೂಚಿಯನ್ನು ನಮೂದಿಸಿ ಲಗತ್ತಿಸಿರಲಿಲ್ಲ. ಆಗ ಯಾರೊಬ್ಬ ಸದಸ್ಯರೂ ಆಕ್ಷೇಪಣೆ ಎತ್ತಲಿಲ್ಲ. ಅಷ್ಟೇ ಅಲ್ಲದೇ ಗೌರವಾನ್ವಿತ ಪ್ರಸ್ತಾವನೆಕಾರರು ತತ್ತ್ವಗಳನ್ನಷ್ಟೇ ಒಪ್ಪಿಕೊಳ್ಳಬೇಕೆಂದು ಮತ್ತು ಉಳಿದ ವಿವರಗಳನ್ನು ಆ ತರುವಾಯ ಮಂಡಿಸಲಾಗುವುದೆಂದು ಪ್ರಾರಂಭದಲ್ಲಿಯೇ ಹೇಳಿದ್ದರು. ಆದ್ದರಿಂದ, ಈ ಖಂಡದ ಬಗ್ಗೆ ಆಕ್ಷೇಪ ಎತ್ತುವುದಕ್ಕೆ ಯಾವುದೇ ವಿಷಯವಿದೆ ಎಂದು ನಾನು ಭಾವಿಸಿಲ್ಲ. ಇಂಥ ವ್ಯರ್ಥ ಆಕ್ಷೇಪಣೆಗಳನ್ನು ಎತ್ತಿ ಸದನದ ಸಮಯವನ್ನು ನಾವು ಹಾಳುಮಾಡತಕ್ಕದ್ದಲ್ಲ.

**ಶ್ರೀ ಮಹಾವೀರ ತ್ಯಾಗಿ** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ) : ಮಾನ್ಯರೆ, ಉಭಯ ಕಡೆಗಳಲ್ಲಿ ಗೌರವಾನ್ವಿತ ಸದಸ್ಯರು ಸಾಕಷ್ಟು ವಾದ ವಿವಾದ ಮಂಡಿಸಿದ್ದಾರೆ. ಈಗ ರಾಜ್ಯಪಾಲರಿಗೆ ನೀಡಿರುವ ಸೂಚನಾದೇಶಗಳ ಲಿಖಿತಪತ್ರಗಳ ಬದಲಿಗೆ ಮಂಡಿಸಿರುವ ಅನುಸೂಚಿಯು ಇಲ್ಲದಿರುವುದರಿಂದ, ಪ್ರಸ್ತಾವವು ಅಪೂರ್ಣವಾಗುತ್ತದೆ. ನಾವು ಪೂರ್ಣ ಪ್ರಸ್ತಾವವನ್ನು ಪರಿಗಣಿಸಬೇಕು. ಆದ್ದರಿಂದ, ಇದನ್ನು ಮಂಡಿಸಿರುವ ಶ್ರೀ ಸರ್ದಾರ್ ಪಟೇಲ್ ಅವರು, "ಈಗ ರಾಜ್ಯಪಾಲರಿಗೆ ನೀಡಿರುವ" ಯಾವುವೇ ಸೂಚನಾದೇಶ ಲಿಖಿತ ಪತ್ರಗಳು ಯಾವುವಾದರೂ ಇದೆಯೋ ಎಂಬುದನ್ನು ದಯವಿಟ್ಟು ನಮಗೆ ತಿಳಿಸುವಿರಾ. "ಈಗ" ಎಂಬ ಪದವನ್ನು ಹೊಸದಾಗಿ ಸೇರಿಸಲಾಗಿದೆ. ೧೯೩೭ರಲ್ಲಿ ಜನಪ್ರಿಯ ಮಂತ್ರಿಮಂಡಲಗಳು ಅನುಷ್ಠಾನಕ್ಕೆ ಬರುವ ಮೊದಲು, ರಾಜ್ಯಪಾಲರುಗಳಿಗೆ ಸೂಚನಾದೇಶಗಳ ಲಿಖಿತ ಪತ್ರಗಳನ್ನು ನೀಡಲಾಗುತ್ತಿತ್ತು ಎಂಬುದು ನನಗೆ ಗೊತ್ತಿದೆ. ಇಲ್ಲಿ ಹೇಳುತ್ತಿರುವ ಪತ್ರ ಎಂದರೆ, ಅದೇ ಪತ್ರವೇ ಅಥವಾ ಸರ್ಕಾರದ ಬದಲಾವಣೆಯಿಂದಾಗಿ ರಾಜ್ಯಪಾಲರಿಗೆ ನೀಡಿರುವ ಹೊಸ ಸೂಚನಾದೇಶ ಪತ್ರಗಳೇ? "ಈಗ" ಎಂಬ ಪದವು, ಈಗ ನೀಡಿರಬಹುದಾದ ಹೊಸ ಸೂಚನಾದೇಶ ಲಿಖಿತಪತ್ರಗಳೇ ಎಂಬುದನ್ನು ತಿಳಿಸುತ್ತಿರಬಹುದೆಂದು ಕಂಡುಬರುತ್ತದೆ. ಆದರೆ, ಇವು ಯಾವುವುಗಳ ಬಗ್ಗೆಯೂ ನಾವು ಕೇಳಿಲ್ಲ. ಹಳೆಯ ಪತ್ರವೇ ಇದು ಎಂದು ಇಲ್ಲಿ ಹೇಳಲಾಗಿದೆ ಎಂದು ಭಾವಿಸಿದ್ದೇನೆ ಮತ್ತು "ಈಗ" ಎಂಬ ಪದವು ಆಕಸ್ಮಿಕವಾಗಿ ನುಸುಳಿದೆಯೇ ಅಥವಾ ಅದಕ್ಕೆ ನಾನೇ ತಪ್ಪಾಗಿ ಅರ್ಥ ಮಾಡಿದ್ದೇನೆಯೇ, ಏನೇ ಇರಲಿ, ಸೂಚನಾದೇಶ ಲಿಖಿತಪತ್ರಗಳಿಗೆ ಸಂಬಂಧಿಸಿದಂತೆ ವಿವರಗಳು ಇಲ್ಲದಿರುವುದು, ಅದು ಈಗ ಇರುವಂತೆಯೇ ಅಂಗೀಕರಿಸುವುದು ಸೂಕ್ತವಾಗಲಾರದು. ಆದ್ದರಿಂದ ನಾವು ಪ್ರಸ್ತಾವವನ್ನು ಅಂಗೀಕರಿಸತಕ್ಕದ್ದು. ಆದರೆ, ಅದರ ಕೆಳಗೆ ಇರುವ ಟಿಪ್ಪಣಿಯನ್ನು ಅಲ್ಲ ಎಂಬುದು ನನ್ನ ಅಭಿಪ್ರಾಯ ಮತ್ತು ಟಿಪ್ಪಣಿಯ ಸ್ಥಳದಲ್ಲಿ ಅನುಸೂಚಿಯನ್ನು ತರುವಾಯ ಪರಿಗಣಿಸಲಾಗುವುದು. ನಾವು, ನಮ್ಮ ಪ್ರಾಂತೀಯ ಸಂವಿಧಾನದ ತತ್ತ್ವಗಳನ್ನು ಅಂಗೀಕರಿಸುತ್ತಿರುವುದರಿಂದ, ಸರ್ಕಾರವು ಅನುಸೂಚಿಯಲ್ಲಿ ಹೇಳಿರುವ ಅಂಥ ಅಧಿಕಾರಗಳನ್ನು ಹೊಂದಿರುವುದು ಎಂದು ನಾವು ಹೇಳಬಹುದು ಮತ್ತು ಅನುಸೂಚಿಯ ಭಾಗವನ್ನು ಆ ತರುವಾಯ ಪರಿಗಣಿಸಬಹುದಾಗಿದೆ. ಯಾವುದೇ ಅನುಸೂಚಿಯು, ಸದನದಿಂದ ಅಂಗೀಕೃತವಾಗುವ ಹೊರತು ಆ ಅನುಸೂಚಿಯನ್ನು ಮಾನ್ಯ ಮಾಡಲಾಗುವುದಿಲ್ಲ ಮತ್ತು ನಾವು ಅದನ್ನು ಆಮೇಲೆ ಪರಿಗಣಿಸಬಹುದು. ಆದರೆ, ನಾವು ಈ ಅಧಿಕಾರಗಳನ್ನು ರಾಜ್ಯಪಾಲರಿಗೆ ನೀಡುತ್ತಿದ್ದೇವೆ ಮತ್ತು ನಾವು ಅದನ್ನು ಪೂರ್ಣವಾಗಿ ತಿಳಿಸಿಲ್ಲ; ಅನುಸೂಚಿಯನ್ನು ಆ ತರುವಾಯ ಮಂಡಿಸಲಾಗುವುದು.

ಆದ್ದರಿಂದ, ಟಿಪ್ಪಣಿಯನ್ನು ಬಿಟ್ಟು ನಾವು ಇದನ್ನು ಅಂಗೀಕರಿಸಬಹುದು, ಇದನ್ನು ತೆಗೆದುಹಾಕಿ, ಇದರ ಬದಲು ಇನ್ನೊಂದು ಟಿಪ್ಪಣಿಯನ್ನು ಪರ್ಯಾಯವಾಗಿ ಬಳಸಬಹುದು ಅಥವಾ ಇಡೀ ಖಂಡವನ್ನೇ ಮುಂದೂಡಬಹುದು ಎಂದು ನಾನು ಭಾವಿಸಿದ್ದೇನೆ. ನಮ್ಮ ಸ್ನೇಹಿತರು ಈ ಬಗ್ಗೆ ನಿರ್ಣಯವನ್ನು ಕೊಡಬೇಕೆಂದು ತಮ್ಮಲ್ಲಿ ಕೇಳಿಕೊಂಡಿದ್ದು, ಸರಿಯಾಗಿಯೇ ಇದೆ. ಹಿಂತೆಗೆದುಕೊಳ್ಳುವುದು ಪ್ರಸ್ತಾವನೆಕಾರರ ಪ್ರಸ್ತಾವಕ್ಕೆ ಒತ್ತಾಯಿಸುವುದೂ ಕರ್ತವ್ಯವಲ್ಲ. ಅನುಸೂಚಿಯು ಇಲ್ಲದಿರುವಾಗ ಅದನ್ನು ಮತಕ್ಕೆ ಹಾಕುವಲ್ಲಿ ಸದನದಲ್ಲಿಯ ಬಹುಮತ ಸದಸ್ಯರಿಗೆ ಒತ್ತಾಯ ಪಡಿಸುವುದು ನ್ಯಾಯೋಚಿತವಾಗುವುದೇ ಎಂಬ ಕ್ರಿಯಾಲೋಪದ ಪ್ರಶ್ನೆಯನ್ನು ತಾವು ನಿರ್ಣಯಿಸಬೇಕಾಗಿದೆ. ಏಕೆಂದರೆ, ಸದನವು ಸೂಚನಾದೇಶಗಳ ಲಿಖಿತ ಪತ್ರದಲ್ಲಿ ನಿಖರವಾಗಿ ಏನಿದೆ ಎಂಬುದನ್ನು ತಿಳಿದುಕೊಳ್ಳದೇ ಸದನವು ಮತ ನೀಡಬೇಕಾಗಿದೆ. ಆದ್ದರಿಂದ, ತಾವು ಈ ಕ್ರಿಯಾಲೋಪ ಪ್ರಶ್ನೆ ಕುರಿತ ನಿರ್ಣಯ ಕೈಗೊಳ್ಳಬೇಕೆಂದು ನಾನು ವಿನಂತಿಸಿಕೊಳ್ಳುತ್ತೇನೆ.

**ಮಾನ್ಯ ಅಧ್ಯಕ್ಷರು :** ಈ ಹಿಂದೆ ಇಂಥ ಟಿಪ್ಪಣಿಗಳನ್ನು ಸದನದ ಮುಂದೆ ವಾಡಿಕೆಯಂತೆ ಇಟ್ಟಿರಲಿಲ್ಲವಾದ್ದರಿಂದ ಸದನವು ಅವುಗಳನ್ನು ಅಂಗೀಕರಿಸಿರಲಿಲ್ಲ. ಅಂಥ ಟಿಪ್ಪಣಿಗಳಿಗೆ ಸಂಬಂಧಿಸಿದಂತೆ ಪ್ರಶ್ನೆಯನ್ನು ಎತ್ತಿದ ಸಂದರ್ಭದಲ್ಲಿ ನಾನು ಹೇಳಿದ್ದೇನೆ. ಮಂಡಿಸಲಾಗಿರುವ ಖಂಡಗಳ ಅರ್ಥದ ಸೂಚನೆ ನೀಡಲು ಮಾತ್ರ ಉದ್ದೇಶಿಸಲಾಗಿದೆ ಮತ್ತು ಟಿಪ್ಪಣಿಗಳಲ್ಲಿ ಏನಿದೆ ಎಂಬುದಕ್ಕೆ ನಾವು ಬದ್ಧರಾಗಿರಬೇಕಿಲ್ಲ. ಆದ್ದರಿಂದ, ಈ ಖಂಡಗಳನ್ನು, ಟಿಪ್ಪಣಿಗಳನ್ನು ಉಲ್ಲೇಖ ಮಾಡದೇ ಅವುಗಳ ಗುಣದೋಷಗಳ ಮೇಲೆ ಪರಿಗಣಿಸಬೇಕಾಗುತ್ತದೆ.

**ಗೌರವಾನ್ವಿತ ಸದಸ್ಯರು :** ಅದು ಟಿಪ್ಪಣಿಯಲ್ಲ, ಅದು ಸಂಬಂಧಪಟ್ಟ ಖಂಡವೇ ಆಗಿದೆ.

**ಶ್ರೀ ರಾಜಕೃಷ್ಣ ಬೋಸ್** (ಒರಿಸ್ಸಾ : ಸಾಮಾನ್ಯ) : ಮಾನ್ಯರೆ, ನಾವು, ಈ ಖಂಡವನ್ನು ಅಂಗೀಕರಿಸುವುದಕ್ಕಾಗಿ ಅನೇಕ ಆಕ್ಷೇಪಣೆಗಳು ಇವೆ ಎಂದು ಕೇಳಿದ್ದೇನೆ. ಆದ್ದರಿಂದ, ಈ ಆಕ್ಷೇಪಣೆಗಳಲ್ಲಿ ಸ್ವಲ್ಪಮಟ್ಟಿಗೆ ಒತ್ತಾಯವೂ ಇದೆ. ಸದನಕ್ಕೆ ವಿಷಯಗಳನ್ನು ತಿಳಿಸದೇ ಅನುಸೂಚಿಯನ್ನು ಅಂಗೀಕರಿಸತಕ್ಕದ್ದಲ್ಲವೆಂದು ನಾನು ಸಲಹೆ ಮಾಡುತ್ತೇನೆ. ಆದ್ದರಿಂದ, ನಾವು ೮ನೇ ಖಂಡದ ಸಂದರ್ಭದಲ್ಲಿ ಈ ಖಂಡದ ಬಗ್ಗೆಯೂ ಹಾಗೇ ತೀರ್ಮಾನ ಕೈಗೊಂಡು, ಖಂಡವನ್ನು ಹಿಂದಕ್ಕೆ ಕಳುಹಿಸಬೇಕೆಂದು ಹಾಗೂ ಇದಕ್ಕೆ ಒಪ್ಪಿಗೆ ನೀಡದಿರುವ ಸದಸ್ಯರು ಎತ್ತಿದ ಆಕ್ಷೇಪಣೆಗಳನ್ನು ಎತ್ತಿದ್ದರಿಂದ, ಇದನ್ನು ಪುನಃ ಒಕ್ಕಣೆ ಮಾಡಿ ನಾಳೆ ಸದಸ್ಯರು ಸಭೆ ಸೇರಿದಾಗ ಸದನದ ಮುಂದೆ ತರಬೇಕೆಂದು ನಾನು ವಿನಂತಿಸಿಕೊಳ್ಳುತ್ತೇನೆ.

**ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಜೆ. ಪಟೇಲ್ :** ಮಾನ್ಯರೆ, ಈ ಜ್ಞಾಪನಪತ್ರವನ್ನು ಪರಿಗಣಿಸುವುದಕ್ಕಾಗಿ, ನಾನು ಪ್ರಸ್ತಾವವನ್ನು ಮಂಡಿಸುತ್ತಿರುವಾಗ, ಸಂಸದೀಯ ಅಭಿಪ್ರಾಯಗಳನ್ನು ಪಾಲಿಸಿಲ್ಲವೆಂಬುದನ್ನು ತಿಳಿಸಲು ವಿಷಾದಿಸುತ್ತೇನೆ. ಅನ್ಯಥಾ, ಈಗ ಎತ್ತಿರುವ ಆಕ್ಷೇಪಣೆಯಲ್ಲಿ ಯಾವುದೇ ಪರಿಶೀಲನೆ ಮಾಡುವ ಅಂಶ ಇದೆ ಎಂಬುದು ಕಂಡುಬರುತ್ತಿಲ್ಲ. ಈ ಜ್ಞಾಪನಪತ್ರವು ಕೇವಲ ತಾತ್ತ್ವಿಕ ವಿಚಾರಗಳನ್ನು ಒಳಗೊಂಡಿದೆ ಎಂದು ಒಂದಕ್ಕಿಂತ ಹೆಚ್ಚು ಸಲ ಹೇಳಿದ್ದೇನೆ ಮತ್ತು ಈ ತತ್ತ್ವಗಳನ್ನು ಅಂಗೀಕರಿಸಿದ್ದಾದರೆ, ಆ ತರುವಾಯ ಇವುಗಳನ್ನು ಒಕ್ಕಣೆ ಮಾಡುವಾಗ ಪರಿಗಣಿಸಲಾಗುವುದು. ಅನುಸೂಚಿಯನ್ನು ಸಿದ್ಧ ಪಡಿಸಲಾಗುವುದರ ಬಗ್ಗೆ ಭರವಸೆ ಇಲ್ಲವೆಂದು ಹೇಳಲಾಗಿದೆ. ಅನುಸೂಚಿಯೂ ಇರುತ್ತದೆ ಎಂದು ಖಂಡದಲ್ಲಿಯೇ ಹೇಳಲಾಗಿದೆ; ಮತ್ತು ಸಮಗ್ರ ವಿಷಯವನ್ನು ಸಿದ್ಧಪಡಿಸಿದಾಗ ಅದನ್ನು ಸಭೆಯ ಮುಂದೆ ತರಲಾಗುವುದು. ಅನುಸೂಚಿಯ ಜೊತೆಗೆ, ಆ ಖಂಡದ ಕರಡನ್ನು ಸದನದ ಮುಂದೆ ಇಡಲಾಗುವುದು. ಆಗ ಅನುಸೂಚಿಯನ್ನು ಪರಿಷ್ಕರಿಸಲು, ಸೇರಿಸಲು ಅಥವಾ ಮಾರ್ಪಡಿಸಲು ಸಾಕಷ್ಟು ಅವಕಾಶ ಇರುತ್ತದೆ. ಈ ತತ್ತ್ವ ವಿಷಯವು ಪರಿಪೂರ್ಣವಾಗಿಲ್ಲವೆಂದು ಏಕೆ ಹೇಳಲಾಗುತ್ತಿದೆ ಎಂಬುದು ಕಂಡುಬರುತ್ತಿಲ್ಲ. ಈ ಖಂಡದಲ್ಲಿರುವಂತೆಯೇ ತತ್ತ್ವ ವಿಷಯ ಸ್ವಯಂಪೂರ್ಣವಾಗಿದ್ದು ನೀವು

ಅಂಗೀಕರಿಸಬೇಕಾಗುತ್ತದೆ; ಈಗ ನಿಮಗೆ ಪ್ರತಿಯೊಂದು ವಿಷಯಕ್ಕೂ ಭರವಸೆ ಇರುವುದಿಲ್ಲ ಅಲ್ಲವೇ, ಇದು ಅತ್ಯಂತ ಸರಳವಾಗಿದೆ ಮತ್ತು ಇದಕ್ಕೂ ಸಹ ಯಾವುದೇ ಭರವಸೆ ಇರುವುದಿಲ್ಲ. ಒಬ್ಬರು ಗೌರವಾನ್ವಿತ ಸದಸ್ಯರು, ಇದನ್ನು ಸದನವು ಗಂಭೀರವಾಗಿ ಪರಿಗಣಿಸತಕ್ಕದ್ದು ಎಂದು ಹೇಳಿದ್ದಾರೆ. ಚರ್ಚೆಯನ್ನೇ ಹೆಚ್ಚು ಹೆಚ್ಚು ಗಂಭೀರವಾಗಿ ಮುಂದುವರಿಸಿದರೆ, ಈ ಖಂಡದ ಮೇಲಿನ ಚರ್ಚೆಯು ನಡೆಯುತ್ತಿರಲಿಲ್ಲವೆಂದು ನನಗೆ ಅನಿಸುತ್ತದೆ. ಇದೊಂದು ಸರಳ ಪ್ರಸ್ತಾವ, ಇದರಲ್ಲಿ ರಾಜ್ಯಪಾಲರು ಒಡಂಬಡಿಕೆಗಳನ್ನು ಅನುಸರಿಸುವರು ಮತ್ತು ಅದಕ್ಕಾಗಿ ಇದರ ತರುವಾಯ ಅನುಸೂಚಿಯನ್ನು ಕೊಡಲಾಗುವುದು. ರಾಜ್ಯಪಾಲರು ಮಹಾಭಿಯೋಗಕ್ಕೆ (ಇಂಪೀಚ್‌ಮೆಂಟ್‌ಗೆ) ಬದ್ಧರಾಗಿರತಕ್ಕದ್ದು ಎಂಬುದು ನಿಮಗೆ ಗೊತ್ತಿದೆ ಮತ್ತು ಅವರು ನಿರ್ದಿಷ್ಟ ಜವಾಬ್ದಾರಿಗಳ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಾರೆಂಬುದನ್ನು ಮತ್ತು ಅವರಿಗೆ, ಅವರ ಕರ್ತವ್ಯಗಳು ತಿಳಿದಿವೆ ಎಂಬುದನ್ನು ನೀವು ತಿಳಿದಿರಬೇಕು. ಆದ್ದರಿಂದ ಅನುಸೂಚಿಯು, ಅವರು ನಿರ್ವಹಿಸಬೇಕಾದ ನಿರ್ದಿಷ್ಟ ಕರ್ತವ್ಯಗಳನ್ನು ಒಳಗೊಂಡಿರಬೇಕು. ಆದ್ದರಿಂದ ಯಾವ ಯಾವ ಒಡಂಬಡಿಕೆಗಳನ್ನು ಪೂರ್ಣವಾಗಿ ಹಾಗೂ ವಿವರವಾಗಿ ನಿರ್ದಿಷ್ಟ ಪಡಿಸತಕ್ಕದ್ದು ಎಂಬುದು ತಿಳಿದಿರಬೇಕು. ಈ ಸಾಮಾನ್ಯ ತತ್ತ್ವಗಳನ್ನು ನಿಗದಿ ಪಡಿಸುವಾಗ ನಾವು ಈ ಒಡಂಬಡಿಕೆಗಳನ್ನು ವಿವರವಾಗಿ ಪರಿಶೀಲಿಸಿರಲಿಲ್ಲ ಮತ್ತು ಆದ್ದರಿಂದ ಅವುಗಳನ್ನು ಆ ತರುವಾಯ ತಿಳಿಸಲಾಗುತ್ತದೆ. ಆಗ ನಿಮಗೆ ಚರ್ಚಿಸಲು ಸಾಕಷ್ಟು ಅವಕಾಶಗಳಿರುತ್ತವೆ. ಈಗ ಈ ಖಂಡವನ್ನು ಏಕೆ ವಿರೋಧಿಸಬೇಕೆಂಬುದಕ್ಕೆ ಕಾರಣಗಳೇನೂ ನನಗೆ ಕಂಡುಬರುತ್ತಿಲ್ಲ. ಟಿಪ್ಪಣಿಯು ಖಂಡದ ಭಾಗವಾಗಿರುವುದಿಲ್ಲ. ಇದೊಂದು ವಿವರಣಾತ್ಮಕ ಟಿಪ್ಪಣಿ ಅಷ್ಟೇ. ಇದನ್ನು ನೀವು ಬಿಟ್ಟುಬಿಡಬಹುದು ಹಾಗೂ ನೀವು ಪರಿಗಣಿಸುವ ಅಗತ್ಯವಿಲ್ಲ.

**ಶ್ರೀ ಮಹಾವೀರ ತ್ಯಾಗಿ** : ಈಗ ಟಿಪ್ಪಣಿಯನ್ನು ರದ್ದುಪಡಿಸಲಾಗಿದ್ದು ಯಾವುದೇ ಕ್ರಿಯಾಲೋಪ ಇಲ್ಲ, ಟಿಪ್ಪಣಿಯಿಂದಾದ ತಪ್ಪು ತಿಳುವಳಿಕೆ ಈಗ ದೂರವಾಗಿದೆ.

**ಮಾನ್ಯ ಅಧ್ಯಕ್ಷರು** : ವಾಸ್ತವವಾಗಿ, ಸದನದ ಮುಂದಿರುವ ಈ ಕಾಗದ ಪತ್ರಗಳಲ್ಲಿರುವ ಠರಾವಿನ ಭಾಗವಾಗಿರುವ ಟಿಪ್ಪಣಿ ಈಗ ಇಲ್ಲ.

ಮುಂದಿಟ್ಟಿರುವ ವಿಷಯ :

"೧೪ನೇ ಖಂಡವನ್ನು ಅಂಗೀಕರಿಸಬೇಕು."

**ಶ್ರೀ ಬಿ. ಪಾಕರ್ ಸಾಹಿಬ್ ಬಹದೂರ್** : ಮಾನ್ಯರೇ, ನಾನು ಈ ವಿಷಯ ಕುರಿತು ವಿನಂತಿ ಮಾಡಿಕೊಂಡಿದ್ದೆ. ಆ ಪ್ರಶ್ನೆಯು ಕ್ರಿಯಾಲೋಪಕ್ಕೆ ಸಂಬಂಧಿಸಿದ್ದಾಗಿತ್ತು ಮತ್ತು ಈ ಪ್ರಸ್ತಾವವು ಕ್ರಮಬದ್ಧವಾಗಿದೆಯೇ ಅಥವಾ ಇಲ್ಲವೇ ಎಂಬ ಬಗ್ಗೆ ನಿರ್ಣಯ ಕೊಡುವುದು ನಿಮ್ಮ ಕರ್ತವ್ಯವಾಗಿದೆ. ಈ ಖಂಡವನ್ನು ಮತಕ್ಕೆ ಹಾಕುವ ಮೊದಲು ಈ ಅಂಶದ ಬಗ್ಗೆ ನಿರ್ಣಯ ನೀಡಬೇಕೆಂದು ನಾನು ಕೋರುತ್ತೇನೆ.

**ಮಾನ್ಯ ಅಧ್ಯಕ್ಷರು** : ಕ್ರಿಯಾಲೋಪ ಕುರಿತು ಯಾವುದೇ ಪ್ರಶ್ನೆ ಇಲ್ಲವೆಂದು ನಾನು ಭಾವಿಸಿದ್ದೇನೆ. ಆದ್ದರಿಂದ ವಿಷಯವನ್ನು ಮುಂದಿಡಲಾಗಿದೆ.

ಪ್ರಸ್ತಾವವನ್ನು ಅಂಗೀಕರಿಸಲಾಯಿತು.

**ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಜೆ. ಪಟೇಲ್** : ಮಾನ್ಯರೆ, ೨೦ನೇ ಖಂಡವನ್ನು ಮತ್ತು ೨೨ನೇ ಖಂಡವನ್ನು ಪರಿಗಣಿಸಿದ ತರುವಾಯ, ೧೫ನೇ ಖಂಡವನ್ನು ಪರಿಗಣಿಸುವುದು ಹೆಚ್ಚು ಸೂಕ್ತವಾಗುವುದೆಂದು ತಿಳಿದು, ಈಗ ಖಂಡ ೧೫ನ್ನು ಮಂಡಿಸದೇ ಹಾಗೆಯೇ ಇಟ್ಟಿರುವುದಕ್ಕೆ ತಮ್ಮ ಅನುಮತಿ ಕೋರುತ್ತೇನೆ. ಆದ್ದರಿಂದ ೧೫ನೇ ಖಂಡವನ್ನು ಈಗ ಮಂಡಿಸದಿರುವುದಕ್ಕೆ ತಮ್ಮ ಅನುಮತಿ ಕೋರುತ್ತೇನೆ.

**ಮಾನ್ಯ ಅಧ್ಯಕ್ಷರು** : ಖಂಡ ೧೫ನ್ನು ಮಂಡಿಸದೇ ಹಾಗೆಯೇ ಉಳಿಸಲಾಗಿದೆ.

**ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಜೆ. ಪಟೇಲ್** : ಮಾನ್ಯರೆ, ನಾನು ೧೬ನೇ ಖಂಡವನ್ನು ಮಂಡಿಸುತ್ತಿದ್ದೇನೆ.

(೧) ಕಾನೂನು ವಿಷಯಗಳಲ್ಲಿ ಪ್ರಾಂತ್ಯದ ರಾಜ್ಯಪಾಲರಿಗೆ ಸಲಹೆ ನೀಡುವುದಕ್ಕಾಗಿ ಉಚ್ಚನ್ಯಾಯಾಲಯದ ನ್ಯಾಯಾಧೀಶರಾಗಲು ಅರ್ಹರಾದ, ಒಬ್ಬರನ್ನು ಅಡ್ವೋಕೇಟ್ ಜನರಲ್ ಆಗಿ ನೇಮಕಮಾಡತಕ್ಕದ್ದು.

(೨) ಪ್ರಧಾನ ಮಂತ್ರಿಯವರು ರಾಜೀನಾಮೆ ನೀಡಿದಾಗ ಅಡ್ವೋಕೇಟ್ ಜನರಲ್ ಅವರು ನಿವೃತ್ತರಾಗತಕ್ಕದ್ದು. ಆದರೆ, ಹೊಸ ಅಡ್ವೋಕೇಟ್ ಜನರಲ್ ಅವರ ನೇಮಕವಾಗುವವರೆಗೆ ಕರ್ತವ್ಯಗಳನ್ನು ನಿರ್ವಹಿಸುವುದನ್ನು ಮುಂದುವರಿಯಬಹುದು.

(೩) ಅಡ್ವೋಕೇಟ್ ಜನರಲ್ ಅವರು, ರಾಜ್ಯಪಾಲರು ನಿರ್ಧರಿಸಬಹುದಾದಂತೆ ಸಂಭಾವನೆಯನ್ನು ಸ್ವೀಕರಿಸತಕ್ಕದ್ದು.

(ಶ್ರೀಯುತರಾದ ಪಿ. ಕಕ್ಕನ್, ಎಮ್. ಅನಂತಶಯನಮ್ ಅಯ್ಯಂಗಾರ್, ಎಚ್. ವಿ. ಪಾಟಸ್ಕರ್, ಕೆ. ಸಂತಾನಮ್ ಮತ್ತು ಗುಪ್ತನಾಥ ಸಿಂಗ್ ಅವರು ತಮ್ಮ ತಮ್ಮ ತಿದ್ದುಪಡಿಗಳನ್ನು ಮಂಡಿಸಲಿಲ್ಲ).

**ಮಾನ್ಯ ಅಧ್ಯಕ್ಷರು** : ಮುಂದಿಟ್ಟಿರುವ ವಿಷಯ :

"ಖಂಡ ೧೬ನ್ನು ಅಂಗೀಕರಿಸಬೇಕು."

ಪ್ರಸ್ತಾವವನ್ನು ಅಂಗೀಕರಿಸಲಾಯಿತು.

**ಖಂಡ–೧೭**

**ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಜೆ. ಪಟೇಲ್** : ಮಾನ್ಯರೆ, ನಾನು ೧೭ನೇ ಖಂಡವನ್ನು ಮಂಡಿಸಲು ಅನುಮತಿಗಾಗಿ ಪ್ರಾರ್ಥಿಸುತ್ತೇನೆ.

"ಒಂದು ಪ್ರಾಂತ್ಯದ ಸರ್ಕಾರದ ಎಲ್ಲಾ ಕಾರ್ಯಾಂಗದ ಕ್ರಮಗಳನ್ನು ರಾಜ್ಯಪಾಲರ ಹೆಸರಿನಲ್ಲಿ ತೆಗೆದುಕೊಳ್ಳಲಾಗಿದೆ ಎಂದು ತಿಳಿಸತಕ್ಕದ್ದು."

**ಶ್ರೀ ಎಮ್. ಅನಂತಶಯನಮ್ ಅಯ್ಯಂಗಾರ್** : ಮಾನ್ಯರೆ, ನಾನು ತಿದ್ದುಪಡಿಯನ್ನು ಮಂಡಿಸಲು ಪ್ರಸ್ತಾಪಿಸುವುದಿಲ್ಲ.

**ಮಾನ್ಯ ಅಧ್ಯಕ್ಷರು** : ಮುಂದಿಟ್ಟಿರುವ ವಿಷಯ :

"ಖಂಡ ೧೭ನ್ನು ಅಂಗೀಕರಿಸಬೇಕು."

ಪ್ರಸ್ತಾವವನ್ನು ಅಂಗೀಕರಿಸಲಾಯಿತು.

**ಖಂಡ–೧೮**

**ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಜೆ. ಪಟೇಲ್** : ಮಾನ್ಯರೆ, ನಾನು ೧೮ನೇ ಖಂಡವನ್ನು ಮಂಡಿಸಲು ಅನುಮತಿ ಕೋರುತ್ತೇನೆ.

"ರಾಜ್ಯಪಾಲರು, ಪ್ರಾಂತೀಯ ಸರ್ಕಾರದ ವ್ಯವಹಾರಗಳನ್ನು ಹೆಚ್ಚು ಅನುಕೂಲಕರವಾಗಿ ನಿರ್ವಹಿಸಲು ಮತ್ತು ಕರ್ತವ್ಯಗಳನ್ನು ಮಂತ್ರಿಗಳಿಗೆ ಹಂಚಿಕೆ ಮಾಡಲು ನಿಯಮಗಳನ್ನು ರಚಿಸತಕ್ಕದ್ದು."

(ಸನ್ಮಾನ್ಯರಾದ ಕಲಾ ವೆಂಕಟರಾವ್, ಎಂ. ಅನಂತಶಯನಮ್ ಅಯ್ಯಂಗಾರ್ ಮತ್ತು ಆರ್.ಕೆ. ಸಿಧ್ವಾ ಅವರು ತಮ್ಮ ತಮ್ಮ ತಿದ್ದುಪಡಿಗಳನ್ನು ಮಂಡಿಸಲಿಲ್ಲ.)

**ಮಾನ್ಯ ಅಧ್ಯಕ್ಷರು** : ಮುಂದಿಟ್ಟಿರುವ ವಿಷಯ,

"ಖಂಡ ೧೮ನ್ನು ಅಂಗೀಕರಿಸಬೇಕು."

ಪ್ರಸ್ತಾವವನ್ನು ಅಂಗೀಕರಿಸಲಾಯಿತು

ಅನಂತರ ಸಭೆಯನ್ನು ೧೯೪೭ರ ಜುಲೈ ೧೮ನೇ ಶುಕ್ರವಾರದಂದು ಅಪರಾಹ್ನ ೩ ಘಂಟೆಗೆ ಮುಂದೂಡಲಾಯಿತು.

*[ಹಿಂದೂಸ್ತಾನಿ ಭಾಷೆಯಲ್ಲಿರುವ ಭಾಷಣದ ಇಂಗ್ಲಿಷ್ ಅನುವಾದ]